ಕರ್ನಾಟಕ ಸಾಹಿತ್ಯ ಅಕಾಡೆಮಿ

# ಜಿ.ಎಸ್.ಶಿವರುದ್ರಪ್ಪ

ಶೂದ್ರ ಶ್ರೀನಿವಾಸ್



ಅಕಾಡೆಮಿ ಅಧ್ಯಕ್ಷರ ಪರಿಚಯ ಪುಸ್ತಕ ಮಾಲೆ

# ಜಿ.ಎಸ್. ಶಿವರುದ್ರಪ್ಪ


ಪ್ರಧಾನ ಸಂಪಾದಕರು
ಪ್ರೊ. ಮಾಲತಿ ಪಟ್ಟಣಶೆಟ್ಟಿ

ಸಂಪಾದಕರು
ಪ್ರೊ. ಕೆ.ಎಸ್. ಮಧುಸೂದನ

ಲೇಖಕರು
ಶೂದ್ರ ಶ್ರೀನಿವಾಸ್



ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು–560 002.
ದೂರವಾಣಿ:080–22211730/22106460
www.karnatakasahithyaacademy.org
Email: sahithya.academy@gmail.com

**G.S. SHIVARUDRAPPA**
**Arivina Bagilugalannu Teredavaru**
**Written by Shudra Srinivas**
Published by
**C.H.Bhagya**
Registrar
Karnataka Sahithya Academy
Kannada Bhavana
J.C.Road, Bengaluru-560 002.

© ಕರ್ನಾಟಕ ಸಾಹಿತ್ಯ ಅಕಾಡೆಮಿ

| | |
|---|---|
| ಪುಟಗಳು | : xiv+೭೪ |
| ಬೆಲೆ | : ₹ 105/– |
| ಮರುಮುದ್ರಣ | : 2016 |
| ಪ್ರತಿಗಳು | : 500 |
| ಮುಖಪುಟ ವಿನ್ಯಾಸ | : ಅರುಣ್ ಕುಮಾರ್ ಜಿ. |
| Pages | : xiv+74 |
| Price | : ₹ 105/- |
| Reprint | : 2016 |
| Copies | : 500 |

**ಪ್ರಕಾಶಕರು:**
**ಸಿ.ಎಚ್.ಭಾಗ್ಯ**
ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು–560 002.

**ಮುದ್ರಕರು:**
ಸರ್ಕಾರಿ ಕೇಂದ್ರ ಮುದ್ರಣಾಲಯ
ಆರ್.ವಿ.ಕಾಲೇಜ್ ಅಂಚೆ
8ನೇ ಮೈಲಿ, ಮುತ್ತುರಾಯನಗರ
ಜ್ಞಾನಭಾರತಿ, ಮೈಸೂರು ರಸ್ತೆ
ಬೆಂಗಳೂರು–560 059.
080– 28483133 / 28484518

# ಅಧ್ಯಕ್ಷೀಯ ನುಡಿ

ಕರ್ನಾಟಕ ಸಾಹಿತ್ಯ ಅಕಾಡೆಮಿಯು ಸ್ಥಾಪಿತವಾಗಿದ್ದು 1961ರಲ್ಲಿ. ಅದು ಭಾಷಾವಾರು ಪ್ರಾಂತ ರಚನೆಯಾಗಿ ನಾಡು ನುಡಿ, ಸಾಹಿತ್ಯ, ಸಂಸ್ಕೃತಿಗಳ ಬಗ್ಗೆ ಅಪಾರ ಕುತೂಹಲ, ಅಭಿಮಾನ, ಪ್ರೀತಿ ಸ್ಫೋಟಗೊಂಡ ಸಮಯ. ನಾಡು ನುಡಿ, ಸಂಸ್ಕೃತಿಗಳನ್ನು ಹೊಸದಾಗಿ ಕಟ್ಟಿ ಬೆಳೆಸುವ ಹುಮ್ಮಸ್ಸಿನ ದಿನಗಳಾಗಿದ್ದವು ಅವು. ಜನರ ಬೇಡಿಕೆಗೆ ಸ್ಪಂದಿಸಿ ಅಂದಿನ ಸರಕಾರವು ಕರ್ನಾಟಕ ಸಾಹಿತ್ಯ ಅಕಾಡೆಮಿಯನ್ನು ಅಂದು ಶಿಕ್ಷಣ ಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಎಸ್.ಆರ್. ಕಂಠಿಯವರ ಅಧ್ಯಕ್ಷತೆಯಲ್ಲಿ ಪ್ರಾರಂಭಿಸಿದ್ದನ್ನು ನಾವು ಇಂದು ಕೃತಜ್ಞತೆಗಳೊಂದಿಗೆ ನೆನೆಯಬೇಕು. ಆನಂತರದ ಅಧ್ಯಕ್ಷತೆಯನ್ನು ಶ್ರೀ ಕೆ.ವಿ. ಶಂಕರಗೌಡ, ಶ್ರೀ ಕೆ.ಎಚ್. ಶ್ರೀನಿವಾಸ್ ಹಾಗೂ ಶ್ರೀ ಆರ್. ಗುಂಡೂರಾವ್‌ರಂಥ ಹಿರಿಯ ರಾಜಕಾರಣಿಗಳು ಸಾಹಿತ್ಯ ಅಕಾಡೆಮಿಯ ಸೂತ್ರಧಾರಿತ್ವ ವಹಿಸಿ ಸಮರ್ಥವಾಗಿ ಮುನ್ನಡೆಸಿದರು.

ಕನ್ನಡದ ದಿಗ್ಗಜ ಸಾಹಿತಿಗಳಾದ ಶ್ರೀ ಅ.ನ. ಕೃಷ್ಣರಾಯರು, ಶ್ರೀರಂಗರು ಅಕಾಡೆಮಿಗೆ ಭದ್ರಬುನಾದಿ ಹಾಕಲು ಪ್ರಯತ್ನಿಸಿದರು. ನಂತರ ಅಧ್ಯಕ್ಷರಾದ ಡಾ. ಹಾ.ಮಾ. ನಾಯಕ, ಡಾ. ನಿಸಾರ್ ಅಹಮದ್ ಮತ್ತು ಡಾ. ಜಿ.ಎಸ್. ಶಿವರುದ್ರಪ್ಪ ಅವರುಗಳು ಅಕಾಡೆಮಿಗೆ ಖಚಿತವಾದ ರೂಪರೇಷೆಗಳ ಚೌಕಟ್ಟನ್ನು ನಿರ್ಮಿಸಿದರು. ಸಮಯದ ಬೇಡಿಕೆಗಳಿಗನುಸಾರವಾಗಿ ಹೊಸ ಯೋಜನೆಗಳನ್ನು ಕೈಗೊಂಡರು. ಅವರು ಪ್ರಕಟಿಸಿದ ಉತ್ತಮೋತ್ತಮ ಗ್ರಂಥಗಳು ಇಂದಿಗೂ ಬೇಡಿಕೆಯಲ್ಲಿವೆ. ನಂತರ ಅಧ್ಯಕ್ಷ ಸ್ಥಾನ ಸ್ವೀಕರಿಸಿದ ಡಾ. ಬರಗೂರು ರಾಮಚಂದ್ರಪ್ಪ, ಡಾ. ಗಿರಡ್ಡಿ ಗೋವಿಂದರಾಜ, ಶ್ರೀ ಶಾಂತರಸ ಮತ್ತು ಡಾ. ಗುರುಲಿಂಗ ಕಾಪಸೆಯವರಂಥ ಹಿರಿಯ ಸುಪ್ರಸಿದ್ಧ ಸಾಹಿತಿಗಳು ತಮ್ಮ ನಿಷ್ಠೆ, ಪರಿಶ್ರಮಗಳಿಂದಾಗಿ ಅಕಾಡೆಮಿಗೆ ಘನತೆ, ಗೌರವ ತಂದುಕೊಟ್ಟರು.

ಡಾ. ಗೀತಾ ನಾಗಭೂಷಣ ಮತ್ತು ಪ್ರೊ. ಎಂ.ಎಚ್. ಕೃಷ್ಣಯ್ಯರಂಥ ಸಾಹಿತಿ, ವಿದ್ವಾಂಸರು ಸಾಹಿತ್ಯ ಅಕಾಡೆಮಿಯ ತೇರನ್ನು ಮುನ್ನಡೆಸಿದರು. ಇವರೆಲ್ಲರ ಸೇವೆಯನ್ನು ಕೃತಜ್ಞತೆಗಳೊಂದಿಗೆ ಸ್ಮರಿಸುತ್ತೇನೆ.

ನನ್ನ ಅವಧಿಯಲ್ಲಿ (2014–17) ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸುವರ್ಣ ಮಹೋತ್ಸವದ ಉದ್ಘಾಟನೆಯನ್ನು ಶಿವಮೊಗ್ಗೆಯಲ್ಲಿ ಆಗಸ್ಟ್ 3, 2014 ರಂದು ಸಕಲ ಸಡಗರಗಳೊಂದಿಗೆ ನೆರವೇರಿಸಲಾಯ್ತು.

ಡಾ. ಕೆ.ವಿ. ನಾರಾಯಣರಂಥ ಹಿರಿಯ ಸಾಹಿತಿ, ವಿದ್ವಾಂಸರು ಈ ಕಾರ್ಯಕ್ರಮದ ಉದ್ಘಾಟನೆ ಮಾಡಿದರು. ಇದೇ ವೇದಿಕೆಯಲ್ಲಿ ಡಾ. ಗುರುಲಿಂಗ ಕಾಪಸೆ, ಡಾ. ಗಿರಡ್ಡಿ ಗೋವಿಂದರಾಜ ಪ್ರೊ. ಎಂ.ಎಚ್. ಕೃಷ್ಣಯ್ಯ ಅವರನ್ನು ಸನ್ಮಾನಿಸಲಾಯ್ತು (ಡಾ. ನಿಸಾರ್ ಅಹಮದ್ ಮತ್ತು ಡಾ. ಗೀತಾ ನಾಗಭೂಷಣ ಅವರನ್ನು ಅವರ ನಿವಾಸದಲ್ಲಿ ಸನ್ಮಾನಿಸಲಾಯ್ತು). ಆ ನಂತರ ಮುಂದಿನ ಎರಡು ವರ್ಷದ ಅವಧಿಯಲ್ಲಿ ಸುವರ್ಣ ಸಂಭ್ರಮದ ಯೋಜನೆಯಡಿ ಕವಿಗೋಷ್ಠಿ, ಕಮ್ಮಟ ಹಾಗೂ ವಿಚಾರ ಸಂಕಿರಣಗಳನ್ನು ಏರ್ಪಡಿಸಲಾಗಿತ್ತು.

ಸುವರ್ಣ ಮಹೋತ್ಸವದ ಅಂಗವಾಗಿ ಸಮಾರೋಪ ಸಂದರ್ಭದಲ್ಲಿ ನಾಲ್ಕು ವಿಶೇಷ ಕಾರ್ಯಕ್ರಮಗಳನ್ನು ಅನುಷ್ಠಾನದಲ್ಲಿ ತಂದಿದ್ದೇವೆ.

1. ಸಾಹಿತ್ಯ ಅಕಾಡೆಮಿಯ ಹಿಂದಿನ ಹದಿನೆಂಟು ಜನ ಅಧ್ಯಕ್ಷರ ಪರಿಚಯ, ಸಾಹಿತ್ಯ ಸಾಧನೆ ಮತ್ತು ಸಾಹಿತ್ಯ ಅಕಾಡೆಮಿಗೆ ಅವರ ಸೇವೆ ಕುರಿತ ಪುಸ್ತಕ ಮಾಲೆಯನ್ನು ಪ್ರಕಟಿಸಿದ್ದೇನೆ.

2. ಕಳೆದ ಅರ್ಧ ಶತಮಾನದ ಕಾಲಾವಧಿಯಲ್ಲಿ ಸಾಹಿತ್ಯ ಅಕಾಡೆಮಿಯ ಕೆಲಸ ಕಾರ್ಯಗಳು ಜನಮನದ ಮೇಲೆ ಬೀರಿದ ಪರಿಣಾಮ ಕುರಿತ "ಪರಿಣಾಮ ಅಧ್ಯಯನ" ಗ್ರಂಥವನ್ನು ಪ್ರಕಟಿಸಿದ್ದೇನೆ.

3. ಸಾಹಿತ್ಯ ಅಕಾಡೆಮಿಯನ್ನು ಕುರಿತ ಸಾಕ್ಷ್ಯಚಿತ್ರ ನಿರ್ಮಾಣ.

4. ಕನ್ನಡ ಸಾಹಿತ್ಯ ಸಂವೇದನೆ ಕುರಿತ ರೂಪಕದ ರಂಗಪ್ರಯೋಗ.

ಸುವರ್ಣ ಮಹೋತ್ಸವದ ಉದ್ಘಾಟನೆ ಹಾಗೂ ಈ ಮಹೋತ್ಸವದ ನೆನಪಿಗಾಗಿ ಹಮ್ಮಿಕೊಂಡಿದ್ದ ಸರಣಿ ಕಾರ್ಯಕ್ರಮಗಳಲ್ಲದೆ, ಈಗ ಸಮಾರೋಪ

ಸಮಾರಂಭಗಳಲ್ಲಿ ಪಾಲ್ಗೊಂಡ ಎಲ್ಲ ಸಾಹಿತಿಗಳಿಗೆ, ವಿದ್ವಾಂಸರಿಗೆ, ಕಲಾವಿದರಿಗೆ ಮತ್ತು ಸುವರ್ಣ ಮಹೋತ್ಸವದ ಎಲ್ಲ ಕಾರ್ಯಕ್ರಮಗಳಿಗೆ ಸಲಹೆ ನೀಡಿದ ತಜ್ಞ ಸಾಹಿತಿಗಳಾದ ಡಾ. ಹಂ.ಪ. ನಾಗರಾಜಯ್ಯ, ಡಾ. ಕೆ.ವೈ. ನಾರಾಯಣಸ್ವಾಮಿ ಮತ್ತು ಅಕಾಡೆಮಿಯ ಸದಸ್ಯರಾದ ಶ್ರೀಮತಿ ಬಿ.ಟಿ. ಜಾಹ್ನವಿ ಅವರುಗಳನ್ನು ಮನಃಪೂರ್ವಕ ನೆನೆಯುತ್ತೇನೆ. ನಮ್ಮ ಕಾರ್ಯಚಟುವಟಿಕೆಗಳಿಗೆ ಸಹಕಾರ ನೀಡುತ್ತಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಕೆ.ಎ. ದಯಾನಂದ ಮತ್ತು ಜಂಟಿ ನಿರ್ದೇಶಕರಾದ ಶ್ರೀ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ ಅವರುಗಳಿಗೆ ಈ ಸಂದರ್ಭದಲ್ಲಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ಎಲ್ಲ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನದಲ್ಲಿ ತರಲು ಅಪಾರ ಪರಿಶ್ರಮ ವಹಿಸಿದ ರಿಜಿಸ್ಟ್ರಾರರಾದ ಶ್ರೀಮತಿ ಸಿ.ಎಚ್. ಭಾಗ್ಯ ಅವರಿಗೂ ಹೃದಯಪೂರ್ವಕ ವಂದನೆಗಳು. ಸಾಹಿತ್ಯ ಅಕಾಡೆಮಿಯ ಸಿಬ್ಬಂದಿಗಳಾದ ಶ್ರೀಮತಿ ಟಿ. ಸೌಭಾಗ್ಯ, ಶ್ರೀಮತಿ ವಿಜಯಲಕ್ಷ್ಮಿ, ಶ್ರೀ ವಿ. ಹರೀಶ್‌ಕುಮಾರ್, ಶ್ರೀ ಕೃಷ್ಣಪ್ಪ ಡಿ., ಶ್ರೀ ಹರೀಶ್ ಮತ್ತು ಶ್ರೀಮತಿ ಎಸ್.ಜಿ. ಸುಚಿತ್ರ ಇವರೆಲ್ಲರೂ ಕೈಜೋಡಿಸದಿದ್ದರೆ ಇಂಥ ಬೃಹತ್ ಕಾರ್ಯಕ್ರಮಗಳು ಅಸಾಧ್ಯ. ಇವರೆಲ್ಲರ ನಿಷ್ಠೆ, ಪರಿಶ್ರಮಗಳನ್ನು ಮನಃಪೂರ್ವಕ ನೆನೆಯುತ್ತೇನೆ. ಹಾಗೆಯೇ ಮುದ್ರಣ ಕಾರ್ಯ ನಿರ್ವಹಿಸಿದ ಸರ್ಕಾರಿ ಮುದ್ರಣಾಲಯದ ನಿರ್ದೇಶಕರು ಹಾಗೂ ಅಧಿಕಾರಿ/ ಸಿಬ್ಬಂದಿಗಳೆಲ್ಲರನ್ನೂ ನಾನಿಲ್ಲಿ ಕೃತಜ್ಞತೆಗಳೊಂದಿಗೆ ನೆನೆಯುತ್ತೇನೆ.

2016

ಮಾಲತಿ ಪಟ್ಟಣಶೆಟ್ಟಿ
ಅಧ್ಯಕ್ಷರು

# ಸಂಪಾದಕೀಯ

ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಗೆ ಇದು ಅಪರಂಜಿ ವರುಷ. ಐವತ್ತು ವರುಷ ತುಂಬಿದ ಈ ಸಾರ್ಥಕ ಸಾಧನೆಯ ಸಂದರ್ಭದಲ್ಲಿ ಸಂಸ್ಥೆಯು ತನ್ನನ್ನು ಈ ಎತ್ತರಕ್ಕೆ ಬೆಳೆಸಿದ ಹಿಂದಿನ ಅಧ್ಯಕ್ಷರುಗಳ ಸಾಧನೆಗಳನ್ನು ಕುರಿತು ಹೊತ್ತಗೆಗಳನ್ನು ಹೊರತರುತ್ತಿರುವುದು ಸಂತಸದ ಸಂಗತಿ. ಆರಂಭಕ್ಕೆ ಮಂತ್ರಿ ಮಹೋದಯರುಗಳು ಅಧ್ಯಕ್ಷರಾಗಿದ್ದುಕೊಂಡು ಸಂಸ್ಥೆಯನ್ನು ಮುನ್ನೋಟದಿಂದ ನಡೆಸಿದರು. ನಂತರ ಅಧ್ಯಕ್ಷರ ಸ್ಥಾನಕ್ಕೆ ನಾಡಿನ ಹಿರಿಯ ಸಾಹಿತಿ ಮುತ್ಸದ್ದಿಗಳನ್ನು ಆಯ್ಕೆ ಮಾಡುವ ಕ್ರಮ ಜಾರಿಗೆ ಬಂತು. ಹೀಗಾಗಿ ಈ ಪ್ರತಿಷ್ಠಿತ ಅಕಾಡೆಮಿಗೆ ಇದುವರೆಗೆ 18 ಮಂದಿ ಅಧ್ಯಕ್ಷರಾಗಿ ಅಕಾಡೆಮಿಯನ್ನು ಭಾರತ ದೇಶದ ಗಮನಾರ್ಹ ಸಾಹಿತ್ಯ ಸಂಸ್ಥೆಯನ್ನಾಗಿ ಬೆಳೆಸಿದ್ದಾರೆ.

'ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರ ಪರಿಚಯ ಪುಸ್ತಕ ಮಾಲೆ' ಎನ್ನುವ ನಾಮನಿರ್ದೇಶನದಡಿ ಈ ಪುಸ್ತಕಗಳನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಯು ಪ್ರಕಟಿಸುತ್ತಿದೆ. ಒಂದು ಸಂಸ್ಥೆ ನಾಡಿನೊಳಗೆ ಸರ್ವಾಂಗೀಣವಾಗಿ, ಸಮೃದ್ಧವಾಗಿ ಬೆಳೆದು ನಾಡಿನ ಜನರ ಮೇಲೆ ದೀರ್ಘಕಾಲಿಕ ಪ್ರಭಾವವನ್ನು ಬೀರಬೇಕಾದರೆ ಅದರ ಮುಂಚೂಣಿಯಲ್ಲಿ ನಿಂತು ನಡೆಸುವ ಅಧ್ಯಕ್ಷೀಯ ಸ್ಥಾನದ ಪಾತ್ರ ಮಹತ್ವವಾದದ್ದು. ಹಾಗೆಯೇ ಒಂದು ಸಂಸ್ಥೆಯ ಇತಿಹಾಸದಲ್ಲಿ ಐವತ್ತು ವರ್ಷಗಳ ಕಾಲಮಾನ ಕೂಡ ಒಂದು ಮೈಲಿಗಲ್ಲು. ಹೀಗಾಗಿ ಇಂತಹ ಸಂದರ್ಭದಲ್ಲಿ ಅಕಾಡೆಮಿಯನ್ನು ಸಮರ್ಥವಾಗಿ ನಡೆಸಿದ ಹಿಂದಿನ ಅಧ್ಯಕ್ಷರುಗಳಾಗಿದ್ದ ನಾಡಿನ ಪ್ರಸಿದ್ಧ ಸಾಹಿತಿಗಳಾದ ಶ್ರೀ ಅ.ನ. ಕೃಷ್ಣರಾಯ, ಶ್ರೀ ಆದ್ಯ ರಂಗಾಚಾರ್ಯ, ಶ್ರೀ ಹಾ.ಮಾ. ನಾಯಕ, ಪ್ರೊ. ಕೆ.ಎಸ್. ನಿಸಾರ್ ಅಹಮದ್, ಡಾ. ಜಿ.ಎಸ್. ಶಿವರುದ್ರಪ್ಪ, ಡಾ. ಬರಗೂರು ರಾಮಚಂದ್ರಪ್ಪ, ಡಾ. ಗಿರಡ್ಡಿ ಗೋವಿಂದರಾಜ, ಶ್ರೀ ಗುರುಲಿಂಗ ಕಾಪಸೆ, ಡಾ. ರಾ.ಶಿ. (ಎಂ. ಶಿವರಾಂ), ಡಾ. ಶಾಂತರಸ, ನಾಡೋಜ ಗೀತಾ ನಾಗಭೂಷಣ, ಪ್ರೊ. ಎಂ.ಎಚ್. ಕೃಷ್ಣಯ್ಯ ಮುಂತಾದವರುಗಳ ಸಾಧನೆಗಳನ್ನು ಕುರಿತು ಪುಸ್ತಕಗಳನ್ನು ಪ್ರಕಟಿಸುತ್ತಿರುವುದು ಸೂಕ್ತವೂ, ಸಮಂಜಸವೂ ಆಗಿದೆ. ಈ ಕೃತಿಗಳನ್ನು ಶ್ರದ್ಧೆಯಿಂದ ರಚಿಸಿದ ನಾಡಿನ ವಿವಿಧ ಭಾಗದ ಬರಹಗಾರರಾದ ಶಾ.ಮಂ. ಕೃಷ್ಣರಾವ್, ಕೆ.ಎಂ. ವಿಜಯಲಕ್ಷ್ಮಿ, ಡಾ. ಪದ್ಮಾಶೇಖರ್, ಡಾ. ರಾಮಚಂದ್ರ ಗಣಾಪುರ, ಶೂದ್ರ ಶ್ರೀನಿವಾಸ್, ಎಸ್. ಮಾರುತಿ,

ಪ್ರೊ. ಮಲ್ಲಿಕಾರ್ಜುನ ಹಿರೇಮಠ, ಡಾ. ಗುರುಪಾದ ಮರಿಗುದ್ದಿ, ಡಾ. ಪ್ರಭು ಖಾನಾಪುರೆ, ಡಾ. ಪ್ರಮೀಳಾ ಮಾಧವ್, ಡಾ. ಎಲ್.ಜಿ. ಮೀರಾ ಈ ಎಲ್ಲರಿಗೂ ಕೃತಜ್ಞತೆಗಳು.

ಈ ಜವಾಬ್ದಾರಿಯನ್ನು ನನಗಿತ್ತು ಈ ಕಾರ್ಯದಲ್ಲಿ ಸಂಪೂರ್ಣ ನೆರವು ನೀಡಿದ ಅಕಾಡೆಮಿಯ ಅಧ್ಯಕ್ಷರಾದ ಪ್ರೊ. ಮಾಲತಿ ಪಟ್ಟಣಶೆಟ್ಟಿ, ರಿಜಿಸ್ಟ್ರಾರ್ ಸಿ.ಎಚ್. ಭಾಗ್ಯ ಹಾಗೂ ಅಕಾಡೆಮಿ ಸಿಬ್ಬಂದಿ ವರ್ಗಕ್ಕೆ ನನ್ನ ನಮ್ರ ಪ್ರಣಾಮಗಳು.

ಪ್ರೊ. ಕೆ.ಎಸ್. ಮಧುಸೂದನ
ಸಂಪಾದಕರು

# ಲೇಖಕರ ಮಾತು

ಕರ್ನಾಟಕ ಸಾಹಿತ್ಯ ಅಕಾಡೆಮಿಯು ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಅವರನ್ನು ಕುರಿತು ಒಂದು ಪುಟ್ಟ ಕೃತಿಯನ್ನು ಬರೆದುಕೊಡಲು ಕೇಳಿದರು. ಸಂತೋಷದಿಂದ ಒಪ್ಪಿಕೊಂಡೆ. ಯಾಕೆಂದರೆ ಅವರ ಬಗ್ಗೆ ಬರೆಯುವುದು ಒಂದು ಗೌರವದ ಸಂಕೇತವೆಂದು ಭಾವಿಸಿದೆ. ಅದರಲ್ಲೂ ಅವರು ಅಕಾಡೆಮಿಯ ಅಧ್ಯಕ್ಷರಾಗಿ ಮೂರು ವರ್ಷ ಶ್ರೀಮಂತವಾದ ನೆನಪುಗಳನ್ನು ತುಂಬಿದವರು. ಜೊತೆಗೆ ನಮ್ಮ ಸಾಹಿತ್ಯ ಸಂಸ್ಕೃತಿಗೆ ಸಂಬಂಧಿಸಿದಂತೆ ಕೊಟ್ಟಿರುವ ಕೊಡುಗೆ ಚಾರಿತ್ರಿಕವಾದದ್ದು. ಅವರ ಸಾಕ್ಷಿಪ್ರಜ್ಞೆಯ ವ್ಯಕ್ತಿತ್ವದ ಜೊತೆಗೆ ಸುಮಾರು ನಾಲ್ಕು ದಶಕಗಳಿಗೂ ಮೇಲ್ಪಟ್ಟು ನಡೆದಾಡಿದೆ ಎಂಬುದೂ ಕೂಡ ಮತ್ತೆ ಮತ್ತೆ ಮೆಲುಕು ಹಾಕುವಂಥದ್ದು. ಒಂದು ದೃಷ್ಟಿಯಿಂದ ಅದು ಅರ್ಥೈಸುವಿಕೆಗಿಂತ ಮೀರಿದ್ದು ಎಂದು ಭಾವಿಸುವೆ. ಯಾಕೆಂದರೆ ಅವರ ಒಟ್ಟು ವ್ಯಕ್ತಿತ್ವ ಅಷ್ಟೊಂದು ಹಿರಿದಾದದ್ದು.

ಈ ನೆಲೆಯಲ್ಲಿ 'ಅರಿವಿನ ಬಾಗಿಲುಗಳನ್ನು ತೆರೆದವರು' ಎಂಬ ನೋಟವನ್ನು ಮುಂದಿಟ್ಟುಕೊಂಡು 'ಜಿ.ಎಸ್.ಎಸ್.' ಎಂಬ ಬಹುದೊಡ್ಡ ಕವಿ, ಲೇಖಕ ಹಾಗೂ ಸಂಸ್ಕೃತಿ ಚಿಂತಕರನ್ನು ಹೇಗೆ ಗ್ರಹಿಸಲು ಪ್ರಯತ್ನಿಸಿದೆ ಎಂಬುದನ್ನು ಇಲ್ಲಿ ದಾಖಲಿಸಲು ಪ್ರಯತ್ನಿಸಿದ್ದೇನೆ. ಅವರ ಜೀವನ ಸಂಬಂಧಗಳು ಬಹುಮುಖೀ ಯಾದದ್ದಾಗಿತ್ತು. ಸಾಹಿತ್ಯದ ಒಳಗೆ ಹಾಗೂ ಹೊರಗೆ ಸಾಮಾರಸ್ಯದ ವ್ಯಾಪಕತೆಯನ್ನು ವಿಸ್ತರಿಸಲು ಅಪೂರ್ವ ತುಡಿತವನ್ನು ಹೊಂದಿದ್ದವರು. ಕುವೆಂಪು ಅವರಂಥ ಶ್ರೀಮಂತ ವ್ಯಕ್ತಿತ್ವದ ನೆರಳಿನಲ್ಲಿ ಬೆಳೆದಿದ್ದರಿಂದ; ಅದನ್ನು ಸ್ಮರಿಸಿಕೊಳ್ಳುತ್ತಲೇ ತಮ್ಮ ಕಾರ್ಯಕ್ಷೇತ್ರಕ್ಕೆ ಚೈತನ್ಯವನ್ನು ತುಂಬಿಕೊಳ್ಳುತ್ತ ಹೋದವರು. ಇದರಿಂದ ಎಂತೆಂಥ ಗಂಭೀರ ಮನಸ್ಸುಗಳು ಬೆಳೆಯಲು ಸಾಧ್ಯವಾಯಿತು ಎಂಬುದನ್ನು ಅವಲೋಕಿಸಿಕೊಳ್ಳುವುದಕ್ಕೆ ಖುಷಿಯಾಗುತ್ತದೆ. ಆ ಸಂತೋಷ ಮತ್ತು ಸಂಭ್ರಮದಿಂದಲೇ ಅವರ ಬದುಕಿನ ಘಟನೆಗಳನ್ನು ಕಟ್ಟಿಕೊಡಲು ಪ್ರಯತ್ನಿಸಿದ್ದೇನೆ. ಸ್ವಲ್ಪ ದೀರ್ಘವಾಯಿತು ಅನ್ನಿಸಿದರೂ; ಅದರ ಹತ್ತರಷ್ಟು ಬರೆಸಿಕೊಳ್ಳುವ ವ್ಯಾಪ್ತಿಯನ್ನು ಹೊಂದಿರುವಂಥವರು.

ಇನ್ನು ಸಣ್ಣ ಪ್ರಮಾಣದಲ್ಲಿ ಅವರ ಕವಿತೆಗಳನ್ನು, ಕಾವ್ಯ ಮೀಮಾಂಸೆ ಹಾಗೂ ಸೌಂದರ್ಯ ಮೀಮಾಂಸೆಯನ್ನು ನನ್ನ ಚಿಂತನೆಯ ಚೌಕಟ್ಟಿನಲ್ಲಿ ವ್ಯಾಖ್ಯಾನಿಸಲು ಪ್ರಯತ್ನಿಸಿದ್ದೇನೆ. ಜೊತೆಗೆ ಅವರ ಗದ್ಯ ಬರವಣಿಗೆಯನ್ನು,

ಪುಟಗಳ ಮಿತಿಯ ಕಾರಣಕ್ಕಾಗಿ; ಒಂದು ವಿಧದ ಅತೃಪ್ತಿಯಿಂದಲೇ ಸಂಕ್ಷಿಪ್ತಗೊಳಿಸಲು ಪ್ರಯತ್ನಿಸಿದ್ದೇನೆ. ಇದನ್ನು ಬರೆಯುವ ಗೌರವವನ್ನು ಕೊಟ್ಟಿದ್ದಕ್ಕೆ ಅಕಾಡೆಮಿಯ ಅಧ್ಯಕ್ಷರಾದ ಪ್ರೊ. ಮಾಲತಿ ಪಟ್ಟಣಶೆಟ್ಟಿ ಅವರಿಗೆ ನಾನು ಋಣಿಯಾಗಿರಲೇ ಬೇಕು. ನಾನು ಅವರ ಜೊತೆ ಅಕಾಡೆಮಿಯ ಸದಸ್ಯನಾಗಿದ್ದವನು. ಅವರ ತುಂಬು ಲವಲವಿಕೆಯ ಸಾಹಿತ್ಯ, ಸಾಂಸ್ಕೃತಿಕ ಮನಸ್ಸನ್ನು ಕಂಡವನು. ಈ ಕೃತಿಯನ್ನು ಸಿದ್ಧಪಡಿಸಿಕೊಡಲು ತಡಮಾಡಿದ್ದಕ್ಕೆ ಅವರ ಕ್ಷಮೆಯನ್ನು ಕೇಳುವೆ. ಹಾಗೆಯೇ ಅಕಾಡೆಮಿಯ ರಿಜಿಸ್ಟ್ರಾರ್ ಆದ ಶ್ರೀಮತಿ ಸಿ.ಎಚ್. ಭಾಗ್ಯ ಹಾಗೂ ಗೆಳೆಯರಾದ ಕೆ.ಎಸ್. ಮಧುಸೂದನ ಅವರಿಗೆ ಋಣಿಯಾಗಿರಲೇ ಬೇಕು. ಇದನ್ನು ಬರೆಯುವ ಹಂತದಲ್ಲಿ ನನ್ನ ಕೆಲವು ಸಂದೇಹಗಳಿಗೆ ದೂರವಾಣಿಯಲ್ಲಿ ವಿವರಿಸುತ್ತಿದ್ದ ಸಾರ್ವಕಾಲಿಕ ಗೆಳೆಯನಂತಿರುವ ಡಾ॥ ಹೆಚ್.ಎಸ್. ಮಾಧವ ರಾವ್ ಅವರನ್ನು, ಸ್ಮರಿಸಿಕೊಳ್ಳುವೆ. ಹಾಗೆಯೇ ಆತ್ಮೀಯರಾದ ಜಯಶಂಕರ್ ಹಲಗೂರು ಅವರನ್ನು, ಜೊತೆಗೆ ಅಚ್ಚುಕಟ್ಟಾಗಿ ಡಿ.ಟಿ.ಪಿ. ಮೂಲಕ ಪುಟಗಳನ್ನು ಸಿದ್ಧಪಡಿಸಿದ ವೇಣುಕುಮಾರ್ ಅವರನ್ನು.

೩೦-೧೨-೨೦೧೫ **ಶೂದ್ರ ಶ್ರೀನಿವಾಸ್**

# ಪರಿವಿಡಿ


ಅಧ್ಯಕ್ಷೀಯ ನುಡಿ iii

ಸಂಪಾದಕೀಯ vii

ಲೇಖಕರ ಮಾತು ix

1. ಅರಿವಿನ ಬಾಗಿಲುಗಳನ್ನು ತೆರೆದವರು 1–64

2. ಜಿ.ಎಸ್.ಎಸ್. ಅವರ ನೋಟದ ವೈವಿಧ್ಯತೆ 65–74

*"ನೆನಪುಗಳ ಮೇಲೆ ನೆನಪುಗಳು ಒಂದೇ ಸಮನೆ ಜಮಾಯಿಸುತ್ತ, ಒಳಮನೆಯ ಉಗ್ರಾಣ ಅಸ್ತ ವ್ಯಸ್ತ ಹಂತಹಂತಗಳಲ್ಲಿ ಕಂತೆಕಂತೆಯು ಸರುಕು. ಹಗುರಾಗಬೇಕು ಎಲ್ಲವನ್ನೂ ತೊರೆದು: ತನ್ನಹಂಕಾರವನ್ನು, ಪದವಿ ಪ್ರತಿಷ್ಠೆಗಳನ್ನು, ನಿರಾಳವಾಗಿ ನಿಲ್ಲಬೇಕು. ಶಿಶಿರದಲ್ಲಿ ಮರ ಕಳಚಿಕೊಳ್ಳುವ ಹಾಗೆ ತನ್ನೆಲ್ಲ ಎಲೆಗಳನ್ನು ನೆನೆಯಬೇಕು, ಬೆಳುಗೊಳದ ಬೆಟ್ಟದ ಮೇಲೆ ನಿಂತ ಆ ಗೊಮ್ಮಟನ ಮುಗುಳು ನಗೆಯನ್ನು"*

**– ಜಿ.ಎಸ್. ಶಿವರುದ್ರಪ್ಪ**

# ಅರಿವಿನ ಬಾಗಿಲುಗಳನ್ನು ತೆರೆದವರು

**"ಕ**ನ್ನಡಿಗರಾಗಿ ನಮಗೆ ನಮ್ಮ ಭಾಷೆ–ಸಾಹಿತ್ಯ–ಸಂಸ್ಕೃತಿಗಳ ಬಗೆಗೆ ಎಷ್ಟೇ ಅಭಿಮಾನವಿದ್ದರೂ, ಸಾಹಿತ್ಯ ನಿಜವಾದ ಅಧ್ಯಯನ ಹಾಗೂ ಅರ್ಥವಂತಿಕೆಗೆ ಅಷ್ಟೇ ಸಾಲದು. ಅದರಲ್ಲಿಯೂ ಕನ್ನಡ ಸಾಹಿತ್ಯ ಇತರೆ ಭಾರತೀಯ ಭಾಷಾ ಸಾಹಿತ್ಯಗಳಂತೆ ನಿಜವಾಗಿಯೂ ಬದಲಾದದ್ದು, ನಮ್ಮ ದೃಷ್ಟಿ ಧೋರಣೆಗಳಲ್ಲಿ ಮೌಲಿಕವಾದ ಹೊಸತನ ಮೂಡಿಸಿದ್ದು ಪಾಶ್ಚಾತ್ಯ ಸಾಹಿತ್ಯ ಹಾಗೂ ಸಾಹಿತ್ಯ ಚಿಂತನೆಗಳ ಪ್ರಭಾವದಿಂದಲೇ ಎಂಬುದನ್ನು ನೆನೆದಾಗ, ನಮ್ಮ ಸಾಹಿತ್ಯ ಮತ್ತು ವಿಚಾರಗಳನ್ನು ಪಶ್ಚಿಮದ ವಿಚಾರಗಳೊಂದಿಗೆ ಹೋಲಿಸಿ, ಅದರ ಋಣಗಳನ್ನು, ಗುಣಗಳನ್ನು, ನೆಲೆಗಳನ್ನು , ಬೆಲೆಗಳನ್ನು ಪರಿಶೀಲಿಸುವುದು ಅತ್ಯಂತ ಅಗತ್ಯವಾಗಿದೆ"

–ಕಾವ್ಯಾರ್ಥ **ಚಿಂತನ** ಕೃತಿಯಿಂದ

ಜಿ.ಎಸ್.ಎಸ್. ಎಂದಾಕ್ಷಣ ಹತ್ತಾರು ಚಿತ್ರಣಗಳು ಏಕಕಾಲಕ್ಕೆ ಮುಖಾಮುಖಿ ಯಾಗುತ್ತದೆ. ಈ ಚಿತ್ರಣ ಆತ್ಮೀಯವಾಗಿದ್ದು; ನಲವತ್ತೊಂದು ವರ್ಷಗಳ ಹಿಂದೆ. ಆಗ ಅವರು ನಮಗೆ ಜಿ.ಎಸ್.ಎಸ್. ಆಗಿರಲಿಲ್ಲ. ಒಬ್ಬ ಕವಿಯಾಗಿದ್ದರು. ಆ ಕಾಲಕ್ಕೆ ಸುದ್ದಿಯಾಗಿದ್ದರು. ಹಾಗೆಯೇ ಕುವೆಂಪು ಅವರಂಥ ಎತ್ತರದ ಕವಿಯ ಮತ್ತು ಸಾಮಾಜಿಕ ಸ್ಥಿತ್ಯಂತರಗಳ ಬಗ್ಗೆ 'ಅದು ಹೀಗೆ ಇದು ಹೀಗೆ' ಎಂದು ಹೇಳಬಲ್ಲವರು ಎಂದು ನಮ್ಮ ಮನಸ್ಸಿನಲ್ಲಿ ದಟ್ಟವಾಗಿದ್ದವರು; ಆಪ್ತ ಶಿಷ್ಯರು ಎಂಬುದು ಒಂದು ಪ್ರಮಾಣ ಪತ್ರವಾಗಿ ಪರಿಣಮಿಸಿತ್ತು. ಕವಿಯೊಬ್ಬರು ಏನೂ ಹೇಳಿದರೂ ವೇದವಾಕ್ಯವೆಂದು ಸ್ವೀಕರಿಸುವ ಮನಸ್ಥಿತಿಯಲ್ಲಿದ್ದವನು. ಇಂದಿಗೆ ಎಪ್ಪತ್ತು ವರ್ಷಗಳ ಹಿಂದೆ ರಚಿಸಿದ ಅಲ್ಲಿ–ಇಲ್ಲಿ ಕವಿತೆಯ, ಅರ್ಥಾತ್ ಸಾಮಗಾನ ಸಂಕಲನದ ಸಾಲುಗಳವು. ಕೂತಲ್ಲಿ ನಿಂತಲ್ಲಿ, ನಡೆದಾಡುವಲ್ಲಿ ಗುನುಗುನಿಸುತ್ತಿದ್ದ ಧ್ವನಿ.

**"ಉಡುಗಣ ವೇಷ್ಟಿತ**
**ಚಂದ್ರ ಸುಶೋಭಿತ**
**ದಿವ್ಯಾಂಬರ ಸಂಚಾರಿ**
**ಕಣ್ಣ ನೀರಿನಲ್ಲಿ**
**ಮಣ್ಣ ಧೂಳಿನಲ್ಲಿ**
**ಹೊರಳುತ್ತಿರುವವರ ಸಂಚಾರಿ"**

ಹಾಗೆಯೇ ಈ ಕವಿತೆಯ ಮುಂದುವರಿದ

> **"ದೀನ ಅನಾಥರ**
> **ದುಃಖಿ ದರಿದ್ರರ**
> **ಮುರುಕು ಗುಡಿಸಿಲಲಿ ಉಪವಾಸಿ"**

ಎಂಬ ಸಾಲುಗಳು ಹತ್ತಾರು ರೀತಿಯ ಭಾವನೆಗಳು, ಉದ್ದೀಪನಗೊಳಿಸುತ್ತಿದ್ದವು. ಇಂಥದ್ದನ್ನು ಸೃಷ್ಟಿಸಿದ ಕವಿಯೊಬ್ಬರು ನಮಗೆ ಗುರುಗಳಾಗಿ ಬರುತ್ತಾರೆ ಎಂಬುದನ್ನು ಪ್ರೊ. ರಂ.ಶ್ರೀ ಮುಗಳಿ, ಲಕ್ಷ್ಮೀನಾರಾಯಣ ಭಟ್ಟ, ಕೆ. ಮರುಳಸಿದ್ದಪ್ಪ ಮುಂತಾದವರ ಮೆಚ್ಚಿನ ಮೇಸ್ಟ್ರುಗಳ ಬಾಯಿಂದ ಪಾಠ ಮಾಡುವ ಸಮಯದಲ್ಲಿ ಸಾಕಷ್ಟು ಬಾರಿ ಕೇಳಿಸಿಕೊಂಡಿದ್ದೆವು.

ಹೈದರಬಾದಿನ ಉಸ್ಮಾನಿಯ ವಿಶ್ವವಿದ್ಯಾಲಯದಿಂದ ಬಂದೇ ಬಿಟ್ಟರು. ಕಚ್ಚೆ ಪಂಚೆ, ಕ್ಲೋಸ್ ಕಾಲರ್‌ನ ಕಂದು ಬಣ್ಣದ ಕೋಟು, ಕನ್ನಡಕಧಾರಿ, ಗುರುಸದೃಶ ವ್ಯಕ್ತಿತ್ವ. ಪಾಠ ಮಾಡುತ್ತಿದ್ದ ವೈಖರಿಯೇ ಅಪೂರ್ವವಾದದ್ದು. ಅಕ್ಷರಮಟ್ಟಿಗೆ ವಿದ್ಯಾರ್ಥಿಗಳನ್ನು ವಿಷಯದ ಕಡೆಗೆ ಸೆಳೆಯುತ್ತಿದ್ದರು. ಪಠ್ಯ ಪುಸ್ತಕದ ಜೊತೆಗೆ ಪುಟ್ಟಪುಟ್ಟ ಚೀಟಿಗಳಲ್ಲಿ ಪಠ್ಯಕ್ಕೆ ಸಂಬಂಧಿಸಿದ ಪೂರಕ ಮಾಹಿತಿಯನ್ನು ಯಾವಾಗಲೂ ಸಿದ್ಧಮಾಡಿಕೊಂಡೇ ಬರುತ್ತಿದ್ದರು. ನಿರರ್ಗಳವಾಗಿ ಎಷ್ಟು ಚೆನ್ನಾಗಿ ಮುಂದೆ ಕೂತವರಿಗೆ ತಲುಪಿಸುತ್ತಿದ್ದರು. ಈ ದೃಷ್ಟಿಯಿಂದ ನಾಲ್ಕು ದಶಕಗಳಿಗೂ ಮೇಲ್ಪಟ್ಟು ಅವರ ಜೊತೆ ಎಂತೆಂಥದೋ ಸಭೆ ಸಮಾರಂಭಗಳಲ್ಲಿ ಭಾಗವಹಿಸಿರುವೆ. ಆಗೆಲ್ಲ ಗುರುವಿನ ಸ್ಥಾನದಲ್ಲಿ ನಿಂತು; ಅರಿವನ್ನು ವಿಸ್ತರಿಸುವಲ್ಲಿ ಎಂದೂ ವಂಚಿತರಾದವರಲ್ಲ. ಇದರಿಂದ ಒಂದು ವಿಧದ ಘನತೆ ಸ್ವಾಭಾವಿಕವಾಗಿಯೇ ಆವರಿಸಿಕೊಳ್ಳುತ್ತಿತ್ತು. ಅಷ್ಟರ ಮಟ್ಟಿಗೆ ಶಿಸ್ತಿನ ಚೌಕಟ್ಟು; ಮಾನಸಿಕ ವೈಶಾಲ್ಯತೆಯ ಮೂಲಕ ಪ್ರಾಪ್ತವಾಗಿ ಬಿಡುತ್ತಿತ್ತು. ಇಂಥ ಗುಣಾತ್ಮಕತೆಯು ಕುವೆಂಪು ಅವರಿಂದ ದತ್ತಗೊಂಡಿದ್ದು ಎಂಬುದು ಪರೋಕ್ಷವಾಗಿ ಸೂಚನೆಗೊಳ್ಳುತ್ತಲೇ ಇತ್ತು. ಅದು ಧ್ವನಿಪೂರ್ಣತೆಯಿಂದ. ಜ್ಞಾನದ ತೃಷೆಯು ಒಮ್ಮೆ ಅರಿವಿನ ಬಾಗಿಲು ತೆರೆದಾಕ್ಷಣ ಅದನ್ನು ಮುಚ್ಚಲಾಗದಂತೆ ಮುಂದುವರೆಯುತ್ತ ಹೋಗುವಂಥದ್ದು. ಸುತ್ತಿ ಬಳಸಿ ಅದರ ನಿರಂತರತೆಗೆ ಒತ್ತು ಬೀಳುತ್ತಲೇ ಇರುತ್ತದೆ. ಅತಿರೇಕಗಳನ್ನು ಬದಿಗೆ ಸರಿಸಿ; ಸ್ಥಿತ ಪ್ರಜ್ಞೆಯಿಂದ ವಾಸ್ತವವನ್ನು ನೋಡಲು ಪ್ರಯತ್ನಿಸುತ್ತಿದ್ದವರೂ ಪಂಪ, ರನ್ನ, ಕುಮಾರವ್ಯಾಸ, ಲಕ್ಷ್ಮೀಶ, ಕುವೆಂಪು ಮತ್ತು ಬೇಂದ್ರೆಯಂಥವರು ಜಿ.ಎಸ್.ಎಸ್. ಅವರ ನಾಲಿಗೆಯ ಮೇಲೆ ಜೀವಾತ್ಮರಾಗಿಬಿಡುತ್ತಿದ್ದರು.

ಅಂಥಕಡೆಯಲ್ಲೆಲ್ಲ ವಾಲ್ಮೀಕಿ, ವ್ಯಾಸ ಬೆಳಕಿನ ನೆಲೆಯಾಗಿ; ಸಂಬಂಧಪಟ್ಟ ಪಾತ್ರಗಳು ವರ್ತಮಾನದಲ್ಲಿ ವಿವಿಧ ವೇಷ ಭೂಷಣಗಳನ್ನು ಧರಿಸಿದವರಂತೆ ಆಪ್ತಗೊಳ್ಳುತ್ತಿದ್ದರು.

ಗುರು ಪರಂಪರೆಯ ಈ ಪರಿಯ ವ್ಯಾಖ್ಯಾನಗಳು ನಮ್ಮ ಮಹಾಕಾವ್ಯಗಳ ಜೀವನ ದರ್ಶನವನ್ನು ವಿಸ್ತರಿಸುತ್ತಲೇ ಬಂದಿವೆ. ಅರಿವು ಎಂಬುದು ನಿರಂತರವಾಗಿ ವಿಸ್ತಾರವಾಗುತ್ತಲೇ ವಿಭಿನ್ನ ಆಯಾಮಗಳನ್ನು ತನ್ನದಾಗಿಸಿಕೊಳ್ಳುತ್ತಲೇ ಇದೆ. ಈ ನೆಲೆಯಲ್ಲಿ ಜಿ.ಎಸ್.ಎಸ್. ಅಂಥವರು ಕುವೆಂಪು, ತೀ.ನಂ.ಶ್ರೀ., ವೆಂಕಣ್ಣಯ್ಯ, ತ.ಸು. ಶಾಮರಾಯರನ್ನು ಮತ್ತೆ ಮತ್ತೆ ಸ್ಮರಿಸಿಕೊಳ್ಳುತ್ತಿದ್ದವರು. ಯಾಕೆಂದರೆ ಅವರಿಂದ ಅರಿವಿನ ಅಭಿಜಾತತೆಯನ್ನು ಅಗಾಧ ಪ್ರಮಾಣದಲ್ಲಿ ಪಡೆದಿರುವೆ; ಋಣಮುಕ್ತತೆ ಕುರಿತು ಹೇಳುವಾಗ ಪುಳಕಿತರಾಗಿ ಬಿಡುತ್ತಿದ್ದರು. ಅದು ಭಾವುಕತೆಯ ಮಟ್ಟದಲ್ಲಿ ಅಲ್ಲ. ಸಂತ ಸದೃಶತೆಯನ್ನು ಎಲ್ಲೆಲ್ಲಿಗೋ ಕರೆದೊಯ್ದು ಬಿಡುತ್ತಿದ್ದರು. ಅದರಲ್ಲೂ ಕುವೆಂಪು ಅವರ ಅಧ್ಯಾಪನದ ಉತ್ತುಂಗತೆಯನ್ನು ಹೇಳುವಾಗ; ಅದಕ್ಕೆ ಪೂರಕವಾದ ಕಾವ್ಯಮೀಮಾಂಸೆಯಾಗಲಿ, ಉಪನಿಷತ್‌ಗಳ ಉವಾಚವಾಗಲಿ ಅನನ್ಯತೆಯನ್ನು ವಿದ್ಯಾರ್ಥಿಗಳ ಮುಂದೆ ಧಾರೆಯೆರೆದವರು. ಹೀಗೆ ಜಿ.ಎಸ್.ಎಸ್. ನಾಲಿಗೆ ಅರ್ಥಾತ್ ಧ್ವನಿ ತಾದಾತ್ಮ್ಯತೆಯನ್ನು ತಲುಪಿಸುವ ಅದಕ್ಕೆ ಎಲ್ಲಿಲ್ಲದ ಚೈತನ್ಯ ಆವರಿಸಿಬಿಡುತ್ತಿತ್ತು. ಇದನ್ನು ನಿರಂತರವಾಗಿ ನಲವತ್ತು ವರ್ಷಗಳಿಗೂ ಮೇಲ್ಪಟ್ಟು ನನ್ನದಾಗಿಸಿಕೊಳ್ಳುವ ಕಾಲಮಹಿಮೆ ದೊರಕಿತ್ತು ಎಂಬುದು ವಿವರಿಸಲಾಗದ್ದು.

ಇಂದಿಗೂ ಅವರ 'ಸೌಂದರ್ಯ ಸಮೀಕ್ಷೆ, ಕಾವ್ಯಾರ್ಥ ಚಿಂತನ', 'ಕನ್ನಡ ಸಾಹಿತ್ಯ ಸಮೀಕ್ಷೆ', ಸಮಗ್ರ ಗದ್ಯ ಹಾಗೂ ಸಮಗ್ರ ಕಾವ್ಯ ಮುಂತಾದ ಕೃತಿಗಳ ಪುಟಗಳನ್ನು ತೆರೆದು ನೋಡುವಾಗ; ಥುತ್ತನೆ ಅವರು ಎದುರು ಬಂದು ನಿಂತಂತಾಗುವುದು. ಹಾಗೆಯೇ ಮಾತಿನ ವೈಖರಿಯ ರೂಪ ಸಾದೃಶ್ಯಗಳು ಚಲಿಸುತ್ತ ಹೋಗುವುದು. ಜಿ.ಎಸ್.ಎಸ್. ಅವರು ಪುಸ್ತಕಗಳಲ್ಲಿ ಕಣ್ಣಿಟ್ಟೇ ಬೆಳೆದು ಬದುಕಿದವರು. ಅಲ್ಲಿಯ ಒಂದೊಂದು ಗ್ರಹಿಕೆಯೂ ಚಲನಶೀಲರನ್ನಾಗಿಸಿದೆ. ಅಷ್ಟೇ ಏಕೆ ಕೃತಿಗಳಲ್ಲಿ ಮಿಳಿತವಾದ ಜೀವನಾನುಸಂಧಾನಗಳಿಗೆ ಸ್ಪಂದಿಸುತ್ತಲೇ; ದೇಶ ಸುತ್ತುವುದರತ್ತ ಅಗಾಧವಾದ ಒಲವನ್ನು ತುಂಬಿಸಿಕೊಂಡವರು. ಈ ದೃಷ್ಟಿಯಿಂದ **''ನನಗೆ ಸುಮ್ಮನೆ ಸುತ್ತುವುದೆಂದರೆ ತುಂಬ ಇಷ್ಟ; ಬಹುಶಃ ನನ್ನ ಕಾಲಲ್ಲಿ ಚಕ್ರವಿರಬೇಕು. ಆದುದರಿಂದ ಪ್ರವಾಸ ಮಾಡುವ ಯಾವ ಅವಕಾಶವನ್ನು ನಾನು ಕಳೆದುಕೊಳ್ಳಲು ಇಚ್ಛಿಸುವುದಿಲ್ಲ. ಅಲ್ಲದೆ ನಾನು ಹೀಗೆ ಸುತ್ತುವಾಗಲೇ ಬಹಳ**

**ಓದುವುದು. ಓದುವುದೆಂದರೆ ಪುಸ್ತಕದಿಂದ ಅಲ್ಲ; ಪ್ರಯಾಣ ಮಾಡುವಾಗ ರೈಲಲ್ಲೋ, ಬಸ್ಸಲ್ಲೋ, ವಿಮಾನದಲ್ಲೋ, ಪುಸ್ತಕದಲ್ಲೇ ಕಣ್ಣುನೆಟ್ಟು ಕೂತವರನ್ನು ಕಂಡರೆ ನನಗೆ ಆಗುವುದಿಲ್ಲ. ತೆರೆದ ಕಿಟಕಿಯಾಚೆಗೆ ನಿಮಿಷಕ್ಕೊಮ್ಮೆ ಸರಿದುಹೋಗುವ ದೃಶ್ಯಪರಂಪರೆಗಳು ನೀಡುವ ಸೊಗಸು, ಸುತ್ತಣ ಬದುಕು ತಂದು ಕೊಡುವ ಜೀವಂತವಾದ ಅನುಭವ, ನನಗೆ ಯಾವ ಪುಸ್ತಕದ ಓದಿನಿಂದಲೂ ಬರಲಾರದು ಎಂದು ಅನ್ನಿಸಿದೆ. ಪ್ರಯಾಣ ಮಾಡುವಾಗ ಹೇಗೋ ಮಾಡಿ ಕಿಟಕಿಯ ಪಕ್ಕದ ಜಾಗವನ್ನು ಹಿಡಿಯುವುದರಲ್ಲಿ ನಾನು ಮೊದಲಿಗ."** ಈ ಸಾಲುಗಳು ಅವರ ಪ್ರವಾಸದ ಉತ್ತುಂಗತೆಯನ್ನು ಮಾತ್ರ ಪರಿಚಯಿಸುವುದಿಲ್ಲ; ಅದರ ಜೊತೆಗೆ ಜೀವನದ ವಿವಿಧ ಸ್ತರಗಳನ್ನು ತಮ್ಮೊಳಗೆ ಬಿಟ್ಟುಕೊಳ್ಳುವುದರ ಆಪ್ತತೆ ತೋರಿಸುತ್ತದೆ.

ಜೀವನದ ಪ್ರವಾಸದಲ್ಲಿ ಬಹುದೀರ್ಘ ಕಾಲ ಅದರ ಸ್ಥಿತ್ಯಂತರಗಳನ್ನು ಏಳು ಬೀಳುಗಳನ್ನು ಕಾಣುತ್ತಲೇ 'ಕಾವ್ಯಾನುಸಂಧಾನ'ದ ಸೂಕ್ಷ್ಮತೆಗಳನ್ನು ಅರಿಯಲು 'ಸಂತ'ನ ಧ್ಯಾನಸ್ಥ ಮತ್ತು ವಿಕ್ಷಿಪ್ತತೆ ಎಂದರೆ ಏನು ಎಂಬುದನ್ನು ಕೊನೆಯವರೆವಿಗೂ ಉಳಿಸಿಕೊಂಡವರು. ಇದು ಅಷ್ಟು ಸುಲಭದ ಕೆಲಸವಲ್ಲ; ಪ್ರತಿಕ್ಷಣದಲ್ಲೂ ಮುಖಾಮುಖಿಯಾಗುವ ನೂರಾರು ಸಂಗತಿಗಳು ಸುಮ್ಮನೆ ಬಂದು ಹೋಗುವುದಿಲ್ಲ. ಗೊಂದಲಗಳ ಮೊತ್ತವನ್ನೇ ಮುಂದೆ ದಬ್ಬಿ ಹೋಗುತ್ತವೆ. ಆಗ ಆಯ್ಕೆಯೆಂಬುದು ಅತ್ಯಂತ ಸಂಕೀರ್ಣವಾಗಿರುವಂಥದ್ದು. ಈ ದೃಷ್ಟಿಯಿಂದ ಜಿ.ಎಸ್.ಎಸ್. ಅವರು ಜೀವಿಸಿದ ಕ್ರಮದಲ್ಲಿ 'ಕಾಲಘಟ್ಟ'ವು ಎಂತೆಂಥದ್ದನ್ನೋ ಅರ್ಥೈಸಿಕೊಳ್ಳಲು ಸಮಸ್ಯೆಗಳ ಮೊತ್ತವನ್ನೇ ಮುಖಾಮುಖಿಯಾಗಿಸಿಕೊಂಡಿದ್ದಾರೆ. ಹೀಗೆ ಆಗುವ ಸಮಯದಲ್ಲಿ ಎಲ್ಲವನ್ನು ಸಮಸ್ಥಿತಿಯಿಂದ ನೋಡುತ್ತ ಬಂದಿದ್ದು ಅಚ್ಚರಿಯ ಸಂಗತಿ. ಕುವೆಂಪು ಅವರನ್ನು ಕುರಿತಂತೆ ಸದಾ ಒಂದು ಮಾತು ಹೇಳುತ್ತಿದ್ದರು: "ನಮ್ಮನ್ನು ಕೇವಲ ಲೇಖಕರಾಗಿ ಮಾತ್ರ ರೂಪಿಸಲಿಲ್ಲ; ಮನುಷ್ಯರಾಗಿ ಬದುಕುವುದನ್ನು ಕಲಿಸಿದರು. ಇದರಿಂದ ಬರವಣಿಗೆಯ ತುಡಿತ ಜೀವಂತವಾಗಿರಲು ಸಾಧ್ಯ ವಾಯಿತೇನೋ" ಎಂಬುದನ್ನು ಎಷ್ಟು ಅಭಿಮಾನದಿಂದ ಹೇಳುತ್ತಿದ್ದರು. ಈ ದೃಷ್ಟಿಯಿಂದ ತಮ್ಮ ನಂಬಿಕೆಗೆ ಹತ್ತಿರವಿರುವ ಹತ್ತು ಮಂದಿ ಇಂಥದ್ದನ್ನು ಮಾಡೋಣ ಮಾಡಬೇಕಾಗಿದೆ ಎಂದು ಹೇಳಿದರೆ ಚಕಾರವೆತ್ತದೆ ಕಾರ್ಯೋನ್ಮುಖರಾಗಿ ಬಿಡುತ್ತಿದ್ದರು. ಅದು ಅವರ ಗುಣಾತ್ಮಕ ಸಂಗತಿಯಾಗಿತ್ತು.

ಇದನ್ನೇ ಒಂದು ಸಾಕ್ಷಿ ನೋಟವಾಗಿ ನೋಡುವುದಾದರೆ? ಇಪ್ಪತ್ತನೆಯ ಶತಮಾನದಲ್ಲಿ ಬಹು ಸಂಭ್ರಮದಿಂದ; ಸಾಮಾಜಿಕ ಒಳಗೊಳ್ಳುವಿಕೆಯಲ್ಲಿ ಶಿವರಾಮ ಕಾರಂತರು, ಕುವೆಂಪು, ಜಿ.ಎಸ್. ಶಿವರುದ್ರಪ್ಪ, ಗೋಪಾಲಕೃಷ್ಣ ಅಡಿಗ, ಪಿ.

ಲಂಕೇಶ್, ಯು.ಆರ್. ಅನಂತಮೂರ್ತಿ ಮತ್ತು ಪೂರ್ಣಚಂದ್ರ ತೇಜಸ್ವಿಯವರ ಪಾತ್ರ ಅತ್ಯಂತ ಮಹತ್ವಪೂರ್ಣವಾದದ್ದು. ಯಾಕೆಂದರೆ; ಅಷ್ಟೊಂದು ಚೇತೋಹಾರಿಯಾಗಿ ಯಾವ ಯಾವದರಲ್ಲೋ ಭಾಗವಹಿಸಿದರು. ಹೀಗೆ ಭಾಗವಹಿಸುತ್ತಲೇ ಪ್ರತಿಕ್ರಿಯಾತ್ಮಕವಾಗಿ ಸೃಷ್ಟಿಯಾದ ಮಾತು, ಕ್ರಿಯೆ ಹಾಗೂ ಬರವಣಿಗೆ ಕೇವಲ ಸಾಧಕ ಉದಾಹರಣೆಯಾಗಿ ಮಾತ್ರ ಉಳಿದಿಲ್ಲ; ರೂಪಾಕಾತ್ಮಕವಾಗಿಯೂ ನಮ್ಮ ನಡುವೆ ಇದೆ. ಇದರಿಂದ ಹುಟ್ಟಿದ ಸೃಜನಾತ್ಮಕ ಸ್ಪಂದನವು ಎಂತೆಂಥವರ ಮೇಲೆ ಪ್ರಭಾವ ಬೀರಲು ಸಾಧ್ಯವಾಯಿತು. ದೊಡ್ಡ ಪ್ರಮಾಣದಲ್ಲಿಯೋ, ಚಿಕ್ಕ ಪ್ರಮಾಣದಲ್ಲಿಯೋ ಸಾಹಿತ್ಯಕ, ಸಾಂಸ್ಕೃತಿಕ ಚಳವಳಿಗಳಿಗೆ ಪ್ರೇರಕ ಶಕ್ತಿಯಾಗುವಂತಾಯಿತು. ಯಾವುದನ್ನು ನಾವು ಒಂದು ಯುಗಧರ್ಮ ಎಂದು ಕರೆಯುತ್ತೇವೋ; ಅಂಥದಕ್ಕೆ ಮುದ್ರೆಯ ರೂಪದಲ್ಲಿ ಆಗಿ ಹೋದರು.

ಜಿ.ಎಸ್. ಶಿವರುದ್ರಪ್ಪನವರಂತೂ ನಾಲ್ಕೈದು ದಶಕಗಳ ಕಾಲ ಸೃಜನಶೀಲತೆಗೆ ಕ್ರಿಯಾಶೀಲತೆಯನ್ನು ತುಂಬಿದವರು. ಎಲ್ಲವನ್ನು ನಿರ್ಭಿಡೆಯಿಂದ ಮಾಡುತ್ತಿದ್ದರು, ಭಾಗವಹಿಸುತ್ತಿದ್ದರು. ಘೋಷಣೆಗಳನ್ನು ಮುಂದಿಟ್ಟುಕೊಂಡು ಬದುಕಿದವರಲ್ಲ. ನಮ್ಮ ಕಾರ್ಯವೈಖರಿಯೇ 'ಸಾಮಾಜಿಕ ಬದ್ಧತೆ' ಎಂಬುದಕ್ಕೆ ಸಾಕ್ಷಿಪ್ರಜ್ಞೆಯಾಗಬೇಕು ಎಂದು ಗಾಢವಾಗಿ ನಂಬಿದವರು. ಈ ನೆಲೆಯಲ್ಲಿ ಕೇಳಿಸಿಕೊಳ್ಳುವ, ಮತ್ತು ತಾಳ್ಮೆಯಿಂದ ಪ್ರತಿಕ್ರಿಯಿಸುವ ಗುಣಾತ್ಮಕತೆ ಇತ್ತು. ಎಷ್ಟು ಹಸನ್ಮುಖಿಗಳೋ ಅಷ್ಟೇ ನಿರ್ದಾಕ್ಷಿಣ್ಯತೆಯನ್ನು ಕಾಯ್ದುಕೊಂಡಿದ್ದರು. ತಮ್ಮ ಎಂಬತ್ತಾರು ವರ್ಷಗಳ ದೀರ್ಘ ಬದುಕಿನಲ್ಲಿ ಸಾವಿರಾರು ಕಡೆ ಹೋಗಿ ಉಪನ್ಯಾಸವನ್ನು ನೀಡಿದ್ದಾರೆ. ಪ್ರಶ್ನೆಗಳಿಗೆ ಎದೆತುಂಬಿ ಮುಖಾಮುಖಿಯಾಗಿದ್ದಾರೆ. ಎಲ್ಲಿಗೆ ಹೋದರೂ ಅಧ್ಯಯನ ಶೀಲತೆಯಿಲ್ಲದೆ ಸಭಿಕರ ಮುಂದೆ ನಿಲ್ಲುತ್ತಿರಲಿಲ್ಲ. ಇದನ್ನು ತಮ್ಮ ಹಿರಿಯ ಅಧ್ಯಾಪಕರಿಂದ ಪ್ರೇರಿತಗೊಂಡೆ ಎಂಬುದಕ್ಕೆ ಅಮೂಲ್ಯ ಸಂದರ್ಭಗಳನ್ನು ಉಲ್ಲೇಖಿಸಿ ಮಾರ್ಮಿಕಗೊಳಿಸಿಬಿಡುತ್ತಿದ್ದರು. ಅದು ನಮ್ಮ ಚಿತ್ತದಲ್ಲಿ 'ಗುರುಪರಂಪರೆ' ಎಷ್ಟು ಚೇತೋಹಾರಿಯಾಗಿರುವಂಥದ್ದು ಎನ್ನುವುದನ್ನು ಪರೋಕ್ಷವಾಗಿ ನೆಲೆಗೊಳಿಸಿಬಿಡುತ್ತಿದ್ದರು. ಇಂಥದ್ದು ಅವರನ್ನು ಹತ್ತಿರದಿಂದ ಬಲ್ಲ ಎಲ್ಲರಿಗೂ ಒಂದಲ್ಲ ಒಂದು ವಿಧದಲ್ಲಿ ಸಾಬೀತಾಗಿರುತ್ತದೆ. ಜಿ.ಎಸ್.ಎಸ್. ಅವರಲ್ಲಿ ಮತ್ತೊಂದು ಮತ್ತೆ ಮತ್ತೆ ಮನನ ಮಾಡುವಂಥದ್ದೆಂದರೆ: ನೀವು ಹೀಗೆ ಮಾಡಿ, ಹೀಗೆ ನಡಕೊಳ್ಳಿ, ಹೀಗೆ ಬರೆಯಿರಿ ಎಂದು ಯಾವಾಗಲೂ ಹೇಳಿದವರಲ್ಲ. 'ಸ್ವಗತ'ದ ಸಾಕ್ಷಿರೂಪವಾದ 'ನಾವು' ಎಂಬುದನ್ನು ದಟ್ಟಗೊಳಿಸಿಬಿಡುತ್ತಿದ್ದರು. ಅಲ್ಲೆಲ್ಲ 'ನೀವು ಮತ್ತು ನಾನು' ನಾಪತ್ತೆಯಾಗಿ ಬಿಡುತ್ತಿತ್ತು. ಹೀಗಿದ್ದುದರಿಂದ

ಸ್ವಾಭಾವಿಕವಾಗಿಯೇ 'ಆಜ್ಞಾಧಾರಣೆ' ಸ್ಥಾಯಿಯಾಗುತ್ತಿರಲಿಲ್ಲ. ನನ್ನ ಅರಿವಿನ ಮಟ್ಟಿಗೆ ಎಲ್ಲ ದೊಡ್ಡವರಲ್ಲೂ ಇಂಥದ್ದು ತಮ್ಮ ವ್ಯಕ್ತಿತ್ವದ ನಡಾವಳಿಯ ಭಾಗವೇ ಆಗಿರುತ್ತದೆ ಎಂಬುದನ್ನು ಸಾಬೀತುಗೊಳಿಸಿರುತ್ತಾರೆ.

ಎಲ್ಲ ವಯೋಮಾನದವರೊಡನೆ ಭಾಗಿಯಾಗುತ್ತಿದ್ದರು. ಅವರ ಚಿಂತನೆ ಮತ್ತು ಅಭಿಪ್ರಾಯಗಳಿಗೆ ಸ್ಪಂದಿಸುತ್ತಿದ್ದರು. ಮುಕ್ತ ಮನಸ್ಸಿನಿಂದ ಮಾತುಕತೆಗೆ ವೇದಿಕೆಯಾಗುತ್ತಿದ್ದರು. ನಡೆ ಮತ್ತು ನುಡಿಯಲ್ಲಿ ಅಕ್ಷರಮಟ್ಟಿಗೆ ಪಾರದರ್ಶಕತೆ ಇತ್ತು. ಇದನ್ನು ಮುಂದುವರೆಸಿ ಹೇಳಬೇಕೆಂದರೆ: ೧೯೭೪ರ ಸುಮಾರಿನಲ್ಲಿ ಬೆಂಗಳೂರಿನ ಲಾಲ್‌ಬಾಗಿನಲ್ಲಿ ವೀರಶೈವರ ಸಮಾವೇಶವಿತ್ತು. ಅದೊಂದು ಅತ್ಯಂತ ಅದ್ದೂರಿಯಾದ ಸಮಾವೇಶ. ಇದನ್ನು ಪ್ರತಿಭಟಿಸುವುದಕ್ಕಾಗಿಯೇ ಕಾರ್ಯತಂತ್ರವನ್ನು ಜಿ.ಎಸ್.ಎಸ್. ಅವರ ಸಮ್ಮುಖದಲ್ಲಿ ಒಂದು ಸಭೆಯನ್ನು ಕರೆದರು. ಲಂಕೇಶ್ ಮತ್ತು ಪ್ರೊ. ಎಂ.ಡಿ. ನಂಜುಂಡಸ್ವಾಮಿಯವರು ಇದಕ್ಕೆ ಪ್ರೇರಣೆ ಒದಗಿಸಿದವರು. ಅದಕ್ಕೆ ಪೂರಕವಾಗಿ ಒಂದು ಅರ್ಥಪೂರ್ಣ ಕರಪತ್ರವನ್ನು ಸಿದ್ಧಪಡಿಸಿದರು. ಅದನ್ನು ಬರೆದವರು ಜಿ.ಎಸ್.ಎಸ್. ಅವರು. ಪ್ರತಿಭಟನೆಗೆ ನಾನಾ ರೀತಿಯ ಜನ ಸೇರಿಕೊಂಡರು. ಪೂರ್ಣಚಂದ್ರ ತೇಜಸ್ವಿಯವರು, ಶ್ರೀಕೃಷ್ಣ ಆಲನಹಳ್ಳಿ, ಎನ್.ಡಿ. ಸುಂದರೇಶ್, ಕಿ.ರಂ. ನಾಗರಾಜ, ಕೆ. ಮರುಳಸಿದ್ದಪ್ಪ, ಕವಿ ಸಿದ್ದಲಿಂಗಯ್ಯ, ಡಿ.ಆರ್. ನಾಗರಾಜ್, ರಾಜಶೇಖರ ಕೋಟಿ ಮುಂತಾದ ಅರವತ್ತು ಎಪ್ಪತ್ತು ಮಂದಿ ಲೇಖಕರು ಕೂಡಿ ಪ್ರತಿಭಟನೆ ನಡೆಸಿದೆವು. ಅದೊಂದು ಮೊದಲೇ ಒಂದು ದೊಡ್ಡ ಸುದ್ದಿಯಾಗಿತ್ತು. ಎಲ್ಲರೂ ಲಾಲ್‌ಬಾಗ್ ಮುಖ್ಯದ್ವಾರದಲ್ಲಿ ಬಂಧನಕ್ಕೆ ಒಳಗಾದೆವು. ಎಲ್ಲರನ್ನು ಜಯನಗರದ ಪೋಲೀಸ್ ಸ್ಟೇಷನ್‌ನಲ್ಲಿ ಬಂಧಿಸಿಟ್ಟರು. ಸುಮಾರು ಎಂಟುಗಂಟೆ ಯಾರನ್ನು ಬಿಡಲಿಲ್ಲ. ಆಗ ಅಲ್ಲಿ ಎಂತೆಂಥ ಚರ್ಚೆ ನಡೆಯಿತು. ಆ ಚರ್ಚೆಗೆ ಪ್ರೇರಕಶಕ್ತಿಯಾಗಿದ್ದವರು ಪ್ರೊ. ಜಿ.ಎಸ್.ಎಸ್. ಅವರು. ಇಲ್ಲಿ ಮತ್ತೊಂದು ಸ್ವಾರಸ್ಯ ನಡೆಯಿತು. ಮಧ್ಯಾಹ್ನ ಎರಡು ಗಂಟೆಯಾದರೂ ತಿಂಡಿ ಕೊಡಲಿಲ್ಲ. ಆಗ ಪ್ರೊ. ಜಿ.ಎಸ್. ಅವರನ್ನು ಜೊತೆಗೆ ಕರೆದುಕೊಂಡು ಪ್ರೊ. ಎಂ.ಡಿ.ಎನ್. ಅವರು ಸಬ್ ಇನ್‌ಸ್ಪೆಕ್ಟರ್ ಬಳಿ ಹೋದರು. "ನೋಡಿ, ನಮಗೆ ನೀವು ತಿಂಡಿ ಇಷ್ಟು ಸಮಯವಾದರೂ ಕೊಟ್ಟಿಲ್ಲ. ತಕ್ಷಣ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಬೇರೆ ರೀತಿಯಲ್ಲಿ ಪ್ರತಿಭಟಿಸಬೇಕಾಗುತ್ತದೆ" ಎಂದರು. ಇನ್‌ಸ್ಪೆಕ್ಟರ್ ಅವರು ಧಿಮಾಕಿನಿಂದ ಮಾತಾಡಿದ್ದಕ್ಕೆ ಬಹು ದೊಡ್ಡ ವಾಗ್ವಾದವೇ ನಡೆಯಿತು. ಕೊನೆಗೆ ಆ ಮನುಷ್ಯ

ತಣ್ಣಗಾಗಿ ಎಲ್ಲರಿಗೂ ಮೂರುವರೆ ಸುಮಾರಿಗೆ ಮಸಾಲೆದೋಸೆ ವ್ಯವಸ್ಥೆ ಮಾಡಿದರು. ನನ್ನ ಅರಿವಿನ ಮಟ್ಟಿಗೆ ಅದೊಂದು ಚಾರಿತ್ರಿಕ ಪ್ರತಿಭಟನೆ.

ಸಂಜೆ ಆರು ಗಂಟೆಗೆ ಬಿಡುಗಡೆ ಮಾಡಿದರು. ಆಗ ಪೋಲೀಸ್ ಸ್ಟೇಷನ್ ಮುಂದೆ ಘೋಷಣೆ ಕೂಗುತ್ತ ಹತ್ತು ನಿಮಿಷ ಜಾತಿ ಸಮಾವೇಶಗಳ ವಿರುದ್ಧ ಕೆಲವರು ಮಾತಾಡಿದರು. ಅದರಲ್ಲಿ ತೇಜಸ್ವಿ ಅವರು ಮತ್ತು ಡಿ.ಆರ್. ನಾಗರಾಜ್ ಪ್ರಮುಖ ಪಾತ್ರವನ್ನು ನಿರ್ವಹಿಸಿದ್ದರು. ಆಗ ಡಿ.ಆರ್., ಜಿ.ಎಸ್.ಎಸ್. ಅವರ ವಿದ್ಯಾರ್ಥಿಯಾಗಿದ್ದ. ಪ್ರತಿಭಟನೆಯ ವಿಷಯ ತಿಳಿದು ಎಷ್ಟು ಜನ ಅಕ್ಕಪಕ್ಕ ಮನೆಯವರೆಲ್ಲ ಸೇರಿಬಿಟ್ಟರು. ಎಲ್ಲರೂ ಶಾಂತಿಯಿಂದ ಪ್ರತ್ಯೇಕಗೊಂಡೆವು. ಪತ್ರಿಕೆಗಳಲ್ಲಿ ದೊಡ್ಡ ಸುದ್ದಿಯಾಯಿತು. ಜಿ.ಎಸ್.ಎಸ್. ಅವರು ಸಂಭ್ರಮ ಪಟ್ಟರು. ನನ್ನ ಬದುಕಿನ ಮೊದಲನೆಯ ಬಂಧನ ಎಂದು ಒಂದು ವಿಧದ ಖುಷಿಯಿಂದಲೇ ಮೆಲುಕು ಹಾಕುತ್ತಿದ್ದರು. ಈ ಪ್ರತಿಭಟನೆಗೆ ಪ್ರೇರಕ ಶಕ್ತಿಯಾಗಿದ್ದುದು. ಮೈಸೂರು ಮಹಾರಾಜ ಕಾಲೇಜಿನ ಸಭಾಂಗಣದಲ್ಲಿ ನಡೆದ 'ಜಾತಿವಿನಾಶ ಸಮ್ಮೇಳನ'. ಇದನ್ನು ಕುವೆಂಪು ಅವರು ಉದ್ಘಾಟನೆ ಮಾಡಿದ್ದರು. ಅದೊಂದು ಸ್ಮರಣೆಯ ಸಮಾವೇಶ. ವೇದಿಕೆಯಲ್ಲಿ ಜಿ.ಎಸ್.ಎಸ್. ಅವರೂ ಇದ್ದರು. ಮೈಸೂರಿನ ವಿಚಾರವಾದಿ ವಿದ್ಯಾರ್ಥಿಗಳು ಸಂಘಟಿಸಿದ್ದು. ಸಭೆಯಲ್ಲಿ ಮುಂದೆಯೇ ಯು.ಆರ್. ಅನಂತಮೂರ್ತಿ ಮತ್ತು ಲಂಕೇಶ್ ಅಂಥ ಬಹುಮುಖ್ಯ ಲೇಖಕರು, ಕಲಾವಿದರು ಮತ್ತು ಸಾಮಾಜಿಕ ಚಿಂತಕರು ಭಾಗಿಯಾಗಿದ್ದರು. 'ಶೂದ್ರ' ಪತ್ರಿಕೆಯು ಬಿಡುಗಡೆಯಾಗಿದ್ದು ಅದೇ ಸಮಯದಲ್ಲಿ. ಆ ಸಮ್ಮೇಳನದಲ್ಲಿ ಎಲ್ಲ ವರ್ಗದ ಪುರೋಹಿತ ಶಾಹಿಯನ್ನು ವಿರೋಧಿಸಬೇಕು. ಅದೊಂದು ಬಹುದೊಡ್ಡ ಸಾಮಾಜಿಕ ಪಿಡುಗು ಎಂದು ಜನಸಾಮಾನ್ಯರಿಗೆ ತಲುಪಿಸಬೇಕು ಎಂಬ ಸಂದೇಶವನ್ನು ದಟ್ಟಗೊಳಿಸುವುದರ ಬಗ್ಗೆ ಎಲ್ಲರೂ ಒಮ್ಮತದ ಧ್ವನಿಯನ್ನು ದಾಖಲಿಸಿದ್ದರು. ಆ ಧ್ವನಿಯು ಪ್ರಾಮಾಣಿಕವಾಗಿತ್ತು. ಅದನ್ನು ಕೊನೆಯವರೆವಿಗೂ ನಂಬಿದ್ದರು. ಅದರ ವಿರುದ್ಧ ದಿಕ್ಕಿನಲ್ಲಿ ಎಂದೂ ನಡೆದವರಲ್ಲ; ಹೊಂದಾಣಿಕೆ ಮಾಡಿಕೊಂಡವರಲ್ಲ.

ಇದಕ್ಕಾಗಿ **"ಶಕ್ತಿಯ ಕೊಡು,**
**ಶಕ್ತಿಯ ಕೊಡು ಹೇ ಪ್ರಭೂ**
**ಸತ್ಯಕ್ಕಾಗಿ ನಿಲುವ ಛಲವ**
**ದೀಪ್ತಗೊಳಿಸು ನನ್ನೊಳು"**

ಎಂಬ ಕಾವ್ಯದ ಸಾಲುಗಳು ಅವರ ಬದುಕಿನ ನಡೆಯಲ್ಲಿಯೂ ಅನುಸಂಧಾನಗೊಳಿಸುತ್ತ ಹೋಗಿದೆ. ಇಂಥ ಶ್ರೀಮಂತ ಮನಸ್ಸು ಇದ್ದಿದ್ದರಿಂದಲೇ 'ಪ್ರೀತಿ ಇಲ್ಲದ ಮೇಲೆ' ಎಂಬ ಅದ್ಭುತ ಕವಿತೆಯನ್ನು ಬರೆಯಲು ಸಾಧ್ಯವಾಗಿದ್ದು. ಅದರ ಕೆಲವು ಸಾಲುಗಳು ಹೀಗಿವೆ;

**"ಪ್ರೀತಿ ಇಲ್ಲದ ಮೇಲೆ**
**ಮಾತಿಗೆ ಮಾತು ಕೂಡೀತು ಹೇಗೆ?**
**ಅರ್ಥ ಹುಟ್ಟೀತು ಹೇಗೆ?**
**ಬರಿ ಪದಕ್ಕೆ ಪದ ಜತ್ತೆಗಿದ್ದ ಮಾತ್ರಕ್ಕೆ**
**ಪದ್ಯವಾದೀತು ಹೇಗೆ?**
**ಅರ್ಥ ಹುಟ್ಟೀತು ಹೇಗೆ?"**

ಎಂಬ ವಿಷಾದವನ್ನು ತುಂಬಿಕೊಂಡೇ ತಮ್ಮ ಒಟ್ಟು ರಚನೆಗಳನ್ನು ಜೀವನದೊಡನೆ ಸಮೀಕರಿಸಿಕೊಳ್ಳುತ್ತ ಬರೆಯುತ್ತ ನಡೆದರು.

ದಿನನಿತ್ಯ ನಡೆಯುವ ಆಗುಹೋಗುಗಳ ನಡುವೆ ಎಂಥ ಅಪೂರ್ವ ತುಡಿತವನ್ನು ತುಂಬಿಕೊಂಡಿದ್ದರು! ಯಾರದೇ ಆಗಲಿ ಒಂದು ಕವಿತೆಯಾಗಲಿ, ಕಥೆಯಾಗಲಿ, ಲೇಖನವಾಗಲಿ ಪತ್ರಿಕೆಗಳಲ್ಲಿ ಕಾಣಿಸಿಕೊಂಡು ಮೆಚ್ಚಿಗೆಯಾದರೆ; ತಕ್ಷಣ ಅವರ ದೂರವಾಣಿ ಸಂಖ್ಯೆಯನ್ನು ಪಡೆದು ಸಂಪರ್ಕಿಸಿ ಮೆಚ್ಚಿಗೆ ಸೂಚಿಸುತ್ತಿದ್ದರು. ಹಾಗೆ ಸೂಚಿಸುವುದರಲ್ಲಿ ಎಂಥ ವಿನಯಶೀಲತೆಯನ್ನು ತುಂಬಿಕೊಂಡಿದ್ದರು. ಒಂದು ಸಣ್ಣ ಉದಾಹರಣೆಯನ್ನು ಬಹುಮುಖ್ಯ ಕಾರಣಕ್ಕಾಗಿ ಇಲ್ಲಿ ದಾಖಲಿಸಲು ಬಯಸುವೆ. ಕೆಲವು ವರ್ಷಗಳ ಹಿಂದೆ ಪ್ರಜಾವಾಣಿಯ ಸಾಪ್ತಾಹಿಕದಲ್ಲಿ ರವೀಂದ್ರನಾಥ ಟ್ಯಾಗೂರರು ಮುವತ್ತೇಳು ವರ್ಷ ಹೇಗೆ ರೈತರ ನಡುವೆ ಕೆಲಸ ಮಾಡಿದರು ಎಂಬುದರ ಬಗ್ಗೆ ನಾನು ಒಂದು ಲೇಖನವನ್ನು ಬರೆದಿದ್ದೆ. ಅದನ್ನು ಓದಿ ಮನೆಗೆ ಕರೆದರು. ಹೋದೆ. ಪಕ್ಕದಲ್ಲಿ ಕೂರಿಸಿಕೊಂಡು "ನನಗೆ ನಿಜವಾಗಿಯೂ ಗೊತ್ತಿರಲಿಲ್ಲ. ಟ್ಯಾಗೂರರು ಹೀಗೆಲ್ಲ ರೈತರ ಮಧ್ಯೆ ಕೆಲಸ ಮಾಡಿದ್ದಾರೆಂದು. ಅದು ಗೊತ್ತಿದ್ದರೆ ಅವರನ್ನು ಕುರಿತು ಬೇರೆ ರೀತಿಯಲ್ಲಿಯೇ ಕವಿತೆ ಬರೆಯುತ್ತಿದ್ದೆ." ಎಂದು ಮುಂದೆಯೇ ಇಟ್ಟುಕೊಂಡಿದ್ದ ಅವರ ಸಮಗ್ರ ಕಾವ್ಯ ಸಂಕಲನದಿಂದ 'ಕವಿ ರವೀಂದ್ರರನ್ನು ಕುರಿತು' ಕವಿತೆಯನ್ನು ಓದಿದರು. ಅಂದು ಅವರು ಓದಿದ ಕವಿತೆಯ ಸಾಲುಗಳು ಈಗಲೂ ನೆನಪು ಮಾಡಿಕೊಂಡರೆ ಅವರ ಧ್ವನಿ ಗುನುಗುನಿಸುತ್ತಿರುತ್ತದೆ. ಆ ಕೆಲವು ಸಾಲು ಹೀಗಿವೆ:

**"ಚಿಕ್ಕೆಗಣ್ಣಿನ ಕೆಳಗೆ ಬೆಳ್ಳಿ ಮೋಡದ ಗಡ್ಡ**
**ಅಲ್ಲಿಂದ ಇಲ್ಲಿತನಕ ಬೆಳಕುಗಳ**
**ನಿಲುವಂಗಿ ತೊಟ್ಟವನು**
**ಬೈಗು ಬೆಳಗಿನ ಬೆಂಕಿಯೆದೆಯಲ್ಲಿ**
**ಗಾಳಿ ಕುಂಚವನದ್ದಿ ಸಾವಿರ ಚಿತ್ರ ಬರೆದವನು."**

ಎಂದು ಅವರೇ ಓದುವಾಗ ಕಾವ್ಯೋತ್ಸಾಹದ ಮೇರು ಪರ್ವತ ಅನ್ನಿಸಿತು. ಕಾವ್ಯಾನುಸಂಧಾನವೆಂದರೆ; ಎಷ್ಟು ತಾದಾತ್ಮ್ಯತೆಯಿಂದ ಪುಳಕಿತರಾಗುತ್ತಿದ್ದರು. ಕಾವ್ಯವೆಂಬುದು ಧ್ಯಾನಸ್ಥ ಮನಸ್ಥಿತಿಯದ್ದು, ಅದರ ಗೇಯತೆ ಓದು ಮತ್ತು ಮನನಕ್ಕೆ ಮೆಟ್ಟಿಲಾಗಿರುವಂಥದ್ದು ಎಂಬುದನ್ನು ಗಾಢವಾಗಿ ನಂಬಿದ್ದರು. ಒಮ್ಮೆ ಮನೆಗೆ ಬರುವುದಕ್ಕೆ ಹೇಳಿದ್ದರು. ಅವರು ಆಗ ತಾನೇ ಮಧ್ಯಪ್ರದೇಶದ ಭೂಪಾಲ್‌ಗೆ ಹೋಗಿಬಂದಿದ್ದರು. ಅಲ್ಲಿ ರಾಷ್ಟ್ರೀಯ ಕವಿಗೋಷ್ಠಿ ಕುರಿತು ಮಾತಾಡುತ್ತ "ಏನಪ್ಪ ಉತ್ತರ ಭಾರತದ ಕೆಲವು ಕವಿಗಳು ಚಪ್ಪಾಳೆ ಮತ್ತು ಉದ್ಗಾರಗಳನ್ನು ಸ್ವೀಕರಿಸುವುದಕ್ಕಾಗಿಯೇ ಕವಿತೆ ಬರೆದು ತರುತ್ತಾರೆ. ನನಗೆ ಗಾಬರಿಯಾಯಿತು. ನಮ್ಮಲ್ಲಿಯೂ ಇಂಥ ಕವಿಗಳು ಹುಟ್ಟಿಕೊಂಡರೆ ಏನು ಗತಿ?" ಎಂದು ವಿಷಾದದಿಂದ ನುಡಿದಿದ್ದರು. ಇಲ್ಲಿ ಅವರೇ ಪ್ರಸ್ತಾಪಿಸಿರುವ ಕೆಲವು ಸಾಲುಗಳನ್ನು ಇಲ್ಲಿ ದಾಖಲಿಸಲು ಬಯಸುವೆ: "ತ.ಸು. ಶಾಮರಾಯರ ಅಕ್ಕರೆಯಲ್ಲಿ ರೂಪುಗೊಳ್ಳುತ್ತಿದ್ದ ನನ್ನ ಕವಿತೆ ಕುವೆಂಪು ಅವರ ಕಣ್ಣಿಗೆ ಬಿದ್ದದ್ದು ಒಂದು ಆಕಸ್ಮಿಕವೇ. ಮೊದಲ ಆನರ್ಸ್‌ನಲ್ಲಿದ್ದ ಇಡೀ ವರ್ಷ ನಾನು ಬರೆದಿದ್ದನ್ನು ಅವರಿಗೆ ತೋರಿಸುವುದು ಹೇಗೆ ಎಂಬ ಅಳುಕಿನಿಂದ ತೆಪ್ಪಗಿದ್ದೆ. ಕುವೆಂಪು ಅವರನ್ನು ನೋಡುವುದು, ಅವರ ಮಾತುಗಳನ್ನು ಕೇಳುವುದು, ಬರೆದರೆ ಅವರ ಹಾಗೇ ಬರೆಯುವುದು ಇತ್ಯಾದಿ ಸಾರ್ಥಕ ಕೆಲಸಗಳಾಗಿದ್ದವು ನನ್ನ ಪಾಲಿಗೆ." ಇದಕ್ಕೆ ಪ್ರಮಾಣ ಪತ್ರವೆಂಬಂತೆ ಮುಂದೆ ೧೯೭೦ರಲ್ಲಿ ಕುವೆಂಪು ಅವರು ಜಿ.ಎಸ್.ಎಸ್. ಅವರಿಗೆ ಒಂದು ಪತ್ರ ಬರೆಯುವರು. ಅದು ಹೀಗಿದೆ: "ಶ್ರೀ ಜಿ.ಎಸ್. ಶಿವರುದ್ರಪ್ಪನವರನ್ನು ೨೨ ವರ್ಷಗಳಿಂದಲೂ ಬಲ್ಲೆ. ವಿದ್ಯಾರ್ಥಿ ದೆಸೆಯಿಂದಲೂ ಸಾಹಿತ್ಯ ಸೃಷ್ಟಿಯಲ್ಲಿ ಸಾಹಿತ್ಯ ವಿಮರ್ಶೆಯಲ್ಲಿ ತೀವ್ರವಾದ ಆಸಕ್ತಿ ಅವರಿಗೆ. ಸಾಮಗಾನ, ಚೆಲುವು-ಒಲವು, ದೀಪದ ಹೆಜ್ಜೆ, ದೇವಶಿಲ್ಪ, ಅನಾವರಣ ಈ ಕವನ ಸಂಕಲನಗಳಿಂದ ಪ್ರತಿಭಾವಂತ ಕವಿ ಎಂದು ಪ್ರಖ್ಯಾತ ರಾಗಿದ್ದಾರೆ. ಕನ್ನಡದ ಉನ್ನತ ಮಟ್ಟದ ವಿಮರ್ಶಕರ ಪಂಕ್ತಿಯಲ್ಲಿ ನಿಂತಿದ್ದಾರೆ ಶ್ರೀ ಶಿವರುದ್ರಪ್ಪನವರು. ಅವರ ಡಾಕ್ಟರೇಟ್ ಪ್ರಬಂಧವಾದ 'ಸೌಂದರ್ಯ

ಸಮೀಕ್ಷೆ' ಅವರ ವಿದ್ವತ್ತಿಗೂ ತೀಕ್ಷ್ಣವಾದ ವಿಮರ್ಶನಾಶಕ್ತಿಗೂ ಸಾಕ್ಷಿಯಾಗಿದೆ. ವಿಮರ್ಶೆಯ ಪೂರ್ವ ಪಶ್ಚಿಮ, ಪ್ರತಿಬಿಂಬ ಈ ಎರಡೂ ಅವರ ವಿಮರ್ಶಾ ಕ್ಷೇತ್ರಕ್ಕೆ ನೀಡಿರುವ ಅಪೂರ್ವ ಕಾಣಿಕೆಗಳಾಗಿವೆ. ಬೋಧನೆ ಮತ್ತು ಸಂಶೋಧನೆ ಈ ಎರಡೂ ಕ್ಷೇತ್ರಗಳಲ್ಲಿ, ಕೆಲಸ ಮಾಡುತ್ತಿರುವ ಈ ತಲೆಮಾರಿನ ಪ್ರಥಮ ಶ್ರೇಣಿಯ ಪ್ರತಿಭಾವಂತರಲ್ಲಿ ಶ್ರೀ ಶಿವರುದ್ರಪ್ಪನವರೂ ಒಬ್ಬರು ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ'' ಈ ಪತ್ರವನ್ನು ಎಷ್ಟು ಭಾವನಾತ್ಮಕವಾಗಿ ತೆಗೆದುಕೊಂಡರೋ; ಅದಕ್ಕೆ ಬದ್ಧರಾಗಿಯೇ ಬದುಕಿದರು, ಬರೆದರು, ಚಿಂತಿಸಿದರು.

ಆದರೆ ಅವರಿಗೆ ಅಷ್ಟೇ ಸಾಲದು ಯಾವಾಗಲೂ ಅನ್ನಿಸಿದೆ. ಆದ್ದರಿಂದಲೇ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದಾಗ; ಬೆಳೆಸಿದ ಸಾಂಸ್ಕೃತಿಕ ಸಂಚಲನವಂತೂ ಯಾರೂ ಮರೆಯಲಾರದಂಥದ್ದು. ಅದು ಕೇವಲ ಸಾಹಿತ್ಯಕ್ಕೆ ಸಂಬಂಧಿಸಿದ್ದು ಮಾತ್ರವಲ್ಲ; ಸಮಾಜದ ಎಲ್ಲ ಸ್ಥಿತ್ಯಂತರಗಳನ್ನು ಕುರಿತು ಚಿಂತಿಸುವುದಕ್ಕೆ, ಮುಖಾಮುಖಿಯಾಗುವುದಕ್ಕೆ ಬಹುದೊಡ್ಡ ವೇದಿಕೆಯನ್ನು ನಿರ್ಮಾಣ ಮಾಡಿಕೊಟ್ಟರು. ಒಬ್ಬ ವ್ಯಕ್ತಿ ಸೃಜನಶೀಲ ಮನಸ್ಸಿನಿಂದ ಕ್ರಿಯಾಶೀಲರಾಗಿದ್ದರೆ; ಮಹತ್ವಪೂರ್ಣವಾದದ್ದನ್ನು ಮಾಡಿ ತೋರಿಸಬಹುದು ಎನ್ನುವುದಕ್ಕೆ ಆ ಕಾಲಘಟ್ಟ 'ಸಾಕ್ಷಿಪ್ರಜ್ಞೆ'ಯಂತೆ ಇಂದಿಗೂ ಬಹುಪಾಲು ಮಂದಿಯಲ್ಲಿ ಉಳಿದಿದೆ. ಎಲ್ಲ 'ಸ್ಕೂಲ್ ಆಫ್ ಥಾಟ್'ಗಳು ಗಂಭೀರವಾಗಿ ಅವಲೋಕನಕ್ಕೊಳಗಾಗುವಂತೆ ಮಾಡಿದ್ದು ಜಿ.ಎಸ್.ಎಸ್. ಅವರ ಚಾರಿತ್ರಿಕ ಕೊಡುಗೆಯೆಂಬುದನ್ನು ಯಾರೂ ಅಲ್ಲಗಳೆಯುವುದಿಲ್ಲ. ಕೇವಲ ಒಂದೆರಡು ವರ್ಷವಲ್ಲ, ಸುಮಾರು ಒಂದು ದಶಕಕ್ಕೂ ಮೇಲ್ಪಟ್ಟು ಕನ್ನಡ ವಿಭಾಗದಲ್ಲಿ ಸಾಂಸ್ಕೃತಿಕ ಸಂಚಲನವನ್ನು ಕಾಪಾಡಿಕೊಂಡು ಬಂದರು. ಇಲ್ಲಿ ಎಂ. ಚಿದಾನಂದಮೂರ್ತಿ, ಚಂದ್ರಶೇಖರ ಕಂಬಾರ, ಕೆ. ಮರುಳಸಿದ್ದಪ್ಪ, ಕಿ.ರಂ. ನಾಗರಾಜ, ಡಿ.ಆರ್. ನಾಗರಾಜ್, ಕೆ.ವಿ. ನಾರಾಯಣ, ಬರಗೂರು ರಾಮಚಂದ್ರಪ್ಪ, ಸಿ. ವೀರಣ್ಣ, ಬಸವರಾಜ ಕಲ್ಗುಡಿ, ಎನ್.ಎಸ್. ಲಕ್ಷ್ಮೀ ನಾರಾಯಣ ಭಟ್ಟ, ಸಿದ್ದಲಿಂಗಯ್ಯ ಮುಂತಾದವರೆಲ್ಲ ಲವಲವಿಕೆಯನ್ನು ತುಂಬಿಕೊಂಡು ಪುಟಿಯುತ್ತಿದ್ದ ಜೀವ ಸೆಲೆಯಾಗಿದ್ದರು. ಅಷ್ಟೇ ಅಲ್ಲ ಕರ್ನಾಟಕದ ಬೇರೆ ಬೇರೆ ಕಡೆ ಇದ್ದ; ಆರೋಗ್ಯಪೂರ್ಣ ಚಿಂತಕರೆಲ್ಲ ಮತ್ತೆ ಮತ್ತೆ ಸೇರಿ ಅಭಿಪ್ರಾಯಗಳನ್ನು ಹಂಚಿಕೊಳ್ಳುವ ವ್ಯವಸ್ಥೆಯನ್ನು ನಿರ್ಮಾಣ ಮಾಡಿದ್ದರು.

ಈ ಕಾಲಘಟ್ಟದಲ್ಲಿ ನಡೆದ ವಿಚಾರ ಸಂಕೀರ್ಣಗಳಿಗೆ ಕೇವಲ ವಿಶ್ವವಿದ್ಯಾಲಯಗಳ ಸಾಹಿತ್ಯದ ವಿದ್ಯಾರ್ಥಿಗಳು ಮಾತ್ರವಲ್ಲ; ಬೇರೆ ಬೇರೆ

ವಿಭಾಗಗಳು ಮತ್ತು ಹೊರಗಿನವರು ಇಲ್ಲೇನೋ ಅಪೂರ್ವವಾದದ್ದು ಚರ್ಚೆಯಾಗುತ್ತಿದೆ ಎಂದು ಗಂಭೀರವಾಗಿ ಭಾಗವಹಿಸಿ ಹೋಗುತ್ತಿದ್ದರು. ಇದರಿಂದ ಅಭಿರುಚಿ ನಿರ್ಮಾಣವು ಎಷ್ಟು ಪಾರದರ್ಶಕವಾಗಿರುತ್ತಿತ್ತು. ಓದು ಮತ್ತು ಬರವಣಿಗೆಗೆ ಪೂರಕವಾದದ್ದನ್ನು ಎಷ್ಟೋ ಮಂದಿ ಪಡೆಯುತ್ತ ಹೋಗಿದ್ದಾರೆ. ಸಮಾಜವಾದಿ ಚಿಂತನೆಯ ರಾಜಕೀಯ ನಾಯಕರು ಗಂಭೀರವಾಗಿ ಬಂದು ಕೂತು ಕೇಳಿಸಿಕೊಂಡು ಹೋಗಿದ್ದನ್ನು ಕಂಡಿದ್ದಾರೆ. ಶಾಂತವೇರಿ ಗೋಪಾಲಗೌಡರಂಥ ಅಪರೂಪದ ರಾಜಕಾರಣಿಯು ತಮ್ಮ ಅನಾರೋಗ್ಯದ ನಡುವೆಯೂ ಊರುಗೋಲಿನ ಸಹಾಯ ದಿಂದ ಬಂದು ಎರಡು ಮೂರು ಗಂಟೆ ಕೂತು ಕೇಳಿಸಿಕೊಂಡು ಹೋಗಿದ್ದಾರೆ. ಆ ಸಮಯದಲ್ಲಿ ಗೋಪಾಲಕೃಷ್ಣ ಅಡಿಗರು, ಜಿ.ಎಸ್.ಎಸ್, ಲಂಕೇಶ್ ಮುಂತಾದವರು ಗೌಡರನ್ನು "ಏನಾದರೂ ಮಾತಾಡಿ" ಎಂದು ಒತ್ತಡ ತಂದದ್ದು ಉಂಟು. ಇಂಥ ವಾತಾವರಣ ಸುಮ್ಮಸುಮ್ಮನೆ ಸೃಷ್ಟಿಯಾಗುವುದಿಲ್ಲ. ಒಬ್ಬ ದೂರದೃಷ್ಟಿಯುಳ್ಳ ವ್ಯಕ್ತಿ ನಾಯಕನ ರೂಪದಲ್ಲಿ ಕೂತಿರಬೇಕಾಗುತ್ತದೆ. ಇದು ಎಲ್ಲ ಕ್ಷೇತ್ರಗಳಿಗೂ ಅನ್ವಯಿಸುತ್ತದೆ. ಜಿ.ಎಸ್.ಎಸ್. ಅವರು ನಡೆಸುತ್ತಿದ್ದ ವಿಚಾರಸಂಕಿರಣಗಳು ಮುಗಿದರೂ; ಎಷ್ಟೋ ದಿವಸ ಪತ್ರಿಕೆಗಳಲ್ಲಿ ವಾಗ್ವಾದಗಳ ರೂಪದಲ್ಲಿ ಪತ್ರಗಳು ವಾಚಕರ ವಾಣಿ ಮುಂತಾದ ವೇದಿಕೆಗಳಲ್ಲಿ ಚರ್ಚೆಯಾಗುತ್ತಿದ್ದುವು. ಇಲ್ಲೆಲ್ಲ ಜಿ.ಎಸ್.ಎಸ್. ಅವರು ತಮ್ಮ ಸಾಹಿತ್ಯವನ್ನು ಬೆಂಬಲಿಸುವ ಭಟ್ಟಂಗಿಗಳನ್ನು ಸೃಷ್ಟಿಮಾಡಲು ಹೋಗಲಿಲ್ಲ. ಕನ್ನಡದ ಸಾಂಸ್ಕೃತಿಕ ವಲಯ ಪಿ. ಲಂಕೇಶ್, ರಾಮಚಂದ್ರ ಶರ್ಮ, ಯು. ಆರ್. ಅನಂತರಮೂರ್ತಿ, ಶಾಂತಿನಾಥ ದೇಸಾಯಿ, ಕೆ.ವಿ. ತಿರುಮಲೇಶ್, ಗಿರಡ್ಡಿ ಗೋವಿಂದರಾಜ, ಚೆನ್ನವೀರ ಕಣವಿ, ಕೆ.ವಿ. ಸುಬ್ಬಣ್ಣ, ಗೋಪಾಲಕೃಷ್ಣ ಅಡಿಗ, ಜಿ. ಎಚ್. ನಾಯಕ, ಶಂಕರ ಮೊಕಾಶಿ ಪುಣೇಕರ, ಯಶವಂತ ಚಿತ್ತಾಲ, ಚಂದ್ರಶೇಖರ ಪಾಟೀಲ, ಕೆ. ಎಸ್. ನಿಸಾರ್ ಅಹಮದ್, ಗಿರೀಶ್ ಕಾರ್ನಾಡ್ ಮುಂತಾದ ಜೀನಿಯಸ್‌ಗಳನ್ನು ಒಳಗೆ ಬಿಟ್ಟುಕೊಳ್ಳಲು ಸಾಧ್ಯವಾಯಿತು.

ಇದೇ ಸಮಯದಲ್ಲಿ ಹಾಗೆ ನೋಡಿದರೆ, ಕನ್ನಡ ರಂಗಭೂಮಿಗೆ ಹೊಸ ಚೈತನ್ಯ ಬಂದದ್ದು ಬಯಲು ರಂಗಭೂಮಿ ನಾಟಕೋತ್ಸವದಿಂದ. ಅದು ನಡೆದದ್ದು ಕನ್ನಡ ವಿಭಾಗದ ವಿಚಾರ ಸಂಕಿರಣಗಳ ಸಮಯದಲ್ಲಿ. ಈ ರೀತಿಯ ಯೋಜನೆಗೆ ನೆಲೆಯನ್ನು ಸಿದ್ಧಪಡಿಸಿದವರು ಕೆ. ಮರುಳಸಿದ್ದಪ್ಪ ಮತ್ತು ಪಿ. ಲಂಕೇಶ್ ಅವರು. ಆಗ ಪ್ರಯೋಗ ಕಂಡ ಸಂಕ್ರಾಂತಿ, ಈಡಿಪಸ್ ಮತ್ತು ಜೋಕುಮಾರಸ್ವಾಮಿ ನಾಟಕಗಳು ರಂಗಭೂಮಿಯ ದಿಕ್ಕನ್ನೇ ಬದಲಿಸಿಬಿಟ್ಟವು. ಒಂದು ದೃಷ್ಟಿಯಿಂದ ಬಿ. ವಿ. ಕಾರಂತರಂಥ ಪ್ರತಿಭಾವಂತ ನಟ ಮತ್ತು ನಿರ್ದೇಶಕ ಕರ್ನಾಟಕದಲ್ಲಿ

ನೆಲೆಯನ್ನು ಕಂಡುಕೊಳ್ಳಲು ಸಾಧ್ಯವಾಯಿತು. ಹಾಗೆಯೇ ಹೊಸ ಪ್ರೇಕ್ಷಕ ವರ್ಗವೂ ದೊಡ್ಡ ಪ್ರಮಾಣದಲ್ಲಿ ಸೃಷ್ಟಿಯಾಯಿತು. ಈ ಪ್ರೇಕ್ಷಕ ವರ್ಗವು ಸಾಹಿತ್ಯಕ್ಕೂ ಹತ್ತಿರವಾಗುವಂಥವರೇ ಆಗಿದ್ದರು.

ಜಿ.ಎಸ್.ಎಸ್. ಅವರ ಮತ್ತೊಂದು ಬಹುದೊಡ್ಡ ಗುಣವೆಂದರೆ: ಎಲ್ಲರಿಗೂ ಸ್ವಾತಂತ್ರ್ಯವನ್ನು ಕೊಡುತ್ತಿದ್ದರು; ಅವರವರ ಪಾಡಿಗೆ ಅವರು ಕೆಲಸ ಮಾಡಲು. ಅವರು ನಿವೃತ್ತರಾಗಿ ವಿಭಾಗದಿಂದ ಹೊರಗೆ ಬಂದಾಕ್ಷಣ; ಬಿಕೋ ಎಂಬ ವಾತಾವರಣ ಸೃಷ್ಟಿಯಾಯಿತು. ಮತ್ತೊಂದು ಮುಖ್ಯ ಸಂಗತಿಯೆಂದರೆ: ಜಿ.ಎಸ್.ಎಸ್. ಅವರ ಕಾಲಘಟ್ಟದಲ್ಲಿ ಡಾ॥ ಹೆಚ್. ನರಸಿಂಹಯ್ಯನವರು ಉಪಕುಲಪತಿಗಳಾಗಿದ್ದರಿಂದ ಪೂರ್ಣ ಸ್ವಾತಂತ್ರ್ಯ ಮತ್ತು ಆರ್ಥಿಕ ಬೆಂಬಲವನ್ನು ಕೊಡುತ್ತ ಬಂದಿದ್ದರು. ಇರಲಿ, ಅನುಭೂತಿಯೆಂಬುದು ಯಾವಯಾವುದೋ ದಿಕ್ಕಿನಲ್ಲಿ ಹುಡುಕಾಟಕ್ಕೆ ತೊಡಗಿರುತ್ತದೆ. ವೈಯಕ್ತಿಕ ನೆಲೆಯಲ್ಲಿ ಅದರ ಬೀಸು ಕೂಡ ಸೃಜನಾತ್ಮಕ ಚೌಕಟ್ಟಿನಲ್ಲಿಯೇ ಕಾರ್ಯ ನಿರ್ವಹಿಸುತ್ತಿರುತ್ತದೆ. ಹೀಗೆ ಮಾಡುವಾಗ ಎಂದೂ ಉದ್ವೇಗಕ್ಕೆ ಒಳಗಾಗುತ್ತಿರಲಿಲ್ಲ ಎಂಬುದೇ ಅವರ ಆರೋಗ್ಯಪೂರ್ಣ ಮನಸ್ಥಿತಿಯ ಹೆಚ್ಚುಗಾರಿಕೆಯಾಗಿತ್ತು. ಕೆಲವೊಮ್ಮೆ ಸಣ್ಣಪುಟ್ಟ ಮಾನವ ಸಹಜ ಸಿಡುಕಿಗೆ ಪಕ್ಕಾದರೂ; ಅದು ಅಷ್ಟೇ ತೀವ್ರವಾಗಿ ಕ್ಷೀಣಗೊಂಡುಬಿಡುತ್ತಿತ್ತು. ಮುಂದೆ ಏನೂ ನಡೆದಿಲ್ಲವೇನೋ ಎನ್ನುವಂತೆ ಸಹಜಸ್ಥಿತಿಯಲ್ಲಿ ಕಾರ್ಯಪ್ರವೃತ್ತರಾಗುತ್ತಿದ್ದುದು; "ದಿನನಿತ್ಯದ ಆಗು ಹೋಗುಗಳಿಗೆ ಹೇಗೆ ಸ್ಪಂದಿಸಬೇಕು ಎನ್ನುವುದಕ್ಕೆ ನನ್ನ ಗುರುಗಳಂತೆ ಕೆಲವು ಅತ್ಯುತ್ತಮ ಕೃತಿಗಳೂ ನೆನಪಿನಾಳದಲ್ಲಿ ಉಳಿದು ಕೆಲಸ ಮಾಡುತ್ತಿರುತ್ತವೆ." ಎಂಬುದನ್ನು ಬಹಳಷ್ಟು ಬಾರಿ ಬೇರೆ ಬೇರೆ ಸಂದರ್ಭಗಳಲ್ಲಿ ವ್ಯಕ್ತಪಡಿಸಿರುವುದನ್ನು ಕಂಡಿದ್ದೇನೆ. ಇಂಥ ಸುಸಂಸ್ಕೃತ ಮಾದರಿಗಳನ್ನು ಎಲ್ಲರೂ ಜೀರ್ಣಿಸಿಕೊಂಡಿರುವುದಿಲ್ಲ. ಘನ ವ್ಯಕ್ತಿತ್ವ ಇರುವವರಿಗೆ ಮಾತ್ರ ಇದು ಸಾಧ್ಯವಿರುತ್ತದೆ. ಹಾಗೆಯೇ ನಿಚ್ಚಳವಾಗಿ ನಂಬಿದ್ದುದು ಎಂತೆಂಥ ಏಳು ಬೀಳುಗಳನ್ನು ದಾಟಿಬಂದಿದ್ದೇನೆ ಎಂದು. ಇದಕ್ಕೆ ಒಮ್ಮೊಮ್ಮೆ ಪ್ರಾಸಂಗಿಕವಾಗಿ ಪ್ರಸ್ತಾಪಿಸುತ್ತಿದ್ದುದು ತಮ್ಮ ಬಾಲ್ಯಕಾಲದ ಕೆಲವು ಘಟನೆಗಳನ್ನು. ಇಲ್ಲಿ ಬಹುಮುಖ್ಯವಾದದ್ದನ್ನು ಉದಹರಿಸಬಹುದು ಅನ್ನಿಸುತ್ತದೆ; ಇದು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಈಸೂರಿನಲ್ಲಿ ನಡೆದದ್ದು: "ನನಗೆ ನೆನಪಿಲ್ಲ, ನಮ್ಮಜ್ಜಿ ಹೇಳುತ್ತಿದ್ದರು, ನಾನು ಎಳೆಯಂದಿನಲ್ಲಿ ಒಂದು ದೊಡ್ಡ ಗಂಡಾಂತರದಿಂದ ಪಾರಾದೆನೆಂದು. ಈಸೂರಿನಲ್ಲಿ ಒಂದು ದಿನ, ನಾನಾಗ ತೊಟ್ಟಿಲ ಕೂಸು, ತಂದೆಯವರು ಸ್ಕೂಲಿಗೆ ಹೋಗಿದ್ದಾರೆ. ತಾಯಿ, ತನ್ನ

ಮಗು ಮಲಗಿದೆಯಲ್ಲ, ಒಂದೆರಡು ನಿಮಿಷದಲ್ಲಿ ಬಂದರಾಯಿತು ಎಂದು ಮನೆಯ ಬಾಗಿಲನ್ನು ಎಳೆದುಕೊಂಡು ಹತ್ತಿರದ ಬಾವಿಗೆ ನೀರು ತರಲು ಹೋಗಿದ್ದಾರೆ. ಆಗ ಇದ್ದಕ್ಕಿದ್ದ ಹಾಗೆ ಮನೆಯ ಪಕ್ಕದ ಹುಲ್ಲು ಜೋಪಡಿಗೆ ಬೆಂಕಿ ಹತ್ತಿಕೊಂಡಿತು. ಅಕ್ಕಪಕ್ಕದ ಮನೆಗೆ ತಗುಲಿದ ಬೆಂಕಿ ನಮ್ಮ ಬಾಡಿಗೆಯ ಮನೆಗೂ ತಗುಲಿತು. ಮನೆಯ ಮೇಲಿನ ಗಳಗಳು ಹೊದಿಸಿದ ಚಾವಣೆ ಉರಿಯುತ್ತಿದೆ. ಜನರ ಗದ್ದಲ ಕೇಳಿ, ನೀರಿಗೆ ಹೋಗಿದ್ದ ನನ್ನ ತಾಯಿ ಬಂದು ನೋಡುತ್ತಾಳೆ. ಮನೆಯ ಒಂದು ಭಾಗವನ್ನು ಬೆಂಕಿ ಮೇಯುತ್ತಿದೆ. ಆ ಹೊಗೆ ಬೆಂಕಿಯ ನಡುವೆ ನುಗ್ಗಿ ತೊಟ್ಟಿಲಲ್ಲಿ ಮಲಗಿದ್ದ ಮಗುವನ್ನೆತ್ತಿಕೊಂಡು, ಆಕೆ ಉರಿಯುವ ಮನೆಗಳ ನಡುವೆ ಹಾದು ಊರಾಚೆಯ ಬಯಲಿಗೆ ಬಂದು ಕೂತಳು. ಬೆಂಕಿ ಹತ್ತಿದ ಸುದ್ದಿ ಕೇಳಿ, ಸ್ಕೂಲನ್ನು ಬಿಟ್ಟು ತಂದೆಯವರು ಬಂದು ನೋಡುತ್ತಾರೆ, ಮನೆಯಲ್ಲಿ ತಾಯಿ ಮಗು ಇಲ್ಲ. ಮನೆ ಹೆಚ್ಚುಕಡಿಮೆ ಸುಟ್ಟು ಕುಸಿದು ಹೋಗಿದೆ. ಗಾಬರಿಗೊಂಡ ಅವರಿಗೆ ಯಾರೋ ಹೇಳಿದರಂತೆ, ತಾಯಿ ಮಗು ಪಾರಾಗಿ ಬಂದ ಸಂಗತಿಯನ್ನು ಅವರು ಬಂದು ಊರ ಹೊರಗೆ ಮರದ ಕೆಳಗೆ ಸುರಕ್ಷಿತವಾಗಿ ಕೂತ ಹೆಂಡತಿ ಮಕ್ಕಳನ್ನು ಕಂಡು ಅವರಿಗೆ ಸಮಾಧಾನವಾಯಿತಂತೆ. ಆ ದಿನ ಹತ್ತಿದ ಬೆಂಕಿಯಲ್ಲಿ ಅರ್ಧಕ್ಕರ್ಧ ಊರು ಬೂದಿಯಾಯಿತಂತೆ. ಈ ಸಂದರ್ಭವನ್ನು ನೆನೆದರೆ ನನ್ನ ತಾಯಿಯ ಬಗ್ಗೆ ಒಂದು ಕೃತಜ್ಞತೆಯ ಭಾವನೆ ತುಳುಕುತ್ತದೆ.'' ಇದನ್ನು ಕೆಲವು ಬಾರಿ ಪ್ರಸ್ತಾಪಿಸುವಾಗಲೆಲ್ಲ; ನಮ್ಮ ಬದುಕಿನ ಆಕಸ್ಮಿಕಗಳು ಹೀಗೆಯೇ ಘಟಿಸುತ್ತವೆ ಎಂದು ಹೇಳಲು ಆಗುವುದಿಲ್ಲ ಎಂಬ ವಿಷಾದದ ಧ್ವನಿಯು ಗಾಢವಾಗಿರುತ್ತಿತ್ತು. ಹಾಗೆಯೇ ಅವ್ಯಕ್ತ ನಗುವಿನ ಛಾಯೆ ತೆಳುವಾಗಿ ಮುಖದ ಮೇಲೆ ಚಲಿಸಿ ಹೋಗುತ್ತಿತ್ತು.

ಹೀಗೆ ಒಂದಷ್ಟು ಆಕಸ್ಮಿಕಗಳನ್ನು ದಾಟಿ ಬಂದವರಿಗೆ; 'ಅರಿವು' ಎಂಬುದು ವಿಚಿತ್ರ ರೀತಿಯಲ್ಲಿ ಕಾಡುತ್ತಿರುತ್ತದೆ. ಆ ಕಾಡುವಿಕೆಯೇ ಅತ್ಯುತ್ತಮ ಬದುಕಿನ ಮಾದರಿಗಳನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿರುತ್ತದೆ. ಇದನ್ನು ಸೂಕ್ಷ್ಮವಾಗಿ ಯಾವಾಗಲೂ ಅವಲೋಕನಕ್ಕೆ ಬಿಟ್ಟುಕೊಳ್ಳುತ್ತಿದ್ದರು. ಹೀಗೆ ಬಿಟ್ಟುಕೊಳ್ಳುತ್ತಿದ್ದುದರಿಂದಲೇ; ತಮ್ಮ ಆರಾಧ್ಯ ಗುರು ತ.ಸು. ಶಾಮರಾಯರಿಗಾಗಿಯೇ ಬರೆದ ಕವಿತೆ:

> **''ಎದೆ ತುಂಬಿ ಹಾಡಿದೆನು ಅಂದು ನಾನು**
> **ಮನವಿಟ್ಟು ಕೇಳಿದಿರಿ ಅಲ್ಲಿ ನೀವು**

**ಇಂದು ನಾ ಹಾಡಿದರು ಅಂದಿನಂತೆಯೆ ಕುಳಿತು**
**ಕೇಳುವಿರಿ ಸಾಕೆನೆಗೆ ಅದುವೆ ಬಹುಮಾನ**
**ಹಾಡುಹಕ್ಕಿಗೆ ಬೇಕೆ ಬಿರುದು ಸನ್ಮಾನ?**
**ಎಲ್ಲ ಕೇಳಲಿ ಎಂದು ನಾನು ಹಾಡುವುದಿಲ್ಲ**

**ಹಾಡುವುದು ಅನಿವಾರ್ಯ ಕರ್ಮ ನನಗೆ**
**ಕೇಳುವವರಿಹರೆಂದು ನಾ ಬಲ್ಲೆ ಅದರಿಂದ**
**ಹಾಡುವೆನು ಮೈತುಂಬಿ ಎಂದಿನಂತೆ**
**ಯಾರು ಕಿವಿ ಮುಚ್ಚಿದರು ನನಗಿಲ್ಲ ಚಿಂತೆ''**

ಈ ಕವಿತೆ ಅರ್ಥಾತ್ ಈ ಹಾಡು ಕರ್ನಾಟಕದ ಉದ್ದಗಲಕ್ಕೂ ಎಷ್ಟೋಂದು ಜನಪ್ರಿಯವಾಗಿದೆ. ಆದರೆ ಅವರಿಗೆ ಕವಿ ಜಿ. ಎಸ್. ಶಿವರುದ್ರಪ್ಪನವರು ತಮ್ಮ ಗುರು ತ.ಸು. ಶಾಮರಾಯರನ್ನು ಕುರಿತು ಬರೆದಿದ್ದು ಎಂಬುದು ಗೊತ್ತಿರುವುದಿಲ್ಲ. ''ಎದೆ ತುಂಬಿ ಹಾಡಿದೆನು'' ಎಂಬುದನ್ನು ನಾನಾ ರೀತಿಯಲ್ಲಿ ಕಲ್ಪಿಸಿಕೊಂಡು ಹಾಡಲು ಸಾಧ್ಯವಿರುತ್ತದೆ. ಅಷ್ಟರ ಮಟ್ಟಿಗೆ ಅದರ ಗೇಯತೆ ಹಾಗೂ ಹೃದಯವಂತಿಕೆ ಗಾಢವಾಗಿದೆ.

ಈ ಕವಿತೆಯ ಒಟ್ಟಿಗೆ ಅಂಟಿಕೊಂಡಂತೆ ಒಂದು ಸಂಭ್ರಮವು ನೆನಪಿಗೆ ಬರುತ್ತದೆ. ಹಿರಿಯರಾದ ತ.ಸು. ಶಾಮರಾಯರ ಎಂಬತ್ತನೆಯ ಜನ್ಮ ದಿನಾಚರಣೆಗೆಂದು ಪ್ರೊ. ಜಿ.ಎಸ್.ಎಸ್. ಅವರ ಜೊತೆಯಲ್ಲಿ ಹೋದೆವು. ಡಾ॥ ಕೆ. ಮರುಳಸಿದ್ದಪ್ಪನವರೂ ಜೊತೆಗಿದ್ದರು. ಅದೇ ಸಮಯಕ್ಕೆ ಬೆಂಗಳೂರು ದೂರದರ್ಶನದವರು 'ಚಂದನ'ಕ್ಕಾಗಿ ಶಾಮರಾಯರನ್ನು ಸಂದರ್ಶಿಸಲು ವ್ಯವಸ್ಥೆಮಾಡಿದ್ದರು. ಮೈಸೂರಿನ ಕುಕ್ಕರಹಳ್ಳಿ ಕೆರೆಯ ಕಟ್ಟೆಯ ಮೇಲೆ ಕೂತು ಅವರನ್ನು ಸಂದರ್ಶಿಸಿದ್ದೆವು. ಆಗ ಜಿ.ಎಸ್.ಎಸ್. ಅವರಿಂದ 'ಎದೆ ತುಂಬಿ ಹಾಡಿದೆನು ಅಂದು ನಾನು' ಕವಿತೆಯನ್ನು ಓದಿಸುವ ಆಸೆ ಇತ್ತು. ಆದರೆ ಅದನ್ನು ಹೆಚ್ಚು ವಾಚ್ಯ ಮಾಡುವುದು ಬೇಡ; ನಿಗೂಢವಾಗಿಯೇ ಇರುವುದು ಸೂಕ್ತ ಎಂದು ಕವಿಯು ಸೂಚಿಸಿದ್ದರಿಂದ ಕವಿತೆಯನ್ನು ಓದಿಸಲಿಲ್ಲ. ಶಾಮರಾಯರಿಗೆ ದೃಷ್ಟಿ ಸ್ವಲ್ಪ ಮಂದವಾಗಿತ್ತು. ಅತ್ಯಂತ ಆತ್ಮೀಯವಾಗಿ ಪ್ರಶ್ನೆಗಳಿಗೆ ಉತ್ತರಿಸಿದ್ದರು. ಹಾಗೆ ನೋಡಿದರೆ ಕೆ. ಎಂ. ಎಸ್. ಮತ್ತು ನಾನು ಸಂದರ್ಶನ ಮಾಡುವುದಕ್ಕಿಂತ ಜಿ.ಎಸ್.ಎಸ್. ಅವರೇ ಮಾಡಿದರೆ ಚೆನ್ನಾಗಿರುತ್ತದೆಂದು ಸೂಚಿಸಿದ್ದೆವು. ಆದರೆ ದೂರದರ್ಶನದವರು ''ಈಗಾಗಲೇ ನಿಮ್ಮ ಹೆಸರನ್ನು ಸೂಚಿಸಿ ಪತ್ರವೂ ಸಿದ್ಧವಾಗಿದೆ'' ಎಂದು ಹೇಳಿದಾಗ ನಾವು ಸುಮ್ಮನಾಗಬೇಕಾಯಿತು.

ಹಾಗೆಯೇ ಒಂದು ಕ್ಷಣ ಅನ್ನಿಸಿತು: ಮೈಸೂರಿಗೆ 'ರೂಪಕ'ದಂತಿರುವ ಈ ಕೆರೆಯ ಏರಿಯ ಮೇಲೆ ಜಿ.ಎಸ್.ಎಸ್. ಅವರು ತಮ್ಮ ಗುರುಗಳಾದ ಕುವೆಂಪು ಮತ್ತು ತ.ಸು. ಶಾಮರಾಯರ ಜೊತೆಯಲ್ಲಿ ಎಷ್ಟೊಂದು ವಾಕ್‌ಮಾಡಿರಬಹುದು, ಆಗ ಮಾತಾಡುತ್ತ ಕೂತು ಎಂತೆಂಥದೋ ಸಾಂಸ್ಕೃತಿಕ ನೆಲೆಗಟ್ಟುಗಳು ಕೆರೆಯಲ್ಲಿ ಮನಮೋಹಕವಾಗಿ ಕಾಣಿಸಿಕೊಂಡ ತಾವರೆಗಳಂತೆ, ಹಾರಾಡಿದ ನೂರಾರು ವರ್ಣಮಯ ಪಕ್ಷಿಗಳಂತೆ ಸಾಂಸ್ಕೃತಿಕ ಸ್ವರೂಪವನ್ನು ಪಡೆದಿರಬಹುದು ಎಂದು. ಯಾಕೆಂದರೆ ಕುಕ್ಕರಹಳ್ಳಿ ಕೆರೆಯ ಪ್ರಸ್ತಾಪ ಬಂದಾಗಲೆಲ್ಲ ಎಷ್ಟು ಪುಳಕಿತರಾಗುತ್ತಿದ್ದರು!

ಒಮ್ಮೆ ಅವರು ಹೀಗೆಯೇ ಮಾತಿನ ನಡುವೆ ಹೇಳಿದ್ದುಂಟು: "ಯಾರೇ ಸಾಹಿತ್ಯದ ವಿದ್ಯಾರ್ಥಿ ಇರಲಿ, ಅವರು ಮೈಸೂರು ನೋಡಲು ಹೋದರೆ; ಆ ಕೆರೆಯನ್ನು ನೋಡದೆ ಹೋಗಿರುವುದಿಲ್ಲ. ಕುವೆಂಪು ಅವರ ಕಾರಣಕ್ಕಾಗಿ; ಅದಕ್ಕೆ ಬಹುದೊಡ್ಡ ಸಾಂಸ್ಕೃತಿಕ ಆಯಾಮ ಬಂದಿದೆ" ಎಂದು. ಅಂದು ಕೆರೆಯ ಏರಿಯ ಮೇಲಿನ ಸಂದರ್ಶನದ ನಂತರ ಕೆ. ಮರುಳಸಿದ್ದಪ್ಪನವರು ಅಭಿಮಾನದಿಂದ ಹೇಳಿದ್ದರು: "ಶೂದ್ರ, ನಾವು ಎಷ್ಟು ಅದೃಷ್ಟವಂತರು; ಜಿ.ಎಸ್.ಎಸ್. ಅವರ ಸಮ್ಮುಖದಲ್ಲಿ ಅವರ ಗುರುಗಳ ಸಂದರ್ಶನವನ್ನು ಈ ಮಹೋನ್ನತ ಕೆರೆಯ ಏರಿಯ ಮೇಲೆ ಮಾಡಿದೆವು" ಎಂಬ ಭಾವನಾತ್ಮಕ ನುಡಿಯು 'ಎದೆ ತುಂಬಿ ಹಾಡಿದೆನು ಅಂದು ನಾನು' ಎಂಬ ನುಡಿಗಟ್ಟನ್ನು ಯಾರೇ ಹಾಡಿದರೂ; ಅವ್ಯಕ್ತ ಸ್ಮರಣೀಯ ಧ್ವನಿಯೊಂದು ಗುನುಗುನಿಸುತ್ತಿರುತ್ತದೆ. ಈ ದೃಷ್ಟಿಯಿಂದ ನನಗೆ ನಾನೇ ಕೇಳಿಕೊಂಡಿದ್ದೇನೆ; ಹತ್ತಾರು ಸಭೆ ಸಮಾರಂಭಗಳಲ್ಲಿ ಪ್ರಸ್ತಾಪಿಸಿದ್ದೇನೆ; ಕುವೆಂಪು, ಜಿ.ಎಸ್.ಎಸ್., ಲಂಕೇಶ್, ಯು. ಆರ್. ಅನಂತ ಮೂರ್ತಿ, ಕೆ. ಎಂ. ಎಸ್. ಮತ್ತು ಕಿ.ರಂ. ಅಂಥವರ ಕಾಲದ ಮಹಿಮೆಯಲ್ಲಿ ನಾನೂ ಬದುಕಿದ್ದೇನೆ ಎಂದು. ನಿಜವಾಗಿಯೂ ಈ ಮಹಾನೀಯರು ನನ್ನ ಅರಿವಿನ ಬಾಗಿಲುಗಳನ್ನು ತೆರೆದವರು. ಕೇವಲ ನನಗೇ ಯಾಕೆ ಸಾವಿರಾರು ಮಂದಿಯ ಅರಿವನ್ನು ವಿಸ್ತರಿಸಿದ್ದಾರೆ.

ಸುಮಾರು ಎರಡು ದಶಕಗಳ ಹಿಂದೆ ನನ್ನ ಮನೆಯಲ್ಲಿ 'ಕಾವ್ಯ ಮತ್ತು ಅನುಭಾವ ಪರಂಪರೆ' ಎಂಬ ವಿಷಯದ ಮೇಲೆ ಕಾವ್ಯ ಕಮ್ಮಟವನ್ನು ಏರ್ಪಡಿಸಿದ್ದೆ. ಕಿ.ರಂ. ಅವರು ಅದರ ನಿರ್ದೇಶಕರಾಗಿದ್ದರು. ಕರ್ನಾಟಕದ ಬೇರೆ ಬೇರೆ ಕಡೆಯಿಂದ ಮುವತ್ತು ಮಂದಿ ಹೊಸದಾಗಿ ಬರೆಯುತ್ತಿರುವ ಕವಿಗಳು ಭಾಗವಹಿಸಿದ್ದರು. ಮೂರು ದಿನವೂ ಯಾರೂ ಹೊರಗೆ ಹೋಗಲಿಲ್ಲ. ಆ ಸಂದರ್ಭದಲ್ಲಿ ಜಿ.ಎಸ್.ಎಸ್., ರಾಮಚಂದ್ರ ಶರ್ಮ, ಡಿ. ಆರ್. ನಾಗರಾಜ್

ಅವರ ಉಪನ್ಯಾಸದ ಮಾತುಗಳನ್ನು ಈಗಲೂ ಕೆಲವರು ನೆನಪಿಸಿಕೊಳ್ಳುತ್ತಾರೆ. ಅಂದು ಜಿ.ಎಸ್.ಎಸ್. ಅವರು ಕಾಶ್ಮೀರದ ಲಲ್ಲೇಶ್ವರಿ ಮತ್ತು ನಮ್ಮ ಅಕ್ಕಮಹಾದೇವಿಯವರನ್ನು ಕುರಿತು ಮಾತಾಡಿದ್ದರು: "ಅಕ್ಕಮಹಾದೇವಿಯ ಬದುಕು ವಿಲಕ್ಷಣವಾದದ್ದು, ಆದ್ದರಿಂದಲೇ ತುಮುಲಗಳಿಂದ ಕೂಡಿದ್ದು. ಮದುವೆ ಎಂಬ ಸಾಮಾಜಿಕ ವ್ಯವಸ್ಥೆಯನ್ನೇ ಧಿಕ್ಕರಿಸಿ, ಅಲೌಕಿಕವಾದ ಚೆನ್ನಮಲ್ಲಿಕಾರ್ಜುನ ದೇವನನ್ನು ಪತಿಯಾಗಿ ಒಪ್ಪಿಕೊಂಡು, ತನ್ನ ಅಂತರಂಗದ ಅಳಲುಗಳಿಗೆ, ತಾಕಲಾಟಗಳಿಗೆ, ಆಸೆಗಳಿಗೆ ವಚನರೂಪದಲ್ಲಿ ಅಭಿವ್ಯಕ್ತಿಯನ್ನು ಕೊಟ್ಟಿದ್ದಾಳೆ. ಉಳಿದಾವ ವಚನಕಾರರಲ್ಲೂ ಕಾಣದ ಭಾವಗೀತಾತ್ಮಕವಾದ ಗುಣ ಹಾಗೂ 'ಕಾಂತಾ ಸಮ್ಮಿತಿ' ಅಕ್ಕನ ವಚನಗಳಲ್ಲಿದೆ. ಚೆನ್ನಮಲ್ಲಿಕಾರ್ಜುನನ್ನು ಹುಡುಕಿಕೊಂಡು ಹೊರಟಾಗ;

**ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆನವ್ವಾ**
**ಏರಿಲ್ಲದ ಗಾಯದಲ್ಲಿ ನೊಂದೆನವ್ವಾ**

ಎಂದು ತನ್ನ ಹುಡುಕಾಟವನ್ನು ತೋಡಿಕೊಳ್ಳುತ್ತಾಳೆ." ಇಂಥ ಒಳನೋಟಗಳಿಂದ ಕೂಡಿದ ಸಾಕಷ್ಟು ಮಾತುಗಳನ್ನು ಅಂದು ಆಡಿದ್ದರು. ಇದನ್ನು ಬರೆಯುವ ಕಾಲಕ್ಕೆ ಡಾ॥ ಎಂ. ಎಸ್. ಆಶಾದೇವಿಯವರು ಪ್ರಕಟಿಸಿರುವ ಆ ಕಾಶ್ಮೀರದ ಲಲ್ಲೇಶ್ವರಿ ಕೃತಿ ಕುರಿತು ಆಪ್ತವಾಗಿ ನುಡಿಯುತ್ತ "ಆ ಹುಡುಗಿ ಎಷ್ಟು ಚೆನ್ನಾಗಿ ಯೋಚನೆ ಮಾಡ್ತಾರೆ" ಎಂದಿದ್ದರು. ಈ ದೃಷ್ಟಿಯಿಂದ ಹಿಂದೆ ಪ್ರಸ್ತಾಪಿಸಿದಂತೆ ಅವರು ಜೀವನ ಪ್ರೇಮವನ್ನು ಹುಡುಕುತ್ತಿದ್ದರು; ಅತ್ಯುತ್ತಮ ಕೃತಿಗಳಲ್ಲಿ.

ಸುಮಾರು ಎರಡುಮೂರು ದಶಕಗಳ ಹಿಂದೆ ನಾನು 'ಶೂದ್ರ'ದಲ್ಲಿ ರಾಹುಲ್ ಸಾಂಕೃತ್ಯಾಯನ ಅವರ 'ವೋಲ್ಗಾಗಂಗಾ' ಕೃತಿ ಕುರಿತು ಒಂದು ಟಿಪ್ಪಣಿ ಬರೆದಿದ್ದೆ. ಅದನ್ನು ಓದಿ ತಕ್ಷಣ ಆ ಕೃತಿಯನ್ನು ಕೇಳಿದರು. ಹೋಗಿ ಕೊಟ್ಟೆ, ಅದಕ್ಕೆ ಬದಲಾಗಿ "ಇದನ್ನು ಓದು ಶೂದ್ರ" ಎಂದು ಎಂ.ಟಿ. ವಾಸುದೇವನ್ ನಾಯರ್ ಅವರ 'ಕಾಲ' ಕಾದಂಬರಿಯನ್ನು ಕೊಟ್ಟರು. ಇದೇ ಸಮಯದಲ್ಲಿ ನನ್ನಿಂದ ಫಣೀಶ್ವರ ರೇಣು ಅವರ 'ಮಾಸಿದ ಸೆರಗು' ಎಂಬ ಅಪೂರ್ವ ಕಾದಂಬರಿಯನ್ನು ಓದಿಸಿದ್ದರು. ಇದು ಹೆಚ್. ಎಸ್. ಪಾರ್ವತಿಯವರ ಅನುವಾದ. ಈ ದೃಷ್ಟಿಯಿಂದ ಜಿ.ಎಸ್.ಎಸ್. ಅವರನ್ನು ಲೆಕ್ಕವಿಲ್ಲದಷ್ಟು ಬಾರಿ ನೋಡಿರಬಹುದು. ಆಗೆಲ್ಲ ಸುಮ್ಮನೆ ಕೂತಿದ್ದುದನ್ನು ಎಂದೂ ನೋಡಿಲ್ಲ. ಯಾವುದಾದರೂ ಪುಸ್ತಕವನ್ನೋ ಅಥವಾ ತಮ್ಮ ಪುಸ್ತಕಗಳ ಮುದ್ರಣದ ಪ್ರೂಫ್‌ನೋಡುತ್ತ ಕೂತಿರುತ್ತಿದ್ದರು.

ಹಾಗೆಯೇ ಓದುವಾಗ ಪಕ್ಕದಲ್ಲಿ ಲೇಖನಿಯಂತೂ ಇರಲೇಬೇಕು. ನಮ್ಮ ಬದುಕಿನ ಕೊನೆಯವರೆವಿಗೂ ಕಲಿತದ್ದು ಸಾಲದು ಎಂಬ ಮನೋಭೂಮಿಕೆಯಿಂದಲೇ ಓದಿನ ಅರಿವಿನ ಬಾಗಿಲುಗಳನ್ನು ತೆರೆದು ನೋಡುತ್ತಿರಲೇಬೇಕು ಎಂಬುದನ್ನು ಗಾಢವಾಗಿ ನಂಬಿದ್ದರು.

ಅವರ ಹೃದಯ ಶಸ್ತ್ರಚಿಕಿತ್ಸೆಗೆ ಡಾ॥ ಜವಳಿಯುವರ ಆಸ್ಪತ್ರೆಗೆ ದಾಖಲಾಗಬೇಕಾಗಿತ್ತು. ಲಂಕೇಶ್ ಅವರು "ಶೂದ್ರ ಮೇಸ್ಟ್ರನ್ನು ನೋಡಿ ಬರೋಣವೆಂದು'' ಕರೆದುಕೊಂಡು ಹೋದರು. ಹೋದಾಗ ಬೆಳಿಗ್ಗೆ ಹತ್ತೂವರೆಯಾಗಿತ್ತು. ಹೊರಗೆ ಗರಿಕೆ ಹುಲ್ಲಿನ ಹಾಸಿನ ಮೇಲೆ ಕುರ್ಚಿಯ ಮೇಲೆ ಕೂತು ಓದುತ್ತಿದ್ದರು. ನಮ್ಮನ್ನು ಆಶ್ಚರ್ಯದಿಂದ ನೋಡಿ "ಏನು ತಿಳಿಸದೇ ಬಂದು ಬಿಟ್ಟಿದ್ದೀರಿ?'' ಎಂದು ಕುರ್ಚಿ ತರಿಸಿ ಕೂರಿಸಿದರು. ಬೆಚ್ಚನೆಯ ಕಾಫೀ ಕುಡಿದು ಮಾತಾಡುವಾಗ; ಆಪರೇಷನ್ ವಿಷಯ ತಿಳಿದುಕೊಂಡು ಲಂಕೇಶ್ ಅವರು "ಧೈರ್ಯವಾಗಿರಿ ಏನೂ ಆಗುವುದಿಲ್ಲ. ಈಗೇನು ವೈದ್ಯಕೀಯ ತಂತ್ರಜ್ಞಾನ ಸಾಕಷ್ಟು ಬೆಳೆದಿದೆ'' ಎಂದರು. ಅದಕ್ಕೆ ಜಿ.ಎಸ್.ಎಸ್. ಅವರು ನಗುತ್ತ "ಇರಲಿಬಿಡಿ ಲಂಕೇಶ್, ಇಲ್ಲಿಯವರೆವಿಗೂ ಚೆನ್ನಾಗಿ ಬದುಕಿದ್ದೇನೆ. ನೋಡಬೇಕಾದ್ದನ್ನು, ಓದಬೇಕಾದ್ದನ್ನು, ಅನುಭವಿಸಿದ್ದೇನೆ. ಸಾವಿಗೆ ಯಾಕೆ ಅಷ್ಟು ಭಯಪಡಬೇಕು. ನೋಡಿ, ಕೃಷ್ಣ ಆಲನ ಹಳ್ಳಿ, ಡಿ.ಆರ್. ನಾಗರಾಜ್ ಅವರು ಇನ್ನು ದೀರ್ಘಕಾಲ ಬದುಕಬೇಕಾಗಿದ್ದವರು, ನಿಧನರಾಗಿದ್ದಾರೆ. ನಾವೂ ಅಷ್ಟೇ ಪ್ರೀತಿಯಿಂದ ಸಾವನ್ನು ಒಪ್ಪಿಕೊಂಡರೆ ಮಾನಸಿಕ ನೆಮ್ಮದಿ ಇರುತ್ತದೆ.'' ಎಂದರು. ಅದಕ್ಕೆ ಲಂಕೇಶ್ ಅವರು ಮರುಮಾತಾಡದೆ ಪೆಚ್ಚಾಗಿ ಕೂತುಬಿಟ್ಟರು. ಕೊನೆಗೆ ಸ್ವಲ್ಪ ಸಮಯವಿದ್ದು ಎದ್ದು ಹೊರಗೆ ಬಂದೆವು. ಹೊರಗೆ ಒಂದು ಕ್ಷಣ ಹಾಗೆಯೇ ನಿಂತಿದ್ದು; ವಿಷಾದದಿಂದ ನನ್ನ ಹೆಗಲ ಮೇಲೆ ಕೈಹಾಕಿ "ಮೇಸ್ಟ್ರು ಬದುಕನ್ನು ಎಷ್ಟು ಆರಾಮವಾಗಿ ಸ್ವೀಕರಿಸಿದ್ದಾರೆ'' ಎಂದಿದ್ದರು. ಇದಾದ ಮೇಲೆ ಜಿ.ಎಸ್.ಎಸ್. ಆಪರೇಷನ್ ಮಾಡಿಸಿಕೊಂಡು ಬಂದರು. ಆಪರೇಷನ್ ಆದ ಜಾಗದ ಗಾಯ ವಾಸಿಯಾಗದೆ ಹುಣ್ಣಾಗಿಯೇ ಇತ್ತು. ಆಗ ಮತ್ತೆ ಲಂಕೇಶ್ ಅವರ ಜೊತೆ ನೋಡಲು ಹೋದೆವು. ಗಾಯದ ವಿಷಯ ಬಂತು. "ಹುಣ್ಣಾಗಿ ಹಾಗೆಯೇ ಉಳಿದಿದೆಯಂತೆ ಹೌದಾ?'' ಎಂದು ಕೇಳಿದರು. ಅದಕ್ಕೆ ಅವರು ನಗುತ್ತ "ಇರಲಿಬಿಡಿ ಎದೆಯ ಮೇಲೆ ಸ್ನೇಹಿತನಂತೆ'' ಎಂದಾಗ ಲಂಕೇಶ್ ಅವರು ಮೌನವಾಗಿ ತಲೆತಗ್ಗಿಸಿ ಕೂತುಬಿಟ್ಟಿದ್ದರು.

ಇದಕ್ಕಿಂತ ಕೆಲವು ವರ್ಷಗಳ ಮೊದಲು ನಡೆದ ಒಂದು ಅರ್ಥಪೂರ್ಣ ಸಂದರ್ಭವನ್ನು ದಾಖಲಿಸುವುದು ಸೂಕ್ತ ಅನ್ನಿಸುತ್ತದೆ. ಅವರು ಸಾಹಿತ್ಯ ಅಕಾಡೆಮಿಯ

ಅಧ್ಯಕ್ಷರಾಗಿದ್ದರು. ೧೯೮೭ರಲ್ಲಿ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದ ಕಾದಂಬರಿಗಳ ಬಗ್ಗೆ ಒಂದು ವಿಚಾರ ಸಂಕಿರಣವನ್ನು ಚಿತ್ರದುರ್ಗದಲ್ಲಿ ಏರ್ಪಡಿಸಿದ್ದೆವು. ಎರಡು ದಿವಸದ ಕಾರ್ಯಕ್ರಮ. ಸಮಾರೋಪದ ದಿವಸ, ಅಂದು ಭಾನುವಾರ. ಬೆಳಿಗ್ಗೆ ಆರುಗಂಟೆಗೆ ಚಿತ್ರದುರ್ಗದ ಕೋಟೆ ನೋಡುತ್ತಲೇ ವಾಕ್ ಹೋಗಿ ಬರೋಣ ಎಂದು ಕರೆದುಕೊಂಡು ಹೋದರು. ಅದನ್ನು ನೋಡುತ್ತ, ವಾಕ್ ಮಾಡುತ್ತ ಸಂಭ್ರಮ ಪಟ್ಟೆವು. ಮತ್ತೆ ಎಂಟುಗಂಟೆಗೆ ಸ್ನಾನ ಮುಗಿಸಿ ಸಮಾರೋಪಕ್ಕೆ ಎಸ್. ನಿಜಲಿಂಗಪ್ಪ ಅವರನ್ನು ಕರೆದುತರಲು ಹೋದೆವು. ನಾವು ಅವರ ಮನೆಗೆ ಹೋದಾಗ ಬೆಳಿಗ್ಗೆ ಎಂಟುಕಾಲು ಅಗಿತ್ತು. ಮನೆಯಲ್ಲಿ ನಿಜಲಿಂಗಪ್ಪನವರು ಒಬ್ಬರೇ ಇದ್ದರು. ಚಾಪೆಯ ಮೇಲೆ ಕೂತಿದ್ದರು. ಮುಂದುಗಡೆ ಕಡಿಮೆ ಎತ್ತರದ ಟಿಪಾಯಿ ಇತ್ತು. ಪಕ್ಕದಲ್ಲಿ ತಮ್ಮ ಜುಬ್ಬಾಗೆ ಗುಂಡಿಯನ್ನು ಹಾಕಿದ್ದರು. ಸೂಜಿದಾರ ಅಲ್ಲಿಯೇ ಇತ್ತು. ಮೆಲುದನಿಯಲ್ಲಿ ಸಂಗೀತ ಗುನುಗುನಿಸುತ್ತಿತ್ತು. ಯಾವುದೋ ಪುಸ್ತಕವನ್ನು ಓದುತ್ತಿದ್ದರು. ಆಗ ನಾನು ಖುಷಿಯಿಂದ ಆ ಸಂಗೀತ ಆಲಿಸುವುದರ ಬಗ್ಗೆ ಕೇಳಿದೆ. "ನೋಡಿ ನಾನು ಕಳೆದ ಅರವತ್ತು ವರ್ಷಗಳಿಂದ ಇದನ್ನು ಅಭ್ಯಾಸಮಾಡಿಕೊಂಡು ಬಂದಿದ್ದೇನೆ. ನನ್ನ ಓದಿಗೆ ಹೊರಗಿನ ಶಬ್ದ ಇಷ್ಟವಾಗುವುದಿಲ್ಲ. ಈ ಸಂಗೀತ ಹೊರಗಿನ ಆ ಗದ್ದಲವನ್ನು ತಪ್ಪಿಸಿದೆ. ಕ್ಷಮಿಸಿ, ಮನೆಯಲ್ಲಿ ಯಾರೂ ಇಲ್ಲ. ನಿಮಗೆ ಕಾಫೀ ಕೊಡಲು" ಎಂದರು. ನಾವು ಬೇಡವೆಂದವು. ಈಗ ತಾನೇ ಆಗಿದೆಯೆಂದು. ಅವರು ಜುಬ್ಬಾ ಧರಿಸಿ ಎದ್ದು ನಿಂತರು. ಸದಾ ಶ್ವೇತಾಧಾರಿ. ಅವರ ಮನೆಯೂ ಶ್ವೇತ ಭವನ. ಮನೆಯಿಂದ ಹೊರಗೆ ಬಂದೆವು. ಚಪ್ಪಡಿ ಕಲ್ಲಿನ ಮೆಟ್ಟಿಲು ಮೇಲೆ ನಿಂತು; ಅದು ಇದೂ ಮಾತಾಡುವ ಸಮಯದಲ್ಲಿ ಕುವೆಂಪು ಅವರ ವಿಷಯ ಬಂತು. ಅದಕ್ಕೆ ಜಿ.ಎಸ್.ಎಸ್. ಅವರು "ಕುವೆಂಪು ಅವರು ತಮ್ಮ ಶ್ರೀಮತಿಯವರು ಕಾಲವಾದ ಮೇಲೆ ಅನಾಥರಾಗಿಬಿಟ್ಟಿದ್ದಾರೆ." ಎಂದರು. ಆ ಮಾತಿಗೆ ನಿಜಲಿಂಗಪ್ಪ ನವರು "ನಾನೂ ನನ್ನ ಪತ್ನಿ ಕಾಲವಾದ ಮೇಲೆ ಅನಾಥನಾಗಿ ಬಿಟ್ಟಿದ್ದೇನೆ" ಎಂದರು. ಅವರ ಕಣ್ಣಲ್ಲಿ ನೀರು ಬಂತು. ನಾವು ಪೆಚ್ಚಾಗಿಬಿಟ್ಟೆವು. "ಕ್ಷಮಿಸಿ, ನಿಮಗೆ ತೊಂದರೆ ಕೊಟ್ಟೆ. ಹೌದು ಬದುಕಿನಲ್ಲಿ ಹೀಗೆ ಯಾರ್ಯಾರನ್ನೋ ಕಳೆದುಕೊಳ್ಳುತ್ತ ಹೋಗುತ್ತೇವೆ. ಸುಮ್ಮನೆ ವ್ಯಥೆಯನ್ನು ನುಂಗಿಕೊಂಡು ಒಂದು ದಿವಸ ನಾವೂ ಹೋಗುತ್ತೇವೆ. ಕೊನೆಗೂ ಜೀವನ ಚಕ್ರವೆಂದರೆ ಇಷ್ಟೇ" ಎಂದರು.

ನಿಧಾನವಾಗಿ ಮೆಟ್ಟಿಲು ಇಳಿದರು. ತೊಂಬತ್ತು ವರ್ಷಗಳ ಅನನ್ಯ ಬದುಕನ್ನು ಕಂಡವರು. ಅದ್ಭುತವಾಗಿ ಮಾತಾಡಿದರು, ಜಿ.ಎಸ್.ಎಸ್. ಅವರ ರೀತಿಯಲ್ಲಿ ಪುಟ್ಟ ಟಿಪ್ಪಣಿಯನ್ನು ಮಾಡಿಕೊಂಡು ಬಂದಿದ್ದರು. ಇದಾದ ಒಂದು ವರ್ಷಕ್ಕೆ

ಬಾತ್‌ರೂಮಿನಲ್ಲಿ ಬಿದ್ದು ಮೂಳೆ ಮುರಿತದಿಂದ ಬೆಂಗಳೂರಿನ ಬೌರಿಂಗ್ ಆಸ್ಪತ್ರೆಯಲ್ಲಿ ದಾಖಲಾಗಿದ್ದರು. ಜಿ.ಎಸ್.ಎಸ್. ಅವರು ಸಾಧ್ಯವಾದರೆ ನಿಜಲಿಂಗಪ್ಪನವರನ್ನು ನೋಡಿ ನನ್ನ ನಮಸ್ಕಾರ ತಿಳಿಸಿ ಬಾ ಶೂದ್ರ ಎಂದಿದ್ದರು. ಹೋಗಿ ನೋಡಿದೆ. ಆಸ್ಪತ್ರೆಯಲ್ಲಿ ತಮ್ಮ ಕೊಠಡಿಯ ಹೊರಗೆ ಆರಾಮ ಕುರ್ಚಿಯ ಮೇಲೆ ಕೂತು ಚಿಕ್ಕ ಟ್ರಾನ್ಸಿಸ್ಟರ್ ರೇಡಿಯೋ ಇಟ್ಟುಕೊಂಡು ಸಂಗೀತ ಕೇಳುತ್ತ ಓದುತ್ತಿದ್ದರು. ನಾನು ಅವರೊಡನೆ ಏನೇನೋ ಮಾತಾಡುತ್ತ ಶಿವರುದ್ರಪ್ಪನವರು ತಿಳಿಸಿದ ನಮಸ್ಕಾರದ ಬಗ್ಗೆ ಹೇಳಿದೆ, "ನನ್ನ ನಮಸ್ಕಾರ ತಿಳಿಸಪ್ಪ" ಎಂದು ಹೇಳುತ್ತಲೇ ಒಳ್ಳೆಯ ಕವಿಯಪ್ಪ ಬಹುದೊಡ್ಡ ವಿಚಾರವಾದಿ. ಅಂದು ನೀವು ದುರ್ಗದ ನಮ್ಮ ಮನೆಗೆ ಬಂದು ಹೋದ ಮೇಲೆ ಗೊತ್ತಾಯಿತು. ಅವರು ಅಬ್ರಾಹ್ಮಣ ಲೇಖಕರ ವೇದಿಕೆಯಾದ 'ಒಕ್ಕೂಟ'ದ ಅಧ್ಯಕ್ಷರಾಗಿದ್ದರು ಎಂದು. ಅದನ್ನು ತಿಳಿದು ಖುಷಿ ಪಟ್ಟೆ ಎಂದಿದ್ದರು. ಈ ವಿಷಯ ಜಿ.ಎಸ್.ಎಸ್. ಅವರಿಗೆ ತಿಳಿಸಿದಾಗ; ಸಂಭ್ರಮ ಪಟ್ಟಿದ್ದರು. ಅಷ್ಟರ ಮಟ್ಟಿಗೆ ಸಾಮಾಜಿಕ ಅರಿವು ಇದೆಯಲ್ಲ ಎಂದು. ಇದಾದ ಆರು ತಿಂಗಳಿಗೆ ನಿಜಲಿಂಗಪ್ಪನವರು ನಿಧನರಾಗಿದ್ದರು.

ಜಿ.ಎಸ್. ಶಿವರುದ್ರಪ್ಪನವರು ಒಕ್ಕೂಟದ ಅಧ್ಯಕ್ಷರಾದರು. ಲಂಕೇಶ್, ತೇಜಸ್ವಿ, ಪ್ರೊ. ಎಂ.ಡಿ. ನಂಜುಂಡಸ್ವಾಮಿ ಮುಂತಾದವರು ನಿಧಾನವಾಗಿ ಉತ್ಸಾಹ ಕಳೆದುಕೊಳ್ಳುತ್ತ ಬಂದಿದ್ದರು. ಆದರೆ ಜಿ.ಎಸ್.ಎಸ್. ಅವರು ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದುಕೊಂಡೇ 'ಒಕ್ಕೂಟ'ದ ಅಧ್ಯಕ್ಷರಾಗಿದ್ದರು. ಆ ಸಮಯದಲ್ಲಿ ಕೆಲವು ಲೇಖಕರು ಮತ್ತು ಪತ್ರಕರ್ತರು ಇಲ್ಲಸಲ್ಲದ ಆರೋಪ ಹೊರಿಸಿದ್ದರು. ಅದು ಓದುಗರ ವೇದಿಕೆಯಲ್ಲಿ ಸುದ್ದಿಯಾಗುತ್ತಿತ್ತು. ಇದರಿಂದ ತುಂಬ ನೊಂದುಕೊಂಡರು. ಕೊನೆಗೆ ಒಕ್ಕೂಟದ ಶಿವಮೊಗ್ಗದ ಸಮಾವೇಶದಲ್ಲಿ 'ಇನ್ನುಮುಂದೆ ಬ್ರಾಹ್ಮಣ ಲೇಖಕರಿಗೆ ಸದಸ್ಯತ್ವ ಕೊಡಬಹುದೆಂದು ನಿರ್ಣಯ ತೆಗೆದುಕೊಂಡರು. ಅದರ ಪ್ರಾರಂಭದಲ್ಲಿಯೇ ಯು. ಆರ್. ಅನಂತರಮೂರ್ತಿ, ಕಿ. ರಂ. ನಾಗರಾಜ ಅಂಥವರಿಗೆ ಸದಸ್ಯತ್ವ ಕೊಡಬೇಕೆಂದು. ನಾನು ಸಂಚಾಲಕನಾಗಿ ಸೂಚಿಸಿದ್ದೆ. ಆದರೆ ಯಾರೂ ಒಪ್ಪಲಿಲ್ಲ. ಲಂಕೇಶ್ ಅವರ ಮನೆಯಲ್ಲಿ ನಡೆದ ಸಭೆಯಲ್ಲಿ ಸಂಚಾಲಕತ್ವಕ್ಕೆ ರಾಜಿನಾಮೆ ಕೊಟ್ಟು ಹೊರಗೆ ಬಂದಿದ್ದೆ. ಜಿ.ಎಸ್.ಎಸ್. ಅವರು ಆ ಸಭೆಯಲ್ಲಿರಲಿಲ್ಲ. ಮುಂದೆ ಈ ಒಕ್ಕೂಟದ ಕಾರಣಕ್ಕಾಗಿಯೇ ತೇಜೋವಧೆ ನಡೆಯುವಾಗ ಅವರು ಎಂದೂ ಅಧೀರರಾಗಲಿಲ್ಲ. ಇದು ಸ್ವಾಭಾವಿಕ ಎನ್ನುವಂತೆ ಆರಾಮವಾಗಿದ್ದರು. ಅದೇ ಸಮಯಕ್ಕೆ ಅವರು ಕೊಡುತ್ತಿದ್ದ ಉದಾಹರಣೆ: ಕುವೆಂಪು ಅವರನ್ನು ಕುರಿತು, "ನೋಡಿ ಇಂದು ಬಹಳಷ್ಟು ಮಂದಿ ಅಬ್ರಾಹ್ಮಣ

ಗಟ್ಟಿಮುಟ್ಟಾದ ಲೇಖಕರಿದ್ದಾರೆ. ಕುವೆಂಪು ಪುರೋಹಿತಶಾಹಿಯ ವಿರುದ್ಧ ಧ್ವನಿಯೆತ್ತಿದಾಗ ಅವರ ಜೊತೆ ಇದ್ದದ್ದು ತ.ಸು. ಶಾಮರಾಯರಂಥ, ವೆಂಕಣ್ಣಯ್ಯನವರಂಥ ಲೇಖಕರು" ಎಂದು ಹೇಳಿದಾಗ ನಾನು ವಿಸ್ಮಯಗೊಂಡಿದ್ದೆ. ಹೀಗೆ ಬರೆಯುವಾಗ ಅವರ 'ಗಾಂಧಿ' ಕವಿತೆ ನೆನಪಿಗೆ ಬರುತ್ತದೆ. ಅದರ ಕೆಲವು ಸಾಲುಗಳು ಹೀಗಿವೆ:

**"ಪವಾಡಗಳನ್ನು ತೋರಿಸಿ ಯಾರನ್ನು ಮರುಳು ಮಾಡಲಿಲ್ಲ**
**ಮಾಡಿದ್ದೇ ಪವಾಡದ ತಲೆ ಮೆಟ್ಟಿತು**
**.....ಕತ್ತಿ–ಕೋವಿ ಹಿಡಿಯಲಿಲ್ಲ**
**ಆದರೂ ಯುದ್ಧ ಮಾಡಿದೆ**
**ತುಟಿ ಬಿಗಿಯಲಿಲ್ಲ. ಹಲ್ಲು ಕಚ್ಚಲಿಲ್ಲ**
**ಕಣ್ಣು ಕೆಂಪಗೆ ಮಾಡಲಿಲ್ಲ**
**ನಗು ನಗುತ್ತಲೇ ಎದುರಾಳಿಗಳ ಮೇಲೆ**
**ಮುನ್ನುಗ್ಗಿದೆ**
**ಗೆದ್ದೆ"**

ಎಂಥ ಅಪೂರ್ವವಾದ ಧ್ವನಿಯನ್ನು ತುಂಬಿಕೊಂಡಿದೆ. ಈ ಕವಿತೆಗೆ ಸಂಬಂಧಿಸಿಯೇ ಒಮ್ಮೆ ಜಿ.ಎಸ್.ಎಸ್. ಅವರ ಬಳಿ ಪ್ರಸ್ತಾಪಿಸಿದ್ದೆ: "ಅಮೇರಿಕಾದ ಪ್ರಸಿದ್ಧ ಚಿಂತಕ ಮತ್ತು ಇತಿಹಾಸ ತಜ್ಞ ಜೀನೆ ಶಾರ್ಪ್ ಬಗ್ಗೆ ಹೇಳಿದ್ದೆ. ೧೯೩೦ಕ್ಕಿಂತ ಮುಂಚೆಯೇ 'ವಾರ್ ವಿಥೌಟ್ ವೆಪನ್ಸ್' ಮೂಲಕ ಯುದ್ಧವನ್ನು ವಿರೋಧಿಸುವ ಗಾಂಧೀಜಿಯವರನ್ನು ಅಮೇರಿಕಾಗೆ ಮತ್ತು ಯುರೋಪಿನ ಇತರೆ ಪ್ರದೇಶಗಳಿಗೆ ಪರಿಚಯಿಸಿದ್ದವರು. ಇಂದಿಗೂ ತಮ್ಮ ತೊಂಬತ್ತೆರಡನೆಯ ವಯಸ್ಸಿನಲ್ಲಿಯೂ ಕ್ರಿಯಾಶೀಲರಾಗಿರುವಂಥವರು." ಎಂದು ಹೇಳಿದಾಗ ಜೀನೆ ಅವರಿಗೆ ಸಂಬಂಧಿಸಿದ ಸಾಹಿತ್ಯವನ್ನು ತಲುಪಿಸುವೆ ಎಂದಿದ್ದೆ. ಅಷ್ಟರ ಮಟ್ಟಿಗೆ ಎಲ್ಲ ಅಮೂಲ್ಯವಾದದ್ದು ಸಿಕ್ಕಿದರೆ; ಅದನ್ನು ಓದಬೇಕು, ತಿಳಿಯಬೇಕು ಎಂಬ ಕಳಕಳಿಯನ್ನು ಎಂದೂ ಕಳೆದುಕೊಂಡವರಲ್ಲ.

ಹೀಗೆ ಬಹುದೊಡ್ಡ ವ್ಯಕ್ತಿತ್ವವನ್ನು ಪಡೆದಿದ್ದರಿಂದಲೇ ಧೈರ್ಯವನ್ನು ಯಾವಾಗಲೂ ಸ್ಥಾಯಿಯಾಗಿಯೇ ಉಳಿಸಿಕೊಂಡಿದ್ದರು. ತುರ್ತುಪರಿಸ್ಥಿತಿಯ ನಂತರ ನವನಿರ್ಮಾಣ ಕ್ರಾಂತಿಯನ್ನು ಕುರಿತು ಜಯಪ್ರಕಾಶ್ ನಾರಾಯಣ ಅವರು ಕರೆಕೊಟ್ಟಾಗ ಅದಕ್ಕೆ ಸ್ಪಂದಿಸಿದವರು. ಆಗ ಬೆಂಗಳೂರಿನ ಸೆಂಟ್ರಲ್

ಕಾಲೇಜಿನ ಗ್ರಂಥಾಲಯದ ಮುಂದೆ ಒಂದು ಮೌನ ಮೆರವಣಿಗೆ ಏರ್ಪಡಿಸಿದ್ದಾಗ; ಅದರ ಮಂಚೂಣಿಯಲ್ಲಿ ಭಿತ್ತಿಪತ್ರವನ್ನು ಹಿಡಿದುನಿಂತವರು. ಅದು ಲೇಖಕರು, ಸರ್ವೋದಯ ಹೋರಾಟಗಾರರು ಹಾಗೂ ಕಲಾವಿದರು ಸೇರಿದ್ದ ಬಹುದೊಡ್ಡ ಮೆರವಣಿಗೆ. ಇದಕ್ಕೆ ಸಂಬಂಧಿಸಿದಂತೆ ಆಗಿನ ಉಪಕುಲಪತಿಗಳಾಗಿದ್ದ ಡಾ॥ ಹೆಚ್. ನರಸಿಂಹಯ್ಯನವರು ಜಿ.ಎಸ್.ಎಸ್. ಅವರನ್ನು ಭೇಟಿಯಾಗಿ ಆಕ್ಷೇಪಣೆ ಎತ್ತಿದಾಗ; ಭಾಗವಹಿಸಿದ್ದ ಎಲ್ಲರ ಹೆಸರನ್ನು ಪ್ರಸ್ತಾಪಿಸಿ ಅವರೆಲ್ಲ ದೇಶದ್ರೋಹಿಗಳಾ? ಎಂಬ ಪುಟ್ಟ ಪ್ರಶ್ನೆಗೆ ಡಾ॥ ಹೆಚ್.ಎನ್. ಅವರು ಮರು ಮಾತಾಡದೆ ಹಿಂದಿರುಗಿದ್ದರು. ಹಾಗೆಯೇ ಬಸವಲಿಂಗಪ್ಪನವರ ಬೂಸಾ ಗಲಾಟೆಯ ಸಮಯದಲ್ಲಿ ಸೆಂಟ್ರಲ್ ಕಾಲೇಜಿನ ಇಂಗ್ಲೀಷ್ ವಿಭಾಗದ ಮುಂಭಾಗದಲ್ಲಿಯೇ ಕೆಲವು ಜಾತಿವಾದಿ ವಿದ್ಯಾರ್ಥಿಗಳು ಲಂಕೇಶ್ ಅವರ ಮೇಲೆ ಹಲ್ಲೆ ನಡೆಸಿದಾಗ; ಅದನ್ನು ಆಕ್ಷೇಪಿಸಿ ಉಪಕುಲಪತಿಗಳು ಹೇಳಿಕೆಯನ್ನು ಕೊಡದಿದ್ದಾಗ; ಜಿ.ಎಸ್.ಎಸ್. ಅವರ ನೇತೃತ್ವದಲ್ಲಿ ಕಿ.ರಂ. ಮುಂತಾದವರು ಸೇರಿ ಡಾ॥ ಹೆಚ್.ಎನ್. ಅವರನ್ನು ಬಸವನಗುಡಿಯ ಅವರ ಸರಳ ಮನೆಯಲ್ಲಿ ಭೇಟಿಯಾಗಿದ್ದೆವು. ಅಂದು ಉಪಕುಲಪತಿಗಳಿಗೆ ಮನದಟ್ಟಾಗುವಂತೆ ಎಷ್ಟು ಅರ್ಥಪೂರ್ಣವಾಗಿ ವಾದ ಮಂಡಿಸಿದ್ದರು. ಆದರೆ ಹೆಚ್.ಎನ್. ಅಷ್ಟೊಂದು ಗಟ್ಟಿ ಮನಸ್ಸಿನವರು ಆಗಿರಲಿಲ್ಲ. ಸುಮ್ಮನೇ "ನೋಡೋಣ ಸರ್' ಎಂದು ಹೇಳಿ ನಮ್ಮನ್ನು ಕಳಿಸಿಕೊಟ್ಟರು. ಇದರಿಂದ ಜಿ.ಎಸ್.ಎಸ್. ಬೇಸರಗೊಂಡಿದ್ದರು.

ಹೆಚ್ಚು ಪ್ರಜಾಪ್ರಭುತ್ವವಾದಿಯಾಗಿದ್ದುದರಿಂದ ಎಲ್ಲವನ್ನು ಮಾನವೀಯ ನೆಲೆಗಳಿಂದಲೇ ನೋಡಲು ಪ್ರಯತ್ನಿಸಿದರು. ಅಲ್ಪಸಂಖ್ಯಾತರು ಮತ್ತು ಕೆಳವರ್ಗದವರ ಬಗ್ಗೆ ಕಳಕಳಿ ಇದ್ದುದರಿಂದಲೇ ಅವರು ವ್ಯವಸ್ಥೆ ಮಾಡುತ್ತಿದ್ದ ಎಲ್ಲ ವಿಚಾರ ಸಂಕಿರಣಗಳು ಪರೋಕ್ಷವಾಗಿ ಅದಕ್ಕೆ ಪೂರಕವಾಗಿಯೇ ಇದ್ದುವು. ಕೊನೆಗೂ ಸಂಸ್ಕೃತಿ ಎಂದರೇನು ಎಂದು ಕೇಳಿಕೊಳ್ಳುತ್ತಿದ್ದರು; ವ್ಯವಸ್ಥೆಗೆ ಅಂಟಿಕೊಳ್ಳುವುದು ಅಲ್ಲ. ಅದರ ಗುಣಾವಗುಣಗಳಿಗೆ ಮುಖಾಮುಖಿಯಾಗುವುದೇ ನಿಜವಾದ ಸೃಜನಶೀಲತೆಯ ಲಕ್ಷಣ ಎಂದು ಭಾವಿಸಿದ್ದರು. ಎಂದೂ ಹೌದಪ್ಪಗಳಾಗಲು ಪ್ರಯತ್ನಿಸಲಿಲ್ಲ. ಜಾತ್ಯತೀತತೆ ಮತ್ತು ಸರ್ವಧರ್ಮ ಸಮನ್ವಯತೆ ಎಂಬುದು ಘೋಷಣೆಗಳಿಂದ ಹುಟ್ಟುವುದಿಲ್ಲ. ಅದಕ್ಕೆ ಬೇಕಾಗಿರುವ ವಾತಾವರಣವನ್ನು ಸೃಷ್ಟಿಸುವುದೂ ಕೂಡ ಮುಖ್ಯ ಎಂದು ತಿಳಿದರು. ಅದಕ್ಕೆ ಪೂರಕವಾಗಿ ಸ್ಪಂದಿಸುವ ಮನಸ್ಸುಗಳನ್ನೆಲ್ಲ ಒಂದೆಡೆ ಸೇರಿಸುವುದಕ್ಕೆ ಸದಾ ತಮ್ಮ ಕಾರ್ಯಕ್ರಮಗಳ ಮೂಲಕ ಪ್ರಯತ್ನಿಸಿದರು. ಈ ನೆಲೆಯಲ್ಲಿ ಅವರ 'ರಿಪೇರಿ' ಕವನವು ಅತ್ಯಂತ ಮಾರ್ಮಿಕವಾದದ್ದು. ಅದರ ಪ್ರಾರಂಭದ ಸಾಲು ಹೀಗಿವೆ:

**"ಎಲ್ಲೋ ಯಾವುದೋ ಕೀಲು ತಪ್ಪಿದೆ ಒಳಗೆ**
**ಅದರಿಂದಲೇ ಇಷ್ಟು ಅವ್ಯವಸ್ಥೆ**
**ಹೊತ್ತು ಹೊತ್ತಿಗೆ ಅರಿತು ಕೀಕೊಟ್ಟು ಇಟ್ಟು–**
**ಕೊಂಡಿದ್ದರಿರುತಿತ್ತೆ ಈ ಅವಸ್ಥೆ"**

ಇಲ್ಲಿ ಸೂಕ್ಷ್ಮ ಸಂವೇದನೆಯ ಜೊತೆಗೆ ಗಾಢ ವಿಷಾದವೂ ಇದೆ. ಹಾಗೆ ನೋಡಿದರೆ ಪ್ರತಿಯೊಬ್ಬ ಸಾರ್ಥಕ ಕವಿಯ, ಲೇಖಕನ, ಕಲಾವಿದನ ಸ್ಥಾಯಿಭಾವವೇ ವಿಷಾದ ಅನ್ನಿಸುತ್ತದೆ. ಯಾಕೆಂದರೆ ಯಾವುದೂ ಅಕ್ರಮವಾಗಿ ನಡೆಯಬಾರದು, ಯೋಜನಾ ಬದ್ಧವಾಗಿರಬೇಕು ಎಂಬ ಆಶಯವು ಮೂಲಭೂತವಾಗಿರುತ್ತದೆ. ಜಿ.ಎಸ್.ಎಸ್. ಅವರನ್ನು ಹತ್ತಿರದಿಂದ ನೋಡಿದ ಎಲ್ಲರಿಗೂ ಇದು ಮನವರಿಕೆಯಾಗಿರುತ್ತದೆ.

ಅವರು ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದಾಗ, ಕೇವಲ ಕನ್ನಡ ವಿಭಾಗಕ್ಕೆ ಮಾತ್ರವಲ್ಲ ಒಟ್ಟು ವಿಶ್ವವಿದ್ಯಾಲಯಕ್ಕೆ ಘನತೆಯನ್ನು ತಂದುಕೊಟ್ಟರು. ಮುಂದೆ ಮೂರು ವರ್ಷ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಅವ್ಯವಹಾರಗಳಿಂದ ತತ್ತರಿಸಿ ಹೋಗಿದ್ದುದಕ್ಕೆ ಜೀವತುಂಬಿದರು. ಸದಾ ಸಾಂಸ್ಕೃತಿಕವಾಗಿ ಸುದ್ದಿಯಲ್ಲಿರುವಂತೆ ಮಾಡಿದರು. ಅದಕ್ಕೇನು ಬಹುದೊಡ್ಡ ಸರ್ಕಸ್ಸೇನು ಮಾಡಲಿಲ್ಲ. ತಮ್ಮಂಥ ಘನತೆ ತುಂಬಿದ ಸದಸ್ಯರನ್ನೆಲ್ಲ ಒಳಗೆ ಬಿಟ್ಟುಕೊಂಡು ಯೋಜನೆ ರೂಪಿಸಿದರು. "ಎಲ್ಲೋ ಯಾವುದೋ ಕೀಲು ತಪ್ಪಿದೆ ಒಳಗೆ" ಎಂಬುದನ್ನು ಎಲ್ಲರಿಗೂ ಮನವರಿಕೆ ಮಾಡಿದರು. ಚದುರಂಗ, ಶಾಂತರಸ, ಶಂಕರ ಮೊಕಾಶಿ ಪುಣೇಕರ್, ಗಿರಡ್ಡಿ ಗೋವಿಂದರಾಜ, ಮಾಲತಿ ಪಟ್ಟಣಶೆಟ್ಟಿ, ಸಾರಾ ಅಬೂಬಕರ್, ಬೆಸಗರಹಳ್ಳಿ ರಾಮಣ್ಣ, ಕುಂ.ವೀರಭದ್ರಪ್ಪ, ಸಿದ್ದಲಿಂಗಯ್ಯ, ಬೋಳುವಾರ ಮಹಮದ್ ಕುಂಞ, ಹೆಚ್.ಎಲ್. ಕೇಶವಮೂರ್ತಿ, ನಾ. ಡಿಸೋಜ, ಬಸವರಾಜ ಸಬರದ. ಅದರ ಮೊದಲ ವರ್ಷದ ಸ್ಥಾಯಿ ಸಮಿತಿಯಲ್ಲಿ ನಾನಿದ್ದೆ ಎಂಬುದೇ ಸಂತೋಷದ ಸಂಗತಿ.

ವಾರ್ಷಿಕ ಪ್ರಶಸ್ತಿ ಕಾರ್ಯಕ್ರಮಗಳನ್ನು ಬೆಂಗಳೂರಿನಿಂದ ಹೊರಗೆ ನಡೆಸುವುದರ ಜೊತೆಗೆ ಪ್ರತಿ ವರ್ಷ ಸೋದರ ಭಾಷಾ ಸಾಹಿತ್ಯದ ಒಬ್ಬ ಮುಖ್ಯ ಲೇಖಕನನ್ನು ಕರೆಸುವುದು ಮುಖ್ಯವಾಯಿತು. ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ಮೂರು ತಿಂಗಳಿಗೊಮ್ಮೆ 'ಅನಿಕೇತನ' ಹೆಸರಿನಲ್ಲಿ ಸಾಹಿತ್ಯ ಪತ್ರಿಕೆ ಬರಲು ಸಾಧ್ಯವಾಯಿತು. ಹಾಗೆಯೇ ಸಾಹಿತ್ಯ ರಚನೆಯಲ್ಲಿ ಪ್ರಭಾವ ಬೀರಿರುವ ವಿಷಯಗಳನ್ನು

ಕುರಿತು ಗಿರಡ್ಡಿಯವರ ಸಂಪಾದಕತ್ವದಲ್ಲಿ ಎಂಥ ಅಮೂಲ್ಯ ಕೃತಿಗಳು ಬಂದುವು, ಮೈಸೂರಿನಲ್ಲಿ ನಡೆದ ಮೊದಲನೆಯ ಪ್ರಶಸ್ತಿ ಕಾರ್ಯಕ್ರಮದ ಸಮಯದಲ್ಲಿ ಕುವೆಂಪು ಅವರ ಮನೆಯಲ್ಲಿ ಸುಮಾರು ಎರಡು ಗಂಟೆಗಳಿಗೂ ಮೇಲ್ಪಟ್ಟು ನಡೆದ ಮಾತುಕತೆಯು ಒಂದು ಚಾರಿತ್ರಿಕ ನೆನಪು ಎಂದು ಭಾವಿಸುವೆ. ಮತ್ತೆ ಮಲೆಯಾಳಂ ಸಾಹಿತ್ಯದ ಬಹುದೊಡ್ಡ ಲೇಖಕ ಮತ್ತು ಚಿಂತಕ ಅಯ್ಯಪ್ಪ ಫಣಿಕ್ಕರ್ ಅವರು ಕುವೆಂಪು ಅವರನ್ನು ನೋಡಲು ಆಶಿಸಿದಾಗ ಜಿ.ಎಸ್.ಎಸ್. ಅವರ ಜೊತೆ ಅವರನ್ನು ಕರೆದುಕೊಂಡು ಹೋಗಿದ್ದೆವು. ಅತ್ಯಂತ ಆತ್ಮೀಯವಾದ ಮಾತುಕತೆ, ಎರಡೂ ಭಾಷೆಗಳ ಶ್ರೀಮಂತಿಕೆಯನ್ನು ಕುರಿತದ್ದು. ಫಣಿಕ್ಕರ್ ಅವರು ಕುವೆಂಪು ಅವರನ್ನು ಕಂಡು ಎಷ್ಟು ಪುನಿತರಾಗಿದ್ದರು. ಇದೇ ರೀತಿಯ ಪುನೀತ ಭಾವನೆ ನನ್ನಂಥವರಿಗೆ ಬೆಳಗಾವಿಯಲ್ಲಿ ಬಾಲಚಂದ್ರ ನೇಮಾಡೆಯಂಥ ಮರಾಠಿ ಸಾಹಿತ್ಯದ ಗಂಭೀರ ಕಥೆಗಾರ, ಕಾದಂಬರಿಕಾರ ಬಂದಾಗ ಅನುಭವಿಸಿದ್ದೆವು. ಇಲ್ಲೊಂದು ಮಾರ್ಮಿಕವಾದ ಸಂಗತಿ ನಡೆಯಿತು. ಕುಂದರ ನಾಡಪಾಟೀಲ, ಹೆಚ್.ಎಲ್. ಕೇಶವಮೂರ್ತಿ, ಮತ್ತು ಡಾ॥ ಬೆಸಗರಹಳ್ಳಿ ರಾಮಣ್ಣ ಅವರ ಬಳಿ ಮಾತಾಡಿ ಸ್ವಲ್ಪ ಸಮಯ ನೇಮಾಡೆಯವರು ಮರಾಠಿಯಲ್ಲಿ ಮಾತಾಡಲಿ, ಅವರ ಮಾತಿನ ಓಘ ಹೇಗಿರುತ್ತದೆಂದು ತಿಳಿಯೋಣ. ಹಾಗೆಯೇ ಮರಾಠಿ ಬಲ್ಲ ಸಭಿಕರೂ ಸಂಭ್ರಮಿಸುವರು ಎಂದು ಯೋಚಿಸಿ ಜಿ.ಎಸ್.ಎಸ್. ಅವರ ಬಳಿ ಪ್ರಸ್ತಾಪಿಸಿದೆ. "ಆಗಲಿ, ಫೈನ್" ಎಂದರು. ಇದನ್ನು ನೇಮಾಡೆಯವರಿಗೆ ಸೂಚಿಸಿದಾಗ ಖುಷಿಯಿಂದ ಮಾತಾಡಿದ್ದರು. ಮತ್ತು ಕರ್ನಾಟಕ ಸಾಹಿತ್ಯ ಅಕಾಡೆಮಿಯು ಹೀಗೂ ಆರೋಗ್ಯಪೂರ್ಣವಾಗಿ ಯೋಚಿಸ್ತದೆ ಅನ್ನೋದೆ ಸಂತೋಷದ ಸಂಗತಿ ಎಂದರು. ಮುಖ್ಯ ಅತಿಥಿಯಾಗಿದ್ದ ಕಟ್ಟೀಯನಿಯವರೂ ಒಪ್ಪಿಗೆ ಸೂಚಿಸಿದ್ದರು. ಮಾರನೇಯ ದಿನ ಸ್ಥಳೀಯ ದಿನ ಪತ್ರಿಕೆಗಳು ಪ್ರಶಂಸೆ ಮಾಡಿಯೇ ಬರೆದಿದ್ದವು. ಇದು ನಿಜವಾಗಿಯೂ ಆಗಿದ್ದು ಜಿ.ಎಸ್.ಎಸ್. ಅವರಂಥ ವಿಶಾಲ ಮನೋಭಾವನೆಯ ಅಧ್ಯಕ್ಷರಿದ್ದುದರಿಂದ.

ಇದಾದ ಎರಡು ಮೂರು ತಿಂಗಳಲ್ಲಿ ಪು.ತಿ.ನ. ಅವರನ್ನು ಕುರಿತು ಮೇಲುಕೋಟೆಯಲ್ಲಿ ಒಂದು ವಿಚಾರಸಂಕಿರಣ ನಡೆಸಬೇಕಾಗಿತ್ತು. ಅದಕ್ಕೆ ಸಿದ್ಧತೆ ಮಾಡಿಬರಲು ಜಿ.ಎಸ್.ಎಸ್. ಅವರ ಜೊತೆ ಮೇಲುಕೋಟೆಗೆ ಹೋದೆ. ನಾವಿಬ್ಬರೂ ಅಲ್ಲಿಯ ಪುರಾತನವಾದ ಕೊಳದ ಮೆಟ್ಟಿಲು ಮೇಲೆ ಕೂತು ಒಂದಿಷ್ಟು ಸಮಯ, ಆ ಜಾಗದ ಸಾಂಸ್ಕೃತಿಕ ಹೆಚ್ಚುಗಾರಿಕೆಯ ಬಗ್ಗೆ ಮಾತಾಡಿ, ತಾತಾಚಾರ್ ಅವರನ್ನು ನೋಡಲು ಹೋದೆವು. ಸಂಸ್ಕೃತ ವಿದ್ವಾಂಸರು.

ಬೆಂಗಳೂರು ವಿಶ್ವವಿದ್ಯಾಲಯದ ಸಂಸ್ಕೃತ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದವರು. ಕೊನೆಗೆ ಬೇಸರದಿಂದ ರಾಜಿನಾಮೆ ಕೊಟ್ಟು ಮೇಲುಕೋಟೆಯಲ್ಲಿಯೇ ಅಧ್ಯಯನವನ್ನು ಮುಂದುವರಿಸಿದವರು. ಅವರ ಬಳಿ ಪು.ತಿ.ನ ಅವರ ಕಾರ್ಯಕ್ರಮ ಕುರಿತು ಚರ್ಚಿಸಿದರು. ಅಲ್ಲಿಯೇ ಊಟಮಾಡಿದೆವು. ಮನೆಯ ಮುಂದೆಯೇ ವಿಶಾಲವಾದ ಬಯಲಿನಲ್ಲಿ ಎಲ್ಲ ವಿಧವಾದ ಔಷಧಿಯ ಮತ್ತು ಪೂಜಾ ಪುಷ್ಪಗಳ ಸಸಿಗಳನ್ನು ಬೆಳೆಸಿದ್ದರು. ಜಿ.ಎಸ್.ಎಸ್. ಅವರು ಒಂದೊಂದು ಗಿಡದ ಹಿನ್ನೆಲೆಯನ್ನು ನೆನಪು ಮಾಡಿಕೊಂಡು ಬಾಲ್ಯ ಕಾಲಕ್ಕೆ ಹೋಗಿದ್ದರು. ಒಂದು ವಿಧದ ಪುಳಕಿತ ಭಾವನೆಯಿಂದ; ಅವ್ಯಕ್ತ ಸಾಂಗತ್ಯಕ್ಕೆ ಒಳಗಾಗಿದ್ದರು. ತಾತಾಚಾರ್ಯರ ಬಳಿ ಪೂಜಾ ಸಸಿಗಳನ್ನು ಕುರಿತೇ ಸಂವಾದ ಏರ್ಪಟ್ಟಿತ್ತು. ನನಗೂ ಇದು ಪ್ರಿಯವಾಗಿದ್ದರಿಂದ ಭಾಗಿಯಾಗಿದ್ದೆ. ಆದರೆ ಆ ಸಸಸಿಗಳ ನಡುವೆ ಎಂಥ ತನ್ಮಯತೆಯನ್ನು ಅನುಭವಿಸಿದರು ಅನ್ನಿಸುತ್ತದೆ. ಯಾಕೆಂದರೆ ಅದು ವಿವರಣೆಗೆ ಮೀರಿರುವಂಥದ್ದು. ಎಷ್ಟೋ ಬಾರಿ ಯೋಚಿಸಿರುವೆ: ಏನಾದರು ಮಾಡಿ ಜಿ.ಎಸ್.ಎಸ್. ಅವರ ಮನಸ್ಥಿತಿ ಕುರಿತು ಒಂದು ಕೃತಿಯನ್ನು ರಚಿಸೋಣ ಎಂದು. ಆಗ ಈ ಪೂಜಾ ಸಸಿಗಳೂ ಸಮೃದ್ಧವಾಗಿ ಆವರಿಸಿಕೊಂಡ ನೆನಪು ಕಾಡುವುದು.

ನೆನಪಿಗೆ ಸಂಬಂಧಿಸಿದ ಒಂದು ಅದ್ಭುತ ಕವಿತೆಯನ್ನೇ ರಚಿಸಿದ್ದಾರೆ. ಅದು ನನಗೆ ಅತ್ಯಂತ ಪ್ರಿಯವಾದ ಕವಿತೆ. ಅದು ಹೀಗಿದೆ:

**''ನೆನಪು:**
**ಹಿಂದೊಮ್ಮೆ ಬೃಂದಾವನದ ಕಾಡಿನಲ್ಲಿ ನಾನೊಂದು**
**ಬಿದಿರ ಮೆಳೆಯಾಗಿದ್ದಂತೆ ನನಗೆ ನೆನಪು**
**ಕೃಷ್ಣ ಮಾಡಿದ ಕೊಳಲ ಮೆಲ್ಲೆಲರು ಮೈದಡವಿ**
**ಚಿಗುರು ಹೊಮ್ಮಿಸಿದಂತೆ ನನಗೆ ನೆನಪು**
**ಗೋಪಿಯರ ಕಾಲ್ಗೆಜ್ಜೆ ಹತ್ತಿರವೆ ಸುಳಿದಂತೆ**
**ಸೆರಗು ಸೋಕಿದ ಹಾಗೆ, ಮಸುಕು ನೆನಪು**
**ಗೋಕುಲದ ಗೋವುಗಳು ಬಂದು ನೆಕ್ಕಿದ ಹಾಗೆ**
**ಬೆಚ್ಚನೆಯ ನೆನಪು''**

ಈ ಕವಿತೆ ಹೀಗೆಯೇ ಮುಂದುವರಿಯುತ್ತದೆ. ಒಮ್ಮೆ ಇದನ್ನು ಮೆಚ್ಚಿಕೊಂಡು ಅವರ ಬಳಿ ಪ್ರಸ್ತಾಪ ಮಾಡಿದಾಗ; ಈ ಕವಿತೆಗಾಚಿನ ಎಷ್ಟೋ ಮಾರ್ಮಿಕವಾದ ಸಂಗತಿಗಳನ್ನೆಲ್ಲ ಧುತ್ತನೆ ಮುಂದಿಟ್ಟಿದ್ದರು. ಹಾಗೆಯೇ ''ಈ ನೆನಪು ಎಂಬುದು ಇಲ್ಲದೆ ಇದ್ದಿದ್ದರೆ; ಒಟ್ಟು ನಮ್ಮೆಲ್ಲರ ಹಾಗೂ ಸಾಮಾಜಿಕ ಏಳು ಬೀಳುಗಳ ಪರಿಸ್ಥಿತಿ ಏನಾಗುತ್ತಿತ್ತು'' ಎಂದಿದ್ದರು ನಗುತ್ತ.

ಒಂದು ಕ್ಷಣ ಹೌದಲ್ಲವಾ ಎಂದು ಅಚ್ಚರಿಗೊಂಡಿದ್ದೆ. ಈಗ ಅವರು ನಮ್ಮ ಮುಂದಿಲ್ಲ. ಆದರೆ ಒಂದೊಂದು ಕವಿತೆಯನ್ನು ಓದಿದಾಗಲೂ; ಅವರೇ ಮುಂದೆ ನಿಂತು ಮಾತಾಡುತ್ತಿದ್ದಾರೆ ಅನ್ನಿಸಿಬಿಡುತ್ತದೆ. ಎಲ್ಲ ಮನುಷ್ಯ ಸಂಬಂಧಗಳು ಹೀಗೆಯೇ ಚಕ್ರಗತಿಯಲ್ಲಿ ಪಿಸುಗುಡುತ್ತಲೇ ಇರುವುದು ಅನ್ನಿಸಿಬಿಡುತ್ತದೆ. ಇಷ್ಟೆಲ್ಲ ದಾಖಲಿಸುವ ಸಮಯದಲ್ಲಿ ನನ್ನನ್ನು ಕಾಡುತ್ತಿರುವುದು ಅವರ ಒಡನಾಟದ ನೆನಪುಗಳೇ ಅಲ್ಲವೇ? ಆದರೆ ಹೀಗೆ ಬರೆಯುವಾಗ ಅದರ ಭಾಷಾ ಸಂಯೋಜನೆ ಪಡೆದುಕೊಳ್ಳುವ ಆಕಾರವೇ ಬೇರೆಯಾಗಿರುತ್ತದೆ. ಅದು ಏಕಕಾಲಕ್ಕೆ ಸಂತೋಷದಾಯಕವೂ ಆಗಿರುತ್ತದೆ, ವಿಷಾದಮಯವೂ ಆಗಿರುತ್ತದೆ. ಕೊನೆಗೂ ಅಂತರಂಗದ ಪ್ರೇರಣೆ ಏನು? ಎಂಬ ಭಾವನೆಯು ದಟ್ಟವಾಗುತ್ತದೆ. ಇದಕ್ಕೆ ಅನ್ವಯಿಸಿ ಅವರದೇ ಕೆಲವು ಸಾಲುಗಳನ್ನು ಇಲ್ಲಿ ಸೇರಿಸಲು ಬಯಸುವೆ: "ನಮ್ಮ ದೇಶದ ಯಾವ ಮಹಾಕಾವ್ಯಗಳೂ ಸುಖಸಾಧನೆ ದೊಡ್ಡದೆಂದು ಹೇಳಲಿಲ್ಲ. ಸುಖ ತ್ಯಾಗದಿಂದ ಬರುವ ಸಂತೋಷ ಸಾಧನೆಯನ್ನೆ ಒತ್ತಿ ಹೇಳಿವೆ. ರಾಮ-ಸೀತೆಯರಾಗಲಿ, ಹರಿಶ್ಚಂದ್ರ-ಚಂದ್ರಮತಿಯರಾಗಲಿ, ಪಾಂಡವರು-ದ್ರೌಪದಿಯಾಗಲಿ; ನಳ ದಮಯಂತಿಯರಾಗಲಿ – ಪಟ್ಟ ಸುಖ ಏನು? ಅರಮನೆಯ ಭೋಗ-ವೈಭವಗಳ ನೆರಳಿನಾಚೆಯ, ಬಿರುಬಿಸಿಲಿನ ಕಾನನಗಳ ಕಂಟಕಿತ ಪಥಗಳಲ್ಲಿ, ಎಲೆ ಮನೆಗಳ ಆಶ್ರಯದಲ್ಲಿ, ನಿಸರ್ಗದ ಸಾನ್ನಿಧ್ಯದಲ್ಲಿ ಅವರ ಬದುಕು ಸಾಗಿತು. ಆ ಅನುಭವದಿಂದ ಬಂದ ಯಾವುದೋ ಸಂತೋಷ ಅವರನ್ನು ದೊಡ್ಡವರನ್ನಾಗಿ ಮಾಡಿತು." ಎಂಬುದು 'ನೆನಪು' ಕವಿತೆಯ ಸಾಲುಗಳಷ್ಟೇ; ವಿಷಾದದ ಮೊತ್ತವನ್ನು ಮುಂದಿಟ್ಟು ಬಿಡುತ್ತದೆ. ಕೊನೆಗೂ ಸಾಹಿತ್ಯವೆಂಬುದು ಇತಿಹಾಸ ಚಕ್ರವನ್ನು ಅವಲೋಕಿಸಿಕೊಳ್ಳುವುದೇ ಆಗಿರುತ್ತದೆ.

ಜಿ.ಎಸ್.ಎಸ್. ಅವರ ಜೊತೆಯಲ್ಲಿ ಪ್ರಯಾಣ ಮಾಡುವುದೆಂದರೆ; ಆಹ್ಲಾದಕರವಾದದ್ದು. ಯಾಕೆಂದರೆ; ತಮ್ಮ ಬದುಕಿನ ಎಷ್ಟೋ ಸಾಂಸ್ಕೃತಿಕ ಘಟನೆಗಳ ಪುಟಗಳು ತೆರೆದುಕೊಳ್ಳುತ್ತ ಹೋಗುತ್ತಿದ್ದುವು. ಇಂಥದ್ದನ್ನು ಅನುಭವಿಸುತ್ತ ವಿಜಾಪುರ ಜಿಲ್ಲೆಯ ಚಡಚಣಕ್ಕೆ ಹೊರಟಿದ್ದೆವು. ಅದು ಸಿಂಪಿ ಲಿಂಗಣ್ಣನವರ ಊರು. ಜಿ.ಎಸ್.ಎಸ್. ಅವರ ಜೊತೆಯಲ್ಲಿ ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯನವರೂ ಇದ್ದರು. ಆಗ ಅವರು ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕರಾಗಿದ್ದರು. ವರ್ಣಮಯ ಪ್ರಾಧ್ಯಾಪಕರು. ಅಷ್ಟೇ ಗತ್ತು. ನಮ್ಮ ಕನ್ನಡ ಮಹಾಕಾವ್ಯಗಳ ಪಠ್ಯಗಳೇ ಅವರಿಗೆ ಬೇಕಿಲ್ಲ. ಅಷ್ಟು ನಿರರ್ಗಳವಾಗಿ ಕಾವ್ಯದ ಸಾಲುಗಳು ಅವರ ನಾಲಿಗೆಯ ಮೇಲೆ ಸಂಭ್ರಮ ಪಡುತ್ತಿದ್ದುವು. ಸಿಂಪಿ ಲಿಂಗಣ್ಣನವರ

ಅಧ್ಯಕ್ಷತೆಯಲ್ಲಿ ನಾವು ಮೂರು ಮಂದಿ ಭಾಷಣಕಾರರು. ಸಂಜೆ ಪ್ರಶಾಂತವಾದ ಬಯಲಿನಲ್ಲಿ ಕಾರ್ಯಕ್ರಮವಿದ್ದದ್ದು. ಸುತ್ತಮುತ್ತಲಿನ ಕಾಲೇಜುಗಳಿಂದ ಕಾಲೇಜು ಅಧ್ಯಾಪಕರು ಬಂದಿದ್ದರು. ಅಭಿರುಚಿಯಿಂದ ಬಂದಿದ್ದರೋ ಅಥವಾ ನಿರ್ದೇಶಕರು ಮೆಮೋ ಕೊಡುವರು ಎಂದು ಬಂದಿದ್ದರೋ ಗೊತ್ತಿಲ್ಲ. ಆದರೂ ಕಾರ್ಯಕ್ರಮ ಚೆನ್ನಾಗಿ ನಡೆಯಿತು.

ಬೆಳಿಗ್ಗೆ ಸಿಂಪಿಯವರು ತಮ್ಮ ಮನೆಗೆ ತಿಂಡಿಗೆ ಕರೆದಿದ್ದರು. ನನಗಂತೂ ಅವರ ಜೊತೆಯಲ್ಲಿ ಒಂದಷ್ಟು ಕಾಲ ಕಳೆಯುವ ಆಸೆ ಇತ್ತು.  ಜಿ.ಎಸ್.ಎಸ್. ಅವರೂ ಅದೇ ಇರಾದೆಯನ್ನು ಹೊಂದಿದ್ದರು. ಬೆಳಿಗ್ಗೆ ಆರು ಗಂಟೆಗೆ ಜಿ.ಎಸ್.ಎಸ್. ಅವರ ಜೊತೆ ವಾಕ್ ಹೊರಟೆ. ಆಗ ರಾಮಕೃಷ್ಣ ಹೆಗಡೆಯವರ ಆಡಳಿತದ ಕಾಲ. ಅಬ್ದುಲ್ ನಸೀರ್ ಸಾಬ್ ಅವರು ಪಂಚಾಯತ್ ರಾಜ್ ಸಚಿವರಾಗಿದ್ದರು. ಕುಡಿಯುವ ನೀರಿಗೆ ಪ್ರಾಶಸ್ತ್ಯವನ್ನು ಕೊಟ್ಟಿದ್ದರು. ಊರಿನ ಸುತ್ತ ಮುತ್ತ ಎರಡು ಮೂರು ಹ್ಯಾಂಡ್ ಪಂಪಗಳು ಇದ್ದುವು. ಬೆಳಿಗ್ಗೆಯೇ ಅವುಗಳಿಗೆ ಪೂಜೆ ಮಾಡಿ ನೀರು ಪಡೆಯುತ್ತಿದ್ದರು. ನಾವು ಖುಷಿಯಿಂದ ಅದನ್ನೇ ನೋಡುತ್ತ ನಿಂತೆವು. ಅಲ್ಲಿ ಯಾರೋ ಹೇಳಿದರು: ಕೆಲವು ಕಡೆ ನಜೀರ್ ಸಾಬ್ ಅವರ ಫೋಟೋ ಇಟ್ಟು ಪೂಜೆ ಮಾಡಿ ನೀರು ಪಡೆಯುವರು ಎಂದು. ಪ್ರಜಾಪ್ರಭುತ್ವ ಎಂತೆಂಥ ಮಾದರಿಗಳನ್ನು ಕೊಡಬಹುದೆಂದು ಮಾತಾಡುತ್ತ ವಾಕ್ ಮುಗಿಸಿದ್ದೆವು. ಆದರೆ ಅಲ್ಲಿಯ ಬಡತನದ ಬೇಗೆಯನ್ನು ಕಂಡು ಗಾಬರಿಗೊಂಡಿದ್ದೆವು. ಮುಂದೆ ಕಾರಿನಲ್ಲಿ ಹೋಗುವಾಗ ಅಲ್ಲಲ್ಲಿ ಕಾರು ನಿಲ್ಲಿಸಿ ಜನರ ಹೀನಾಯ ಸ್ಥಿತಿಯನ್ನು ಕಂಡು 'ಓ ದೇವರೇ' ಅನ್ನಿಸಿತ್ತು. ಆಗ ನಾವು ಮಾತಾಡಿಕೊಂಡೆವು: ಹಳೆಯ ಮೈಸೂರು ವಿಭಾಗದಲ್ಲಿಯೂ ಭೀಕರ ಬಡತನವಿದೆ. ಆದರೆ ಈ ರೀತಿಯಲ್ಲಿ ಕಿತ್ತು ತಿನ್ನುವ ಭೀಕರತೆ ಇಲ್ಲ ಎಂದು. ಒಂದಷ್ಟು ಕುಟುಂಬಗಳಿಗೆ ಭೇಟಿಕೊಟ್ಟು ಮಾತಾಡಿಸುವ ಎಂದು ಯೋಚಿಸಿದೆವು: "ಕೊನೆಗೆ ಅದರಿಂದ ಏನು ಪ್ರಯೋಜನ ನಷ್ಟವಷ್ಟೆ" ಎಂದರು ಜಿ.ಎಸ್.ಎಸ್ ವಿಷಾದದಿಂದ. ಒಂದು ಕ್ಷಣ ಸತ್ಯಜಿತರೇ ಅವರ 'ಆಶಾನಿ ಸಂಕೇತ್' ಚಿತ್ರ ಕುರಿತು ಪ್ರಸ್ತಾಪವೂ ಬಂತು. ಬಂಗಾಳದಲ್ಲಿ ಆದ ಕ್ಷಾಮವನ್ನು ಕೇಂದ್ರವಾಗಿಟ್ಟುಕೊಂಡು ತೆಗೆದಿರುವ ಚಿತ್ರ.

ಅಲ್ಲಿಂದ ವಾಪಸ್ಸು ಬಂದು ಸ್ನಾನ ಮಾಡಿ ಸಿಂಪಿ ಲಿಂಗಣ್ಣನವರ ಮನೆಗೆ ಹೊರಟೆವು.  ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯನವರೂ ಕೂಡಿಕೊಂಡರು. ಮತ್ತೆ ಅವರು ವಾಪಸ್ಸು ಹೋಗಿ ಎಲ್ಲ ಅಧ್ಯಾಪಕರನ್ನು ಭೇಟಿಯಾಗಬೇಕಾಗಿತ್ತು.

ಸಿಂಪಿಯವರು ಪ್ರೀತಿಯಿಂದ ಬರಮಾಡಿಕೊಂಡರು. ತಿಂಡಿ ಊಟದಷ್ಟೇ ಆಯಿತು. ಆ ಕಡೆಯ ಬಾಳೆಯ ಹಣ್ಣು ಅತ್ಯಂತ ರುಚಿಕರವಾಗಿತ್ತು. ಜಿ. ಎಸ್. ಸಿದ್ಧಲಿಂಗಯ್ಯ ನವರು ಗಡಿಬಿಡಿಯಿಂದ ವಾಪಸ್ಸು ಹೋದರು. ನಮ್ಮಲ್ಲಿ ಸುಮಾರು ಎರಡು ಗಂಟೆಗೂ ಮೇಲ್ಪಟ್ಟು ಸಾಹಿತ್ಯ ಕುರಿತು ಚರ್ಚೆ ಇತ್ತು. ಸಿಂಪಿಯವರು ಶ್ರೀಮಂತ ಅನುಭವವನ್ನು ಹೊಂದಿದ್ದವರು. ಕರ್ನಾಟಕದ ಎಲ್ಲ ಮುಖ್ಯ ಲೇಖಕರನ್ನು ಆ ಕಡೆಗೆ ಬರಮಾಡಿಕೊಂಡವರು. ಬೇಂದ್ರೆ, ಮಧುರಚೆನ್ನ, ಶಿವರಾಮ ಕಾರಂತರು ಮಾತಿನ ಮಧ್ಯೆ ಬಂದು ಹೋದರು. ಆಗ ಮಾರ್ಮಿಕವಾದ ಸ್ವಾರಸ್ಯಗಳು ಇರಲೇ ಬೇಕಲ್ಲವೆ? ಹಾಗೆಯೇ ಒಂದಷ್ಟು ಸುತ್ತಾಡಿ ಬರೋಣವೆಂದು ಕರೆದುಕೊಂಡು ಹೋದರು. ಜನರ ಬವಣೆಯನ್ನು ನೋಡಿ ಹೊಟ್ಟೆ ತೊಳಿಸಿಬರುವಂತಾಗುತ್ತಿತ್ತು. "ನಿಜವಾಗಿಯೂ ಇಲ್ಲೆಲ್ಲ ಸಾಮಾಜಿಕ, ಆರ್ಥಿಕ ಕ್ರಾಂತಿಯಾಗಬೇಕು" ಎಂದು ಜಿ.ಎಸ್.ಎಸ್. ಅವರು ಹೇಳಿದಾಗ; "ಇಲ್ಲ ಶಿವರುದ್ರಪ್ಪನವರೇ, ಸ್ವಲ್ಪ ಹೆಚ್ಚು ಕಡಿಮೆ ಎಲ್ಲಕಡೆ ಇದೇ ಚಿತ್ರಣವಿದೆ. ಹೇಗೆ ಸರಿಪಡಿಸುವರೋ ಗೊತ್ತಿಲ್ಲ. ನಾವಂತೂ ಸಭೆ ಸಮಾರಂಭಗಳಲ್ಲಿ ಕೂಗುತ್ತೇವೆ, ಬರೆಯುತ್ತೇವೆ, ಕವಿತೆ ಕಟ್ಟಿ ಹಾಡಿಸುತ್ತೇವೆ. ಆದರೆ ಏನಾಗಬೇಕೋ ಅದು ಆಗುತ್ತಿಲ್ಲ" ಎಂದು ನೊಂದು ನುಡಿದಾಗ ನಾವು ಮತ್ತಷ್ಟು ಪೆಚ್ಚಾಗಿದ್ದೆವು. "ಒಂದೆರಡು ದಿವಸ ಇದ್ದು ಹೋಗಿ" ಎಂದು ಲಿಂಗಣ್ಣನವರು ಅಕ್ಕರೆಯಿಂದ ಹೇಳಿದಾಗ "ನಿಜವಾಗಿಯೂ ಇರಬೇಕೆನ್ನಿಸುತ್ತದೆ. ಆದರೆ ಹೀಗೆಯೇ ಪಂಡರಾಪುರದ ಕಡೆಗೆ ಹೋಗಿ ಬರೋಣವೆಂದು ಯೋಚಿಸಿದ್ದೇವೆ. "ಮತ್ತೊಮ್ಮೆ ಈ ಕಡೆಗೆ ಬರಬೇಕಾದರೆ" ಎಂದರು. ಮನೆಗೆ ವಾಪಸು ಕರೆದುಕೊಂಡು ಬಂದರು. ಬೆಚ್ಚನೆಯ ಟೀ ಕೊಟ್ಟರು.  ಬಾಳೆಯ ಹಣ್ಣನ್ನು ಮುಂದಿಟ್ಟರು. ಹಾಗೆಯೇ "ಹೇಗಿದ್ದರೂ ನೀವು ಕಾರಿನಲ್ಲಿ ಪಂಡರಾಪುರಕ್ಕೆ ಹೋಗ್ತೀರಿ, ಸಾಕಷ್ಟು ದೂರದ ಪ್ರಯಾಣ. ಬಡತನದ ನಾನಾ ಮುಖಗಳು; ನಮ್ಮ ಮನಸ್ಸಿಗೆ ಬಡಿಯುವಂತಿರುತ್ತವೆ" ಎಂದರು.  ಅವರಿಗೆ ನಮಸ್ಕರಿಸಿ ಹೊರಟೆವು. ಪ್ರೊ. ಸಿದ್ಧಲಿಂಗಯ್ಯನವರು ಕೆಲವು ಅಧ್ಯಾಪಕರೊಡನೆ ಚರ್ಚೆ ನಡೆಸಿದ್ದರು. ಒಂದರ್ಧ ಗಂಟೆಯಲ್ಲಿ ಅವರಿಂದ ಬಿಡುಗಡೆಯಾದರು.

ನಾವು ಕರ್ನಾಟಕದ ಗಡಿಯನ್ನು ದಾಟುವವರೆವಿಗೂ ಎಲ್ಲೆಂದರಲ್ಲಿ ಹಳ್ಳಿಗಳ ಬಳಿ ಹ್ಯಾಂಡ್‌ಪಂಪ್‌ಗಳು ಪಟಪಟನೆ ಬಡಿಯುವುದು ಕೇಳಿಸುತ್ತಲೇ ಇತ್ತು. ಈ ಶಬ್ದದ ನಡುವೆಯೇ ಅಬ್ದುಲ್ ನಜೀರ್ ಸಾಬ್ ಅವರ ಗುಣಗಾನ ಮಾಡುತ್ತಾ ಹೊರಟಿದ್ದೆವು. ಅದೂ ನಲ್ಲಿಗಳ ಬಳಿ ನಜೀರ್ ಸಾಬ್ ಅವರ ಭಾವ ಚಿತ್ರವನ್ನು ಪೂಜಿಸುವುದೆಂದರೆ; ಎಷ್ಟು ಅಪೂರ್ವವಾದದ್ದು. ಜಿ.ಎಸ್. ಎಸ್. ಅವರಂತೂ

ಭಾವಪೂರ್ಣವಾಗಿ ನಮ್ಮ ಜನ ಎಷ್ಟು ನಿಷ್ಕಲ್ಮಶ ಹೃದಯದವರು ಎಂದು ಧ್ಯಾನಿಸಿದ್ದರು. ಅವರೂ ಎರಡು ಮೂರು ಬಾರಿ ಲಂಕೇಶ್ ಅವರ ಕಛೇರಿಯಲ್ಲಿ ನಜೀರ್ ಸಾಬ್ ಅವರನ್ನು ಹತ್ತಿರದಿಂದ ಬಲ್ಲವರು. ಅವರ ಸಮಾಜಮುಖಿ ಮಾತುಗಳನ್ನು ಕೇಳಿಸಿಕೊಂಡವರು. ಅಷ್ಟೇ ಅಲ್ಲ ಪಂಚಾಯತ್ ರಾಜ್ ವ್ಯವಸ್ಥೆಯಿಂದ ನೂರಾರು ಮಹಿಳೆಯರು ಚುನಾಯಿತ ಪ್ರತಿನಿಧಿಗಳಾಗಿ ಬರುತ್ತಿದ್ದಾರೆ ಎಂದು ಹೇಳಿದಾಗ ಪುಳಕಿತರಾಗಿದ್ದರು. “ನಿಮ್ಮಂಥವರು ಮುಖ್ಯಮಂತ್ರಿಗಳಾಗಬೇಕು” ಎಂದು ಲಂಕೇಶ್ ಅವರ ಮಾತಿಗೆ ದನಿಗೂಡಿಸಿದ್ದರು. ಹಾಗೆ ನೋಡಿದರೆ ಚಡಚಣದ ಸುತ್ತ ಮುತ್ತಲು ನೋಡಿದ ಅನುಭವವನ್ನೇ ಕೇಂದ್ರವಾಗಿಟ್ಟುಕೊಂಡು ಲಂಕೇಶ್ ಪತ್ರಿಕೆಯಲ್ಲಿ ಬರೆದಿದ್ದೆ. ಅಲ್ಲಿ ನಜೀರ್ ಸಾಬ್ ಅವರ ಬಗ್ಗೆ ಪ್ರಸ್ತಾಪಿಸಿ ‘ಕೊನೆಯ ಪಕ್ಷ ಹತ್ತು ವರ್ಷ ಹಳೆಯ ಮೈಸೂರಿನ ಕಡೆಯ ಅಭಿವೃದ್ಧಿ ಕೆಲಸಗಳನ್ನು ಸ್ಥಗಿತಗೊಳಿಸಿ ಹೈದರಾಬಾದ್ ಕರ್ನಾಟಕದ ಕಡೆಗೆ ವಿನಿಯೋಗಿಸುವುದು ಸೂಕ್ತ ಮತ್ತು ಪ್ರಜಾಸತ್ತಾತ್ಮಕವಾದದ್ದು’ ಎಂದು ಬರಿದಿದ್ದೆ. ಆಗ ಇನ್ನು ಡಿ.ಎಂ. ನಂಜುಂಡಪ್ಪನವರ ವರದಿಯು ಚರ್ಚೆಗೆ ಬಂದಿರಲಿಲ್ಲ. ಅದಕ್ಕೆ ಜಿ.ಎಸ್.ಎಸ್. ಅವರು ಅಭಿಮಾನದಿಂದ “ಒಳ್ಳೆಯ ಕೆಲಸ ಮಾಡಿದೆ ಶೂದ್ರ” ಎಂದಿದ್ದರು. ಈ ರೀತಿಯಲ್ಲಿ ತಕ್ಷಣ ಪ್ರತಿಕ್ರಿಯಿಸುವ ಮನೋಭಾವ ಅವರ ವ್ಯಕ್ತಿತ್ವದಲ್ಲಿಯೇ ಇತ್ತು. ಅಂದಂದಿನ ಕೆಲಸಗಳು ಅಂದೇ ಆಗಬೇಕು. ಮುಂದೂಡಿದಷ್ಟು ಸಮಸ್ಯೆಗಳು ಸಂಕೀರ್ಣಗೊಳ್ಳುತ್ತವೆ ಎಂಬುದನ್ನು ಗಾಢವಾಗಿ ನಂಬಿದ್ದರು.

ಸಂಜೆ ನಾಲ್ಕು ಗಂಟೆಯ ಸುಮಾರಿಗೆ ಪಂಡರಾಪುರವನ್ನು ತಲುಪಿದೆವು. ತಕ್ಷಣ ನಾವು ಮಾಡಿದ ಕೆಲಸ ಚಂದ್ರಭಾಗ ನದಿಯನ್ನು ನೋಡಲು ಹೋಗಿದ್ದು. ನನ್ನ ಬಾಲ್ಯಕಾಲದಿಂದಲೂ ಆ ಹೆಸರು ಮತ್ತು ಸ್ಥಳದ ಬಗ್ಗೆ ಅವ್ಯಕ್ತ ನಂಟು ಅಂಟಿಕೊಂಡುಬಿಟ್ಟಿತ್ತು. ಯಾಕೆಂದರೆ ಪ್ರತಿದಿನ ರಾತ್ರಿ ಪಂಡರಿಭಜನೆಯಲ್ಲಿ ಕುಣಿಯುತ್ತ ಭಾಗವಹಿಸುತ್ತಿದ್ದವನು. ನಲವತ್ತು ಐವತ್ತು ಮಂದಿ ಬಣ್ಣಬಣ್ಣದ ಉಡುಪಿನಲ್ಲಿ ಕೋಲಾಟಕ್ಕೆ ಪೂರಕವಾದ ಹಾಡಿನಲ್ಲಿ ಸಂಭ್ರಮಪಟ್ಟ ಕಾಲಘಟ್ಟವದು. ಅಲ್ಲಿಂದ ‘ಚಂದ್ರಭಾಗ’ ನದಿಯು ನೆನಪು ಬಂದಾಗಲೆಲ್ಲ ಗುಪ್ತಗಾಮಿನಿಯಾಗಿ ಮನಸ್ಸಿನಲ್ಲಿ ಹರಿಯುತ್ತಲೇ ಇತ್ತು. ಜಿ.ಎಸ್.ಎಸ್. ಅವರಿಗೂ ಅಷ್ಟೇ ಆ ನದಿಯ ವೈಭವವನ್ನು ತುಂಬಿಕೊಂಡಿದ್ದರು. ನಾವು ಮೂರು ಮಂದಿಯೂ ಹೋಗಿ ನದಿಯ ದಡದಲ್ಲಿ ನಿಂತೆವು. ನದಿ ಉದ್ದಕ್ಕೂ ನೀರಿನ ಹರಿವು ಗೋಚರಿಸುತ್ತಿರಲಿಲ್ಲ. ಎಲ್ಲೋ ಕಂಡು ಕಾಣದ ಹಾಗೆ ಅಲ್ಲಲ್ಲಿ ಸ್ವಲ್ಪ ನೀರು ಕಾಣುತ್ತಿತ್ತು. ಆದರೆ ಭೀಕರತೆ ಎಂದರೆ: ಉದ್ದಕ್ಕೂ ನೂರಾರು ಮಂದಿ ಬಹಿರ್ದೆಶೆಗೆ ಕೂತಿರುವುದನ್ನು ಕಂಡು

ಗಾಬರಿಗೊಂಡೆವು. ನಾವು ಈ ದೃಶ್ಯವನ್ನು ಊಹಿಸಿಯೇ ಇರಲಿಲ್ಲ. ಆ ಹೆಸರಿನ ಆಪ್ತತೆಯಿಂದ ಭಕ್ತಿಭಾವ ತುಂಬಿಕೊಂಡಿರುವ ನಮ್ಮ ಮನೋಲ್ಲಾಸವನ್ನು ದುಪ್ಪಟ್ಟುಗೊಳಿಸುವುದೆಂದು ಭಾವಿಸಿದ್ದೆವು. ಜಿ.ಎಸ್.ಎಸ್. ಅವರಂತೂ ಪೆಚ್ಚಾಗಿಬಿಟ್ಟಿದ್ದರು. "ಇದೂ ಕೂಡ ಒಂದು ರೀತಿಯಲ್ಲಿ ಬಡತನದ ಸಂಕೇತವೇ ಆಗಿದೆ. ಅವರೆಲ್ಲ ತಮ್ಮ ತಮ್ಮ ಮನೆಗಳಲ್ಲಿ ಬಹಿರ್ದೆಶೆಗೆ ಹೋಗುವುದರಿಂದ ವಂಚಿತರಾದವರು. ಸಾಮಾಜಿಕ ಬಡತನವೆಂಬುದು ಈ ಪವಿತ್ರ ನದಿಯನ್ನು ಅಪವಿತ್ರಗೊಳಿಸಿದೆ. ಇದಕ್ಕೆ ಪ್ರಕೃತಿಗೆ ಸಮರ್ಪಕವಾಗಿ ಮುಖಾಮುಖಿಯಾಗುವುದಕ್ಕೆ ಆಗದೇ ಇರುವುದೇ ಈ ದುರಂತ." ಪ್ರೊ. ಸಿದ್ಧಲಿಂಗಯ್ಯನವರಂತೂ ವಿಷಾದ ಪೂರ್ಣವಾಗಿ ಉದ್ಗಾರವನ್ನು ತೆಗೆದಿದ್ದರು.

ಜಿ.ಎಸ್.ಎಸ್. ಅವರು ನನ್ನ ಹೆಗಲಿನ ಮೇಲೆ ಕೈಹಾಕಿ ಜೀವನದ ವೈಪರೀತ್ಯಗಳೆಂದರೆ ಇದೆ ಎಂದು ಅನನ್ಯಭಾವದಿಂದ ಒಪ್ಪಿಕೊಳ್ಳಬೇಕು ಎಂಬ ಧ್ವನಿಯು; ಈಗಲೂ ನೆನಪು ಹೊರದಬ್ಬುವ ಸಂಗತಿಗಳಿಗೆ ರೂಪಕವಾಗಿಯೇ ಇದೆ. ಈ ದೃಷ್ಟಿಯಿಂದ 'ಸಮಕಾಲೀನತೆಯ ಸವಾಲುಗಳು' ಎಂಬ ಲೇಖನದ ಈ ಸಾಲುಗಳನ್ನು ಇಲ್ಲಿಡಲು ಬಯಸುವೆ. ಯಾಕೆಂದರೆ, ಮತ್ತೆ ಮತ್ತೆ ಓದಿಕೊಳ್ಳಬಹುದಾದ ಲೇಖನ. ಚಂದ್ರಭಾಗ ನದಿಯೂ ಕೂಡ ಭೂತದಿಂದ ವರ್ತಮಾನದಲ್ಲಿಯೂ ಅದರ ಪ್ರಾಕೃತಿಕ ವಿಭಿನ್ನ ನೆಲೆಗಳ ಕಾರಣಕ್ಕಾಗಿ ಸಂಚಲನವನ್ನು ಮೂಡಿಸುವಂಥದ್ದು. ಇರಲಿ, ಅದರ ಕೆಲವು ಸಾಲು ಹೀಗಿವೆ: "ನಮ್ಮ ಇಂದಿನ ಬದುಕು ಅನ್ನುವುದು ಕೇವಲ ನಮ್ಮ ವರ್ತಮಾನಕ್ಕೆ ಸೀಮಿತವಾದುದಲ್ಲ. ಅದರ ಹಿಂದೆ ಒಂದು ಭೂತಕಾಲವಿದೆ, ಅದಕ್ಕೊಂದು ಚರಿತ್ರೆ ಇದೆ, ಒಂದು ಪರಂಪರೆ ಇದೆ. ಅದು ನಮ್ಮ ವರ್ತಮಾನದ ಬದುಕನ್ನು ಪ್ರಭಾವಿಸುತ್ತಿದೆ, ಎಷ್ಟೋ ವೇಳೆ ನಿಯಂತ್ರಿಸುತ್ತಿದೆ. ಹೀಗಾಗಿ ನಮ್ಮ ಹಿಂದಿನ ಗತ ಕಾಲವನ್ನು ಜಡವೂ ನಿಷ್ಕ್ರಿಯವೂ ನಿರ್ಜೀವವೂ ಅದೊಂದು 'ವಸ್ತು' ಅಲ್ಲ; ಅದೊಂದು ಜೀವಂತವಾದ ಶಕ್ತಿ ಸಮುಚ್ಚಯವೂ ಹೌದು. ಹಾಗೆಯೇ, ನಮ್ಮ ಮುಂದೆ ಒಂದು ಭವಿಷ್ಯವಿದೆ. ಅದರ ಕನಸುಗಳೂ ಹಾಗೂ ಅಲ್ಲಿ ಪೂರ್ಣಗೊಳ್ಳಬೇಕಾದ ಆಶಯಗಳೂ ನಮ್ಮನ್ನು ಕಾಡುತ್ತವೆ. ವರ್ತಮಾನದಲ್ಲಿರುವ ನಮಗೆ ಗತಕಾಲದ ನೆನಪುಗಳು ಎಷ್ಟು ಮುಖ್ಯವೋ ಹಾಗೆಯೇ ಭವಿಷ್ಯತ್ತಿನ ಕನಸುಗಳೂ ಅಷ್ಟೇ ಮುಖ್ಯ." ಈ ನೋಟಕ್ಕೆ ಹೊಂದಿಕೊಳ್ಳುವಂತೆ ಯೋಚಿಸುವಾಗ ಜಿ.ಎಸ್.ಎಸ್. ಅವರು ವರ್ತಮಾನದಲ್ಲಿ ತುಂಬಿ ತುಳುಕುತ್ತಿರುವಂತೆ ಭಾಸವಾಗುತ್ತದೆ. ಹಾಗೆ ನೋಡಿದರೆ; ಕವಿ ಮಿತ್ರರಾದ ಹೆಚ್. ಎಸ್. ವೆಂಕಟೇಶ್‌ಮೂರ್ತಿಯವರು, ಡಾ. ಹೆಚ್. ಎಸ್. ಮಾಧವರಾವ್ ಅವರು ಇದನ್ನು ಬರೆಯುವ ಸಮಯದಲ್ಲಿ ಸಂಪರ್ಕಿಸಿದ್ದರು.

ಆಗ ಅವರಿಗೆ ಹೇಳಿದ್ದೆ: "ಜಿ.ಎಸ್.ಎಸ್. ಮತ್ತು ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ ಅವರ ಜೊತೆ ಪಂಡರಾಪುರದಲ್ಲಿ ಚಂದ್ರಭಾಗ ನದಿಯ ದಡಲ್ಲಿದ್ದೀವಿ" ಎಂದು. ತಕ್ಷಣ ನನ್ನ ಮಾತಿನ ಗ್ರಹಿಕೆ ಅವರಿಗೆ ತಲುಪದೆ ತಬ್ಬಿಬ್ಬಾಗಿದ್ದರು. ಆದರೆ ಇಷ್ಟಂತೂ ಸತ್ಯ: ಕಳೆದ ನಲವತ್ಮೂರು ವರ್ಷಗಳಿಂದ ಆ ಮಹಾನ್ ಕವಿ, ಚಿಂತಕರೊಡನೆ ಕಳೆದ ನೂರಾರು ನೆನಪುಗಳು ದುತ್ತನೆ ಎದುರು ಬದುರಾಗಿದ್ದವು. ವರ್ತಮಾನವನ್ನು ಸಂಭ್ರಮಿಸುವಂತಾಗಿತ್ತು. ಅವರು ಕಾಲವಾಗಿಲ್ಲ ಎಂಬ ಬೆಚ್ಚನೆಯ ನೆನಪು ಪುಳಕಗೊಳಿಸಿದೆ.

ಭಾರವಾದ ಮನಸ್ಸಿನಿಂದ ಚಂದ್ರಭಾಗ ನದಿಯ ದಡದಿಂದ ಪಾಂಡುರಂಗಸ್ವಾಮಿಯ ಅರ್ಥಾತ್ ವಿಠ್ಠಲನ ದೇವಸ್ಥಾನವನ್ನು ನೋಡಲು ಹೋದೆವು, ಪುರಾತನ ದೇವಸ್ಥಾನ. ಎದ್ದು ಕಾಣುವ ಶಿಲ್ಪಕಲೆ, ಪ್ರತಿವರ್ಷ ಲಕ್ಷಾಂತರ ಭಕ್ತಾದಿಗಳನ್ನು ಬರಮಾಡಿಕೊಳ್ಳುವ ದೇವಾಲಯ. ಒಂದು ದೃಷ್ಟಿಯಿಂದ ನಾವು ಮೂರು ಮಂದಿಯೂ ಅಷ್ಟೊಂದು ಆಸ್ತಿಕರೇನು ಆಗಿರಲಿಲ್ಲ. ಆದರೆ ದೇವಸ್ಥಾನ ಸಂಸ್ಕೃತಿಯ ಬಗ್ಗೆ ಗೌರವವಿದ್ದವರು. ಯಾಕೆಂದರೆ; ಈ ನೆಪದಲ್ಲಿಯಾದರೂ ಅಕ್ರಮಗಳು ಕಡಿಮೆಯಾಗಲು ಸಾಧ್ಯ, ಹಾಗೆಯೇ ನೈತಿಕ ಭಯ ಎಂಬುದು ಎಷ್ಟು ಮುಖ್ಯ; ಜೊತೆಗೆ ಜನ ಒಂದೆಡೆ ಸೇರುವುದಕ್ಕೆ ನೆಪವಾಗಿರುತ್ತದೆ. ಹೀಗೆಯೇ ಸಾಕಷ್ಟು ಜನಸಂದಣಿಯ ನಡುವೆ ವಿಠ್ಠಲನ ದರ್ಶನ ಪಡೆದು; ಬೇರೆ ಬೇರೆ ವಿಗ್ರಹಗಳನ್ನು ನೋಡುತ್ತ ಹೋಗುತ್ತಿದ್ದೆ. ಯಾವ ವಿಗ್ರಹಕ್ಕೂ ನಮಸ್ಕರಿಸುತ್ತಿರಲಿಲ್ಲ. ಇದ್ದಕ್ಕಿದ್ದಂತೆ ಒಂದು ವಿಗ್ರಹದ ಬಳಿ ಪೂಜಾರಿಯೊಬ್ಬ ನನ್ನ ತಲೆಯನ್ನು ಹಿಡಿದು ವಿಗ್ರಹದ ಪಾದದ ಮೇಲೆ ಒತ್ತಿದ. ನನಗೆ ಗಾಬರಿಯಾಗಿ ತಲೆಕೊಡವಿ ನಿಂತೆ. ಜಿ.ಎಸ್.ಎಸ್. ಅವರು ಪ್ರೊ. ಸಿದ್ಧಲಿಂಗಯ್ಯನವರು ನಗುತ್ತ "ಹಾಗೆ ಆಗಬೇಕಾಗಿತ್ತು." ಎಂದರು. ಅದರಿಂದ ಒಂದು ಕ್ಷಣ ಪೆಚ್ಚಾಗಿದ್ದೆ. ಅದಕ್ಕೆ ಜಿ.ಎಸ್.ಎಸ್. ಅವರು ಗಂಭೀರವಾಗಿ ಒಂದು ಮಾತು ಹೇಳಿದರು: "ನೋಡಿ ಈ ಪೂಜಾರಿಗಳಿಗೆ ಒಂದು ಕಾಲದಲ್ಲಿ ಭಕ್ತಾದಿಗಳಿಂದ ಕಾಣಿಕೆಯ ರೂಪದಲ್ಲಿ ತುಂಬ ಆದಾಯವಿತ್ತು. ಈಗ ಅದನ್ನು ತಪ್ಪಿಸಿ ಸಂಬಳ ನಿಗದಿಪಡಿಸಿದ್ದಾರೆ. ಅದರಿಂದ ಅತೃಪ್ತಿಗೊಂಡು, ಅಸಹನೆಗೊಂಡಿದ್ದಾರೆ. ಅದನ್ನು ಈ ರೂಪದಲ್ಲಿ ನೀವು ಯಾವ ದೇವರಿಗೂ ನಮಸ್ಕರಿಸುತ್ತಿಲ್ಲ ಎಂದು ಸಿಟ್ಟು ತೀರಿಸಿಕೊಂಡಿದ್ದಾರೆ." ಎಂದರು. ಅದನ್ನು ಕೇಳಿ ವಿಸ್ಮಿತನಾದೆ. ಒಂದು ಸಾಮಾಜಿಕ ಸಂದರ್ಭದಲ್ಲಿ ಎಂತೆಂಥ ಮಾನಸಿಕ ಸಂಘರ್ಷಗಳಿಗೆ ಪಕ್ಕಾಗಬೇಕಾಗುತ್ತದೆ ಎಂದುಕೊಂಡೆ. ಸ್ವಲ್ಪ ಸಮಯ ದೇವಸ್ಥಾನ ಸಮುಚ್ಚಯದ ಮಧ್ಯೆ ಇದ್ದ ಕಟ್ಟೆಯ ಮೇಲೆ

ಕೂತು ಹೀಗೆಯೆ ಏನೇನೋ ಮಾತನಾಡುತ್ತ; ಪುರಂದರ ದಾಸರ ವಿಷಯ ಬಂತು. ಹಾಗೆಯೇ ಸಾರ್ವಕಾಲಿಕ ಶ್ರೇಷ್ಠ ಕಲಾವಿದ. ಪಂಡಿತ್ ಭೀಮಸೇನ ಜೋಶಿಯವರ ಪ್ರಸ್ತಾಪವೂ ಬಂತು. ಜೋಶಿಯವರು 'ವಿಠಲ ವಿಠಲ' ಎಂದು ಒಂದು ಅಭಂಗವನ್ನು ಅವರು ಹಾಡಿದ ಪರಿ ಹೇಗೆ ರೋಮಾಂಚನಗೊಳಿಸಿತ್ತು ಎಂಬ ಸಂದರ್ಭವನ್ನು ಹೇಳಿದೆ. ಅದು ಹೀಗಿದೆ: ನಾವು ಪಂಡರಾಪುರ, ಚಂದ್ರಭಾಗ ನದಿಯ ಅನುಭವವನ್ನು ಪಡೆಯುವುದಕ್ಕೆ ನಾಲ್ಕೈದು ವರ್ಷಗಳ ಹಿಂದಿನ ಮಾತು. ಬೆಂಗಳೂರಿನ ಪುರಭವನದಲ್ಲಿ ಅವರ ಕಾರ್ಯಕ್ರಮವಿತ್ತು. ಜನ ಕಿಕ್ಕಿರಿದು ತುಂಬಿದ್ದರು. ಸಂಜೆ ಆರೂವರೆಗೆ ಇದ್ದದ್ದು ಏಳೂವರೆಯಾದರೂ ಪ್ರಾರಂಭವಾಗಲಿಲ್ಲ. ಸಂಘಟಕರು ತಮ್ಮ ಬಣ್ಣದ ಮಾತುಗಳಲ್ಲಿ ಸಮಾಧಾನ ಪಡಿಸುತ್ತಲೇ ಇದ್ದರು. ಕೊನೆಗೂ ಜೋಶಿಯವರು ಬಂದರು. ಕಷ್ಟಪಟ್ಟು ಜನಸ್ತೋಮಕ್ಕೆ ಕೈಯೆತ್ತಿ ನಮಸ್ಕರಿಸಿದರು. 'ವಿಠಲ, ವಿಠಲ ವಿಠಲ' ಎಂದು ಹಾಡಲು ಶುರುಮಾಡಿದರು. ಶ್ರೋತೃಗಳು ಒಂದು ಗಂಟೆಗೂ ಮೇಲ್ಪಟ್ಟು ಆದ ವಿಳಂಬವನ್ನು ಮರೆತು 'ವಿಠಲ, ವಿಠಲ' ಎಂಬ ಧ್ವನಿ ಮಾಧುರ್ಯದಲ್ಲಿ ಅಮೋಘವಾಗಿ ಭಾಗಿಯಾಗಿಬಿಟ್ಟರು. ಇದಾದ ಒಂದೂವರೆ ಗಂಟೆ ಎಂಥ ಅವ್ಯಕ್ತ ರೋಮಾಂಚನದ ಕಡೆಗೆ ಕರೆದೊಯ್ದಿದ್ದರು. ಒಂದು ಹಂತದಲ್ಲಿ ನಾನೂ ಎದ್ದು ಕುಣಿಯಬೇಕೆನ್ನಿಸಿತ್ತು." ಎಂದಾಗ; ಆ ಎರಡು ದೊಡ್ಡ ಮನಸ್ಸುಗಳು ಪ್ರೀತಿಯಿಂದ ಕೇಳಿಸಿಕೊಂಡಿದ್ದರು. ಈ ಅನುಭವವನ್ನು ಚಂದ್ರಭಾಗ ನದಿಯ ನೆಪದಲ್ಲಿ 'ಕನಸಿಗೊಂದು ಕಣ್ಣು'ವಿನಲ್ಲಿ ಬರೆದಾಗ; ಎಷ್ಟು ಅಭಿಮಾನದಿಂದ ದೂರವಾಣಿಯಲ್ಲಿ ಮಾತನಾಡಿದ್ದರು!

ವಿಠಲನಿಗೆ ನಮಸ್ಕರಿಸಿ ಹೊರಗೆ ಬಂದೆವು. ಮತ್ತೆ ಒಂದಷ್ಟು ಸಮಯ ಅಲ್ಲೆಲ್ಲ ಸುತ್ತಾಡಿದೆವು. ಅಂದು ರಾತ್ರಿ ಅಲ್ಲಿಯೇ ವಸತಿಗೃಹದಲ್ಲಿದ್ದು ಬೆಳಿಗ್ಗೆ ಏಳೂವರೆ ಸುಮಾರಿಗೆ ಬೆಂಗಳೂರಿನ ಕಡೆ ಹೊರಟಿದ್ದೆವು.

ಪ್ರೊ. ಜಿ. ಎಸ್. ಶಿವರುದ್ರಪ್ಪನವರಿಗಿದ್ದ ಮಾನವೀಯ ಗುಣದ ಬಗ್ಗೆ ಸಾಕಷ್ಟು ಹೇಳುತ್ತ ಹೋಗಬಹುದು. ಸಾಹಿತ್ಯ ಅಕಾಡೆಮಿಯ ಮೊದಲನೆಯ ಸರ್ವಸದಸ್ಯರ ಸಭೆಯಲ್ಲಿ ಅವರು ಮೊದಲು ಮಂಡಿಸಿದ ವಿಷಯ: ಅಲ್ಲಿಯ ನಾಲ್ಕೈದು ಮಂದಿ ನೌಕರರಿಗೆ ಅತ್ಯಂತ ಕಡಿಮೆ ಸಂಬಳ ಬರುತ್ತಿದೆ. ಒಂದು ಸಾವಿರ ರೂಪಾಯಿ ಜಾಸ್ತಿ ಮಾಡೋಣವೆಂದು ಒಪ್ಪಿಗೆ ಪಡೆದರು. ಅದನ್ನು ಈಗಲೂ ಆ ನೌಕರರು ಎಷ್ಟು ಅಭಿಮಾನದಿಂದ ನೆನಪು ಮಾಡಿಕೊಳ್ಳುವರು. ಇದೇ ಕಾಲಘಟ್ಟದಲ್ಲಿ ಉಡುಪಿಯಲ್ಲಿ ಒಂದು ಸಾಹಿತ್ಯ ಸಂದರ್ಭದ ಕಾರ್ಯಕ್ರಮ

ಮುಗಿಸಿ ಬೋಳುವಾರು ಮಹಮದ್ ಕುಂಞ ಅವರ ಮನೆಗೆ ಊಟಕ್ಕೆ ಹೋದೆವು. ಊಟಕ್ಕೆ ಮೊದಲು ತೆಂಗಿನ ಮರಗಳ ನಡುವೆ ಮಂದ ಬೆಳಕಿನಲ್ಲಿ ಎಲ್ಲ ಸದಸ್ಯರು ಸೇರಿದ್ದರು. ಆಗ ಶಿವರುದ್ರಪ್ಪನವರು ಒಂದು ಮಾತು ಹೇಳಿದರು: "ನೋಡಿ ನಾವೆಲ್ಲ ವಿಭಿನ್ನ ಜಿಲ್ಲೆಗಳಿಂದ ಬಂದು ಅಕಾಡೆಮಿಯನ್ನು ಪ್ರತಿನಿಧಿಸುತ್ತಿದ್ದೇವೆ. ಆದರೆ ನಾವೆಲ್ಲ ಬಂದ ಪ್ರದೇಶಗಳನ್ನು ಮರೆತು; ಇದು ಕರ್ನಾಟಕದ ಸಾಹಿತ್ಯ ಅಕಾಡೆಮಿ ಎಂಬ ಭಾವನೆಯಿಂದ ಜೀವ ತುಂಬಲು ಪ್ರಯತ್ನಿಸೋಣ" ಎಂದು ವಿನಂತಿಸಿಕೊಂಡಿದ್ದರು.

ಇದೇ ಸಂದರ್ಭದಲ್ಲಿ ಒಂದು ಘಟನೆ ನಡೆಯಿತು. ಸಾಹಿತ್ಯ ಅಕಾಡೆಮಿಯಿಂದ ಎರಡು ದಿವಸಗಳ ವಿಚಾರ ಸಂಕಿರಣವಿತ್ತು. ಬಹುಮುಖ್ಯ ಲೇಖಕರೆಲ್ಲ ಸೇರಿದ್ದರು. ಮೊದಲನೆಯ ದಿವಸದ ಮಧ್ಯಾಹ್ನದ ಗೋಷ್ಠಿಯಲ್ಲಿ ರಾಮಚಂದ್ರಶರ್ಮ ಅವರು ತಮ್ಮ ಭಾಷಣದಲ್ಲಿ ಜಿ.ಎಸ್.ಎಸ್. ಅವರ ಬಗ್ಗೆ ಹಗುರವಾಗಿ ಮಾತಾಡಿದ್ದರು. ಅದಕ್ಕೆ ಅನಂತಮೂರ್ತಿ, ಶಾಂತಿನಾಥ ದೇಸಾಯಿ, ಶಂಕರ ಮೊಕಾಶಿ ಪುಣೇಕರ, ಚದುರಂಗ ಮುಂತಾದವರು ಆಕ್ಷೇಪಣೆ ಎತ್ತಿದರು. ಶರ್ಮ ಅವರು ಜಗತ್ತೆಲ್ಲ ಸುತ್ತಿದವರು. ಯಾರ್‍ಯಾರಿಗೋ ಮನಶಾಸ್ತ್ರ ಕುರಿತು ಪಾಠಮಾಡಿದವರು. ಅಂಥವರೂ ಒಮ್ಮೊಮ್ಮೆ ಹೀಗೆ ಚಿಕ್ಕ ಹುಡುಗರಂತೆ ನಡಕೊಂಡುಬಿಡುತ್ತಿದ್ದರು. ಆದರೆ ಅವರ ಬಹುದೊಡ್ಡ ಗುಣವೆಂದರೆ: ಅದನ್ನು ಹಠಮಾರಿತನದಿಂದ ಮುಂದುವರೆಸುತ್ತಿರಲಿಲ್ಲ. ಆದ್ದರಿಂದ ರಾತ್ರಿಯೆಲ್ಲ ವಿಲವಿಲನೆ ಒದ್ದಾಡಿ ಬೆಳಿಗ್ಗೆಯೇ ಜಿ.ಎಸ್.ಎಸ್. ಅವರ ಮನೆಗೆ ನನ್ನನ್ನು ಕರೆದುಕೊಂಡು ಹೋದರು. ಅಲ್ಲಿ ಚೆನ್ನವೀರ ಕಣವಿಯವರೂ ಇದ್ದರು. "ಕ್ಷಮಿಸಿ, ಶಿವರುದ್ರಪ್ಪ" ಎಂದರು. "ಅಯ್ಯೋ ಅದಕ್ಕೆ ಯಾಕೆ ಅಷ್ಟು ತಲೆಕೆಡಿಸಿಕೊಳ್ತೀರಿ. ಏನೋ ಅಕಸ್ಮಾತ್ ಮಾತಾಡಿದ್ದೀರಿ. ಅದನ್ನು ಅಷ್ಟು ಗಂಭೀರವಾಗಿ ತೆಗೆದುಕೊಳ್ಳಬೇಡಿ" ಎಂದು ಮುಂದೆ ಶರ್ಮರಿಗೆ ಮಾತಾಡಲು ಬಿಡದೆ ಕಾಫೀ ಕುಡಿಸಿದ್ದರು. ಚೆನ್ನವೀರ ಕಣವಿಯುವರು ಯಾವಾಗಲೂ ಸೌಜನ್ಯ ಮೂರ್ತಿಯಾಗಿದ್ದರಿಂದ ಮಂದಸ್ಮಿತರಾಗಿ ಅಧ್ಯಕ್ಷತೆ ವಹಿಸಿದ್ದರು.

ಒಮ್ಮೆ ಹೀಗೆಯೇ ಜಿ.ಎಸ್.ಎಸ್. ಅವರ ಜೊತೆ ಸಾಹಿತ್ಯ, ಸಂಸ್ಕೃತಿ ಹಾಗೂ ನಮ್ಮ ಸಂದರ್ಭದ ಕೆಲವು ಸ್ಥಿತ್ಯಂತರಗಳನ್ನು ಕುರಿತು ಮಾತಾಡುತ್ತಿದ್ದೆವು. ಆಗ 'ಕುವೆಂಪು ೯೦: ಒಂದು ಸಾಂಸ್ಕೃತಿಕ ನೆನಪು' ಎಂಬ ವಿಷಯ ಕುರಿತು ಕುಪ್ಪಳಿಯ ಅವರ ಮನೆಯಲ್ಲಿ ಮೂರು ದಿವಸದ ಸಮಾವೇಶವನ್ನು 'ಶೂದ್ರ'ದ ಮೂಲಕ ನಡೆಸಲು ಪ್ರಸ್ತಾಪವನ್ನಿಟ್ಟೆ. ಖುಷಿಯಿಂದ ಒಪ್ಪಿಕೊಂಡು ಇದನ್ನು ನ್ಯಾಯಮೂರ್ತಿ ಎನ್.ಡಿ. ವೆಂಕಟೇಶ್ ಅವರಿಗೆ ತಿಳಿಸಿದರು. ಅವರು ಹಿಂದು

ಮುಂದು ನೋಡದೆ ಒಪ್ಪೇಬಿಟ್ಟರು. ಆ ಮನೆಯು ಈಗಿನ ರೀತಿಯಲ್ಲಿ ದುರಸ್ತಿಯಾಗಿರಲಿಲ್ಲ. ಹಳೆಯ ಆಕಾರದಲ್ಲಿಯೇ ಇತ್ತು. ಕುವೆಂಪು ಅವರು ಅಗ ಅರೆ ಪ್ರಜ್ಞೆಯ ಸ್ಥಿತಿಯಲ್ಲಿದ್ದರು. ಜಿ.ಎಸ್.ಎಸ್. ಮತ್ತು ನಾನು ಮೈಸೂರಿಗೆ ಹೋಗಿ ಒಂದೇ ಒಂದು ವಾಕ್ಯ ಮಾತಾಡಲು ಆಗದೆ ವಾಪಸ್ತು ಬಂದಿದ್ದೆವು. ಆದರೂ ಕಾರ್ಯಕ್ರಮವನ್ನು ಅತ್ಯಂತ ಚೆನ್ನಾಗಿ ನಡೆಸಬೇಕೆಂದು ತೀರ್ಮಾನಿಸಿದೆವು. ಇದಕ್ಕಾಗಿ ನ್ಯಾಯಮೂರ್ತಿ ಎನ್. ಡಿ. ವೆಂಕಟೇಶ್ ಅವರ ಜೊತೆಯಲ್ಲಿ ಹೋಗಿ ಕುಪ್ಪಳಿಯಲ್ಲಿ ಎರಡು ದಿವಸವಿದ್ದು ವ್ಯವಸ್ಥೆ ಮಾಡಿ ಬಂದೆವು.

ಮೂರು ದಿವಸದ ಕಾರ್ಯಕ್ರಮ. ಹೀಗೆ ನಡೆಸಬೇಕೆಂದು ಮತ್ತು ಯಾರ್‍ಯಾರನ್ನು ಆಹ್ವಾನಿಸಬೇಕೆಂಬುದುದರ ಬಗ್ಗೆ ಒಂದು ದೀರ್ಘ ಪಟ್ಟಿಯನ್ನೇ ತಯಾರು ಮಾಡಿದರು. ಸುಮಾರು ನೂರೈವತ್ತಕ್ಕೂ ಮೇಲ್ಪಟ್ಟು ಲೇಖಕರು ಮತ್ತು ಕಲಾವಿದರ ಪಟ್ಟಿ ಸಿದ್ಧವಾಯಿತು. ಅವರಿಗೆ ತಿಳಿಸಿದೆವು. ಧಾರವಾಡದ ಕಡೆಯಿಂದ ಚೆನ್ನವೀರ ಕಣವಿ, ಕಾಪ್ಸೆ ಮುಂತಾದವರು ತಮ್ಮ ಒಡನಾಡಿಗಳೊಡನೆ ಬಂದರು. ಬೆಂಗಳೂರಿನಿಂದ ಎರಡು ಬಸ್ಸು ವ್ಯವಸ್ಥೆ ಮಾಡಿದೆವು. ಮೈಸೂರು ಕಡೆಯಿಂದ ಗೆಳೆಯರು ಬಂದರು. ಲಂಕೇಶ್ ಅವರು ಬಂದು ಪ್ರಾಸ್ತಾವಿಕವಾಗಿ ಮಾತಾಡಬೇಕಾಗಿತ್ತು. ಆದರೆ ಅವರ ಅನಾರೋಗ್ಯದಿಂದ ಪ್ರಾಸ್ತಾವಿಕ ನುಡಿಯನ್ನು ಕಳಿಸಿಕೊಟ್ಟರು. ರಾಮಚಂದ್ರ ಶರ್ಮ, ಕಿ.ರಂ. ನಾಗರಾಜ, ಡಿ.ಆರ್. ನಾಗರಾಜ್, ಅಗ್ರಹಾರ, ಕೆ. ಮರುಳಸಿದ್ದಪ್ಪ, ಡಾ॥ ಸಿದ್ಧಲಿಂಗಯ್ಯ, ಕಾಳೇಗೌಡ ನಾಗವಾರ ಹೀಗೆ ಯಾರ್‍ಯಾರೋ ಬಂದರು. ಅರಣ್ಯ ಇಲಾಖೆಯ ಮುಖ್ಯ ಕಾರ್ಯದರ್ಶಿಗಳಾದ ಪರಮೇಶ್ವರಪ್ಪ ಅವರು ಮೂರು ದಿವಸವೂ ಸಮಾವೇಶದಲ್ಲಿ ಭಾಗಿಯಾಗಿ; ತಮ್ಮ ಇಲಾಖೆಯ ಸಹಕಾರವನ್ನು ನೀಡಿದರು. ಚರ್ಚೆ, ಸಂವಾದವು ಅರ್ಥಪೂರ್ಣವಾಗಿ ನಡೆಯುವಂತೆ ಜಿ.ಎಸ್.ಎಸ್. ನೋಡಿಕೊಂಡರು. ಸಮಾಜವಾದಿ ನಾಯಕರಾದ ಕೋಣಂದೂರು ಲಿಂಗಪ್ಪ ಅವರು ಮೂರು ದಿವಸವೂ ಕ್ರಿಯಾಶೀಲರಾಗಿ ಭಾಗವಹಿಸಿದ್ದರು. ಅವರು ಮತ್ತು ನ್ಯಾಯಮೂರ್ತಿ ಎನ್.ಡಿ. ವೆಂಕಟೇಶ್ ಅವರ ಸಮ್ಮುಖವೇ ಒಂದು ರೀತಿಯ ಘನತೆಯನ್ನು ತಂದುಕೊಟ್ಟುಬಿಟ್ಟಿತ್ತು.

ಈ ರೀತಿಯ ಚರ್ಚೆ, ಸಂವಾದ ಮತ್ತು ಚಿಂತನೆ ನಮ್ಮ ಎಲ್ಲ ಪ್ರಮುಖ ಲೇಖಕರನ್ನು ಕುರಿತು ನಡೆಯಬೇಕೆಂದು ಪತ್ರಿಕೆಗಳು ಬರೆದವು. ಪ್ರೊ. ಜಿ.ಎಸ್.ಎಸ್. ನ್ಯಾಯಮೂರ್ತಿಗಳಿಗೆ, ಹಾಗೂ ಚೆನ್ನವೀರ ಕಣವಿ ಮತ್ತು ಪೂರ್ಣಚಂದ್ರ ತೇಜಸ್ವಿಯವರಿಗೆ ಖುಷಿಯಾಗಿತ್ತು. ಇದೇ ನೆಪದಲ್ಲಿ ನಾವು ಬೆಂಗಳೂರಿಗೆ ಬಂದ ಮೇಲೆ  ನನ್ನನ್ನು ಮೈಸೂರಿಗೆ ಕಳಿಸಿಕೊಟ್ಟರು. ಕುವೆಂಪು ಅವರ

ಪಾದದ ಬಳಿ ಒಂದಷ್ಟು ಗಂಟೆ ಕೂತಿದ್ದು ಧ್ಯಾನಸ್ಥ ಮನಸ್ಥಿತಿಯಿಂದ ಒಪ್ಪಿಸಿ ವಾಪಸ್ಸು ಬಂದು ಜಿ.ಎಸ್.ಎಸ್. ಅವರಿಗೆ ಒಟ್ಟು ವಿಷಯವನ್ನು ತಿಳಿಸಿದೆ. ಅವರು ಒಂದು ರೀತಿಯ ವಿಷಾದದಿಂದ "ಅವರ ಆತ್ಮಕ್ಕೆ ತಲುಪಿರುತ್ತದೆ. ಅಷ್ಟೇ ಸಾಕು" ಎಂದರು.

* * * *

ಜಿ.ಎಸ್.ಎಸ್. ಅವರಿಗೆ ಊರು ಸುತ್ತುವುದೆಂದರೆ, ದೇಶಸುತ್ತುವುದೆಂದರೆ; ಅತ್ಯುತ್ತಮ ಕೃತಿಗಳಷ್ಟೇ ಪ್ರಿಯವಾಗಿತ್ತು. "ಅಪೂರ್ವವಾದದ್ದನ್ನು ಸುಮ್ಮನೆ ನೋಡುತ್ತ ಕೂರುವುದೆಂದರೆ; ತುಂಬ ಇಷ್ಟ. ಹಾಗೆ ಬಾಲ್ಯದಲ್ಲಿ ಎಷ್ಟೊಂದು ನೋಡಿರಬಹುದು. ಒಮ್ಮೊಮ್ಮೆ ಅದನ್ನು ಮೆಲುಕು ಹಾಕುವುದೇ ಒಂದು ವಿಧದ ಖುಷಿಯ ಸಂಗತಿ" ಎಂದು ಎಷ್ಟೋ ಬಾರಿ ಬೇರೆ ಬೇರೆ ಸಂದರ್ಭಗಳಲ್ಲಿ ಹೇಳಿದ್ದಾರೆ. ಅದನ್ನು ರುಜುವಾತು ಪಡಿಸುವಂತಿದೆ ಈ ಸಾಲುಗಳು: "ನನ್ನ ಎಳೆಯಂದಿನ ಕೆಲವು ವರ್ಷಗಳು ಕಳೆದ ಹೊನ್ನಾಳ್ಳಿಯಲ್ಲಿ, ತುಂಗಭದ್ರಾ ನದಿಯ ತೀರದಲ್ಲಿ. ನನ್ನ ಪ್ರೈಮರಿ ಸ್ಕೂಲಿನ ದಿನಗಳು, ನನಗಾಗ ಐದಾರು ವರ್ಷಗಳಿರಬಹುದು. ನಮ್ಮ ಸ್ಕೂಲಿನ ಹಿಂದೆಯೆ ಹೊಳೆಗೆ ಹೋಗುವ ದಾರಿ ದಿನ ಬೆಳಗಾದರೆ ಬಿಂದಿಗೆ, ಗಡಿಗೆಗಳ ಸಮೇತ ಹೊಳೆಯ ನೀರಿಗೆ ಹೋಗುವ ಹೆಂಗಸರು–ಗಂಡಸರು, ಮಕ್ಕಳು, ಬುಟ್ಟಿತುಂಬ ಬಟ್ಟೆಗಳನ್ನು ತುಂಬಿಕೊಂಡು, ಒಗೆಯಲು ಒಯ್ಯುವ ಜನಗಳು. ತಲೆಯ ಮೇಲೆ ಒಂದು ಕೊಡ, ಅದರ ಮೇಲೆ ಇನ್ನೊಂದು ಕೊಡ, ಮತ್ತೊಂದರ ಮೇಲೆ ಇನ್ನೊಂದು ಕಿರುಬಿಂದಿಗೆ ಇರಿಸಿಕೊಂಡು ನೀರಿನ ತೇರಿನಂತೆ ನಿಧಾನಕ್ಕೆ ಚಲಿಸುವ ಹೆಂಗಸರು. ಅಡ್ಡೆಗಳಲ್ಲಿ ಎರಡೂ ಕಡೆ ಬಿಂದಿಗೆಗಳನ್ನಿರಿಸಿಕೊಂಡು ಜೀಕುತ್ತ ಬರುವ ಗಂಡಸರು. ಊರಿನ ಮನೆಗೆ, ಹೋಟೆಲುಗಳಿಗೆ ಹಂಡೆಗಳಲ್ಲಿ, ಡ್ರಮ್ಮುಗಳಲ್ಲಿ ಹೊಳೆಯ ನೀರನ್ನು ಸಾಗಿಸುವ ಎತ್ತಿನ ಗಾಡಿಗಳು. ಈ ನೀರಿನ ಮೆರವಣಿಗೆಯನ್ನು ದಿನಾ ನನ್ನ ಸ್ಕೂಲಿನ ತರಗತಿಯ ಕಿಟಕಿಯಿಂದ ನೋಡುವುದೇ ನನಗೊಂದು ಹಬ್ಬವಾಗಿ, ಪಾಠದ ಕಡೆಗೆ ನನಗೆ ಲಕ್ಷ್ಯವೇ ಇರಲಿಲ್ಲ." ಇದು ಅವರ ಬಾಲ್ಯದ್ದು. ಎಲ್ಲವನ್ನು ನೋಡಿ ಪ್ರತಿಕ್ರಿಯಿಸುವುದೆಂದರೆ; ಎಲ್ಲಿಲ್ಲದ ಲವಲವಿಕೆ. ಇದಕ್ಕೆ ಪೂರಕವೆಂಬಂತೆ ೧೯೯೪ರಲ್ಲಿ ಕೇರಳದ ಆಳ್ವೆಯಲ್ಲಿ ನಡೆದ ವೈವಿಧ್ಯಮಯವಾದ ಸಮಾವೇಶವನ್ನು ಪ್ರಸ್ತಾಪಿಸುವುದು ಸೂಕ್ತ ಅನ್ನಿಸುತ್ತದೆ.

ಯು. ಆರ್. ಅನಂತರಮೂರ್ತಿಯವರು ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ; ಒಂದು ಅಪೂರ್ವ ಸಮಾವೇಶವನ್ನು ಆಯೋಜಿಸಿದ್ದರು.

ಆಗ ಅಗ್ರಹಾರ ಕೃಷ್ಣಮೂರ್ತಿ ಕಾರ್ಯದರ್ಶಿಯಾಗಿದ್ದರು. ಆ ಕಾಲಕ್ಕೆ ಭಾರತದ ಉದ್ದಗಲಕ್ಕೂ ಬದುಕಿರುವ ಜ್ಞಾನಪೀಠ ಪ್ರಶಸ್ತಿ ವಿಜೇತರನ್ನೆಲ್ಲ ಒಂದೆಡೆ ಸೇರಿಸಿದ್ದರು. ಜೊತೆಗೆ ಬೇರೆ ಬೇರೆ ಮುಖ್ಯ ಲೇಖಕರನ್ನು ಕರೆಸಿ ಅವರೊಡನೆ ಒಂದು ವಾರ ಇರುವ ವ್ಯವಸ್ಥೆ ಮಾಡಿದ್ದರು. ಕರ್ನಾಟಕದಿಂದ ಪ್ರೊ. ಜಿ. ಎಸ್. ಶಿವರುದ್ರಪ್ಪ, ರಾಮಚಂದ್ರ ಶರ್ಮ, ಶಾಂತಿನಾಥ ದೇಸಾಯಿ, ಕೆ. ಮರುಳಸಿದ್ದಪ್ಪ, ಡಿ.ಆರ್. ನಾಗರಾಜ್, ಸಿದ್ಧಲಿಂಗಯ್ಯ, ಪ್ರತಿಭಾ ನಂದಕುಮಾರ್ ಮತ್ತು ನಾನು. ಇದರ ಸಮಾರೋಪದಲ್ಲಿದ್ದವರು ಶಿವರಾಮ ಕಾರಂತರು. ಇದನ್ನು ಉದ್ಘಾಟನೆ ಮಾಡಿದವರು ತಕಳಿ ಶಿವಶಂಕರಪಿಳ್ಳೆಯವರು. ಜೊತೆಗೆ ಹಿಂದಿಯ ಪ್ರಸಿದ್ಧ ಕಥೆಗಾರ, ಕಾದಂಬರಿಕಾರರಾದ ನಿರ್ಮಲವರ್ಮ, ಬಂಗಾಳಿಯಿಂದ ಸುನಿಲ್ ಗಂಗೋಪಾಧ್ಯಾಯ, ನವನೀತ್ ಸೇನ್, ಒರಿಯಾದಿಂದ ಪ್ರತಿಭಾರಾಯ್, ಅಸ್ಸಾಮಿ ಭಾಷೆಯ ಇಂದಿರಾಗೋಸ್ವಾಮಿ, ತೆಲುಗಿನಿಂದ ಸಿ. ನಾರಾಯಣರೆಡ್ಡಿ, ತಮಿಳಿನಿಂದ ಇಂದಿರಾ ಪಾರ್ಥಸಾರಥಿ ಹೀಗೆ ಇತರೆ ಭಾಷೆಗಳಿಂದ ಆಗಮಿಸಿದ್ದರು. ಜೊತೆಗೆ ವಾಸುದೇವನ್ ನಾಯರ್ ಮತ್ತು ಕಮಲಾದಾಸ್ ಕೆಲವು ಯುವ ಲೇಖಕರನ್ನು ಜೊತೆಗೊಡಿಸಿಕೊಂಡು ಎಷ್ಟು ಕ್ರಿಯಾಶೀಲರಾಗಿದ್ದರು. ತಕಳಿಯವರಂಥ ಅತ್ಯಂತ ಎತ್ತರದ ಲೇಖಕರು ಪುಟ್ಟಹುಡುಗರಂತೆ ಎಲ್ಲರಿಗೂ ಲವಲವಿಕೆಯನ್ನು ತುಂಬುತ್ತಿದ್ದರು. ಅವರು ನಡುವಿಗೆ ಒಂದು ಪಂಚೆಯನ್ನು ಮಾತ್ರ ಸುತ್ತಿದ್ದರು. ಹೆಗಲಿನ ಬಿಳಿಯ ಟವಲ್ ಮಾತ್ರ.

ಉದ್ಘಾಟನೆ ಆದಮೇಲೆ ಮಧ್ಯಾಹ್ನ ಒಂದು ಸಂವಾದವಿತ್ತು. ಅದನ್ನು ವಾಸುದೇವನ್ ನಾಯರ್ ಅವರು ನಡೆಸಿಕೊಡುತ್ತಿದ್ದರು. ಮುಂದುಗಡೆಯೆ ತಕಳಿಯವರ ಜೊತೆಯಲ್ಲಿ ಪ್ರೊ. ಜಿ.ಎಸ್.ಎಸ್., ಇಂದಿರಾ ಗೋಸ್ವಾಮಿ, ಕಮಲಾದಾಸ್ ಕೂತಿದ್ದರು. ಆಗ ವೇದಿಕೆಯ ಮೇಲೆ ಒಂದು ಪಂಜರ ನೇತಾಡುತ್ತಿತ್ತು. ಅದರಲ್ಲಿ ಗಿಳಿಯೊಂದು ಒದ್ದಾಡುತ್ತಿತ್ತು. ಅದನ್ನು ನೋಡಿ ಜಿ.ಎಸ್.ಎಸ್. ಅವರು ಒದ್ದಾಡತೊಡಗಿದ್ದರು. ಕೊನೆಗೆ ಒಂದು ಚೀಟಿಯನ್ನು ಬರೆದು ನನ್ನ ಕೈಗೆ ಕೊಟ್ಟರು. ಆ ಪಂಜರದ ಗಿಳಿಯ ಹಿಂಸೆಯನ್ನು ಕುರಿತು ಬರೆದಿದ್ದರು. ಅಷ್ಟೇ ಅಲ್ಲ ಅದು ಒದ್ದಾಡುತ್ತಿದ್ದರೆ ಯಾವ ರೀತಿಯ ಸಾಹಿತ್ಯದ ಸಂವಾದ ಎಂದು ಉಗ್ರವಾಗಿ ಪ್ರತಿಕ್ರಿಯಿಸಿದ್ದರು. ಆ ಚೀಟಿಯನ್ನು ವಾಸುದೇವನ್ ನಾಯರ್ ಅವರಿಗೆ ಕೊಟ್ಟೆ. ಅವರು ಅದನ್ನು ನೋಡಿ "ಕ್ಷಮಾಪಣೆ ಕೇಳಿ" ಪಂಜರವನ್ನು ಕೆಳಕ್ಕೆ ಇಳಿಸಿ ಒಳಗೆ ಕಳಿಸಿಕೊಟ್ಟರು. ಅದಕ್ಕೆ ಎಲ್ಲರೂ ಚಪ್ಪಾಳೆ ತಟ್ಟಿ ಬೆಂಬಲ ಸೂಚಿಸಿದರು. ಆದರೆ ಜಿ.ಎಸ್.ಎಸ್. ಅವರು ತಕಳಿಯವರ ಬಳಿ ಮತ್ತು ಕಮಲಾದಾಸ್ ಅವರ ಬಳಿ ತೀವ್ರವಾಗಿ ಪ್ರತಿಕ್ರಿಯಿಸಿದ್ದು; ಪಂಜರವೇನೋ

ಇಳಿಯಿತು. ಆದರೆ ಆ ಗಿಳಿ ಬಂಧಮುಕ್ತ ಆಗಲಿಲ್ಲ ಎಂದು ವಿಷಾದದಿಂದ ಹೇಳಿದಾಗ ಕಮಲಾದಾಸ್ ಮತ್ತು ಇಂದಿರಾಗೋಸ್ವಾಮಿಯವರು ಸಂಭ್ರಮಪಟ್ಟಿದ್ದರು. ಆಗ ಜಿ.ಎಸ್.ಎಸ್. ಅವರು ಮುಂದುವರೆದು ಹೇಳಿದ್ದು "ಒಂದು ರಿಚುಯಲ್ ರೀತಿಯಲ್ಲಿ ಇನ್ನೂ ಯಾಕೆ ಅದನ್ನು ಉಳಿಸಿಕೊಂಡಿದ್ದೀರಿ? ನೀವು ಅಷ್ಟು ನಿರ್ಭಿಡೆಯಿಂದ ಎಷ್ಟು ಚೆನ್ನಾಗಿ ಬರೆಯುತ್ತೀರಿ. ಅಂಥದ್ದೆಲ್ಲ ಇಂಥ ಬಹುಮುಖ್ಯ ರಾಷ್ಟ್ರೀಯ ಸಮಾವೇಶದಲ್ಲಿ ನಡೆಯುತ್ತದಲ್ಲ ಎಂದು ಗಾಬರಿಪಟ್ಟು ಒದ್ದಾಟ ತಾಳಲಾರದೆ ಪ್ರತಿಕ್ರಿಯಿಸಿದೆ" ಎಂದಾಗ ತಕಳಿಯವರು ಪೆಚ್ಚಾಗಿ ಕೂತಿದ್ದರು. ಕಮಲಾದಾಸ್ ಅವರು ತಾವೇ ಪಂಜರದಿಂದ ಹೊರಗೆ ಬಂದಂತೆ ಪುಳಕಿತರಾಗಿದ್ದರು. ನಿರ್ಮಲವರ್ಮ ಅವರು ವೇದಿಕೆಯ ಮೇಲೆ ಇದ್ದವರು; ತಮ್ಮ ಮಾತಿನ ಸಂದರ್ಭದಲ್ಲಿ ಜಿ.ಎಸ್.ಎಸ್. ಅವರ ಹೆಸರನ್ನು ಪ್ರಸ್ತಾಪಿಸಿಯೇ ಮೆಚ್ಚುಗೆಯ ನುಡಿಯ ಜೊತೆಗೆ; ಪಂಜರದ ಗಿಳಿ ಮತ್ತು ಹೆಣ್ಣು ಗಂಡಿನ ಸಂಬಂಧ ಕುರಿತು ಅತ್ಯಂತ ಗಂಭೀರವಾಗಿ ಮಾತಾಡಿದ್ದರು. ಒಂದು ದೃಷ್ಟಿಯಿಂದ ಇದು ಗಂಭೀರವಾದ ಚರ್ಚೆಯ ವಿಷಯವೇ ಆಗಿತ್ತು. ಆಗ ಎಲ್ಲರ ನಡುವೆ ಎದ್ದು ಕಾಣಿಸಿಕೊಂಡರಲ್ಲ ಎಂಬ ಖುಷಿ ನಮಗಾಗಿತ್ತು.

ಸಂಜೆ ನಾವೆಲ್ಲ ಕೊಠಡಿಯಲ್ಲಿ ಸೇರಿದಾಗ; ಪಂಜರದ ಗಿಳಿಯ ವಿಷಯವನ್ನೇ ತೆಗೆದುಕೊಂಡು ಮಾತು ಎಲ್ಲೆಲ್ಲಿಗೋ ಸಾಗಿತ್ತು. ಆಗ ಶಾಂತಿನಾಥ ದೇಸಾಯಿ, ರಾಮಚಂದ್ರಶರ್ಮ, ಡಿ.ಆರ್. ನಾಗರಾಜ್ ಅತ್ಯಂತ ಗಂಭೀರವಾಗಿ ಮಾತಿನಲ್ಲಿ ತೊಡಗಿದ್ದಾಗ; ಪ್ರತಿಭಾ ನಂದಕುಮಾರ್ ಅವರು "ನಾವೆಲ್ಲ ನಿಮ್ಮ ಮುಂದೆ ಪಂಜರದ ಗಿಳಿಗಳೇ" ಎಂದರು ವಿಷಾದ ತುಂಬಿದ ಧ್ವನಿಯಲ್ಲಿ. ಅದಕ್ಕೆ ಡಿ.ಆರ್. ನಾಗರಾಜ್ ತುಂಟತನದಿಂದ ಪ್ರತಿಭಾ ಅವರನ್ನು ರೇಗಿಸುವುದಕ್ಕಾಗಿಯೇ "ನಿನ್ನಂಥವರ ಮುಂದೆ ನಾವೇ ಪಂಜರದ ಗಿಳಿಗಳು" ಎಂದಾಗ; ಎಷ್ಟು ತೀವ್ರವಾಗಿ ಪ್ರತಿಭಟಿಸತೊಡಗಿದರೆಂದರೆ, ನಾವೆಲ್ಲ ಗಾಬರಿ ಪಡುವಂತಾಗಿತ್ತು. ಆಗ ಜಿ.ಎಸ್.ಎಸ್. ಅವರು ಸಮಾಧಾನಮಾಡಿ "ನೀವು, ಸವಿತಾ ನಾಗಭೂಷಣ ಅಂಥವರು ಎಷ್ಟು ನಿರ್ಭಿಡೆಯಿಂದ ಚೆನ್ನಾಗಿ ಬರೆಯುತ್ತೀರಿ. ಇಂಥದ್ದಕ್ಕೆಲ್ಲ ನೀವು ಎಂದೆಗುಂದಬಾರದು, ಸಂವಾದಕ್ಕಿಳಿಯಬೇಕು. ನಾಗರಾಜ್ ಅಂಥವರು ನನಗೆ ತಿಳಿದ ಮಟ್ಟಿಗೆ ಪಂಜರದ ಗಿಳಿಗಳು; ಪಂಜರದ ಗಿಳಿಗಳಾಗಿಯೇ ಮುಂದುವರಿಯಬೇಕು ಎಂದು ಯೋಚಿಸುವಂತಥವರಲ್ಲ, ಬರೆಯುವಂಥವರಲ್ಲ" ಎಂದು ಹೇಳಿದಾಗ ಸ್ವಲ್ಪಮಟ್ಟಿಗೆ ಸುಮ್ಮನಾದರೂ; ಇನ್ನೂ ಸಿಟ್ಟಿನ ಕಾವು ಕಡಿಮೆಯಾಗಿರಲಿಲ್ಲ. ಮಾರನೆಯ ದಿವಸವೂ ಜಿ.ಎಸ್.ಎಸ್. ಅವರ ಮುಂದೆಯೇ

ಡಿ.ಆರ್. “ಏನು ಪ್ರತಿಭಾ ಅವರೇ ಚೆನ್ನಾಗಿದ್ದೀರಾ? ಹೇಗಿದೆ ನಿಮ್ಮ ಆರೋಗ್ಯ?” ಎಂದು ಹೇಳಿದಾಗ ಜಿ.ಎಸ್.ಎಸ್. ನಗುತ್ತಲೇ ಬಾಯಿ ಮುಚ್ಚಿಸಿದ್ದರು.

ಇದಕ್ಕಿಂತ ಮೊದಲು ಬೆಳಿಗ್ಗೆ ಆರು ಗಂಟೆಗೆಯೇ ಜಿ.ಎಸ್.ಎಸ್. ಅವರ ಜೊತೆ ವಾಕ್ ಹೋದಾಗ; ತೆಲುಗು ಕವಿ ಸಿ. ನಾರಾಯಣರೆಡ್ಡಿಯವರು ಕೂಡಿಕೊಂಡರು. ಅವರು ಹಿಂದಿನ ದಿವಸದ ಗಿಳಿಯ ಘಟನೆಯನ್ನು ತೆಗೆದುಕೊಂಡು ಮೆಚ್ಚಿಗೆ ಸೂಚಿಸಿದ್ದರು. ಹೀಗೆಯೇ ತುಂಬ ಹಸಿರಿನ ಮರಗಿಡಗಳ ಮಧ್ಯೆ ನಡೆದು ಹೋಗುತ್ತಿರುವಾಗ “ನಾರಾಯಣರೆಡ್ಡಿಯವರೆ, ಅಲ್ಲಿ ನೋಡಿ, ಆ ಕೊಂಬೆಯ ಮೇಲೆ ಮೂರು ನಾಲ್ಕು ಗೂಬೆಗಳು ಕೂತಿವೆ. ಯಾರಿಗೂ ತೊಂದರೆ ಕೊಡದ ಅವುಗಳನ್ನು ‘ನೋಡಿದರೆ ಅಪಶಕುನ’ ಎಂದು ಶಾಶ್ವತವಾಗಿ ಅವುಗಳನ್ನು ನೋಡದಂತೆ ಮಾಡಿಬಿಟ್ಟಿದ್ದಾರೆ. ನಮ್ಮ ಕಣಿ ಹೇಳುವ ಜ್ಯೋತಿಷಿಗಳು” ಎಂದು ವಿಷಾದದಿಂದ ಪ್ರತಿಕ್ರಿಯಸಿದಾಗ; ನಾರಾಯಣರೆಡ್ಡಿಯವರು “ನಾನು ಅದನ್ನು ಕುರಿತು ಕವಿತೆಯೆಲ್ಲ ಬರೆದಿದ್ದೀನಿ” ಎನ್ನುವ ಸಮಯಕ್ಕೆ ಅವು ತಮ್ಮ ಏಕಾಂತಕ್ಕೆ ಈ ಮನುಷ್ಯರು ಧಕ್ಕೆ ತರುತ್ತಿದ್ದಾರೆಂದು ಮರೆಯಾದುವು. ಹೀಗೆ ಜಿ.ಎಸ್.ಎಸ್. ಅವರ ನೋಡುವುದರ ಹಿಂದೆ ಎಂಥ ಆತ್ಮೀಯವಾದ ಮಾನವೀಯ ಕಳಕಳಿ ಇತ್ತು. ಈ ದೃಷ್ಟಿಯಿಂದ ‘ಮನೆ ಕಟ್ಟುವ ಮಂದಿ’ ಯಾವಾಗಲೂ ನೆನಪಿಗೆ ಬರುತ್ತಿರುತ್ತದೆ. ಅದರ ಕೆಲವು ನುಡಿಗಳು ಹೀಗಿವೆ:

> **“ಅವರಿವರಿಗಾಗಿ ಮನೆ ಕಟ್ಟುತ್ತಾ ಕಟ್ಟುತ್ತಾ**
> **ಸವೆದು ಹೋಗುವ ಈ ಜನಕ್ಕೆ**
> **ಅನ್ನಿಸುವುದಿಲ್ಲವೆ, ತಮಗೂ ಒಂದು**
> **ಚಿಕ್ಕ, ತೀರಾ ಚಿಕ್ಕದೇ ಆದಂಥ**
> **ಮನೆ ಇಲ್ಲವೆಂದು”**

ಹೀಗೆ ಎಲ್ಲವನ್ನು ಮನದೊಳಗೆ ಬಿಟ್ಟುಕೊಂಡು; ಅದನ್ನು ಅನನ್ಯತೆಯಿಂದ ನೋಡುವಂಥ ಮನಸ್ಥಿತಿಯು ಎಲ್ಲರಿಗೂ ಬರುವುದಿಲ್ಲ. ಹೃದಯ ಸಂವೇದನೆ ಇದ್ದಾಗ ಮಾತ್ರ; ಸೃಷ್ಟಿಕ್ರಿಯೆಯ ಬಗ್ಗೆ ತಾದಾತ್ಮ್ಯತೆಯು ರೂಪುಗೊಳ್ಳಲು ಸಾಧ್ಯ. ಹಾಗೆ ನೋಡಿದರೆ ಅಂದು ರಾತ್ರಿ ಕೊಠಡಿಯಲ್ಲಿ ನಾವೆಲ್ಲ ಸೇರಿದ್ದಾಗ; ಶಾಂತಿನಾಥ ದೇಸಾಯಿಯವರು ಒಂದು ಮಾರ್ಮಿಕವಾದ ಮಾತನ್ನು ಹೇಳಿದರು: “ಒಂದು ವೇಳೆ ಶಿವರುದ್ರಪ್ಪನವರು ಗಿಳಿಯ ಪಂಜರದ ಬಗ್ಗೆ ಹಾಗೆ ಪ್ರತಿಕ್ರಿಯಿಸಿ ಇಳಿಸದಿದ್ದರೆ; ಬೇರೆಯವರು ಹೇಗೆ ಪ್ರತಿಕ್ರಿಯಿಸುತ್ತಿದ್ದರು ಮತ್ತು ಹಾಗೆಯೇ

ಪ್ರತಿಭಟಿಸದೇ ಬಿಟ್ಟುಬಿಡುತ್ತಿದ್ದರಾ? ಯಾಕೆಂದರೆ ವೇದಿಕೆಯ ಮೇಲೆ ಕೂತ ನಿರ್ಮಲ ವರ್ಮ ಅವರಿಗೆ ಅದು ಮೊದಲು ಹೊಳೆಯಲಿಲ್ಲ. ಅದರ ಪಕ್ಕದಲ್ಲಿಯೇ ನಿಂತು ಮಾಡರೇಟ್ ಮಾಡುತ್ತಿದ್ದ ವಾಸುದೇವನ್ ನಾಯರ್ ಅವರಂಥ ಸೂಕ್ಷ್ಮ ಸಂವೇದನೆಯ ದೊಡ್ಡ ಲೇಖಕನಿಗೆ ಯಾಕೆ ಹೊಳೆಯಲಿಲ್ಲ ಎಂಬ ಗಂಭೀರ ಪ್ರಶ್ನೆಯನ್ನು ಎತ್ತಿದ್ದರು. "ದಿಸ್ ಈಸ್ ರಿಯಲಿ ಬ್ಯೂಟಿಫುಲ್" ಎಂದು ರಾಮಚಂದ್ರ ಶರ್ಮರು ಧ್ವನಿಗೂಡಿಸುವ ಸಮಯಕ್ಕೆ ಪ್ರತಿಭಾನಂದ ಕುಮಾರ್ ಅವರು ಪ್ರವೇಶಪಡೆದದ್ದು.

ಇರಲಿ, ಬಹುದೂರ ನಡೆದ ವಾಕ್‌ನಲ್ಲಿ ಇಬ್ಬರು ಮುಖ್ಯ ಕವಿಗಳ ಮಧ್ಯೆ ಕಾವ್ಯಾನುಸಂಧಾನದ ನಾನಾ ರೀತಿಯ ಚಿಂತನೆಗಳು ಬಂದು ಹೋದದ್ದು ನಿಜ. ಯಾಕೆಂದರೆ; ಒಂದು ಗಂಟೆ ಅದಕ್ಕೆ ಸಾಕ್ಷಿಭೂತನಾಗಿದ್ದೆ. ಇಷ್ಟಾದರೂ ಸಿ. ನಾರಾಯಣರೆಡ್ಡಿ ಯವರು  ಜಿ.ಎಸ್.ಎಸ್. ಅವರಷ್ಟು ದೊಡ್ಡಕವಿಯೂ ಅಲ್ಲ, ದೊಡ್ಡ ವಿಚಾರವಾದಿಯೂ ಅಲ್ಲ, ಅಷ್ಟೇ ಅಲ್ಲ, ಬೇರೆ ಬೇರೆ 'ಸ್ಕೂಲ್ ಆಫ್ ಥಾಟ್'ಗಳು ಪ್ರಫುಲ್ಲವಾಗಿ ತೆಲುಗಿನ ಸಂದರ್ಭದಲ್ಲಿ ಬೆಳೆಯಲು ದುಡಿದವರಲ್ಲ. ಇದಕ್ಕೆ ಸಂಬಂಧಿಸಿದಂತೆ ಜಿ.ಎಸ್.ಎಸ್. ವಿವರಣೆಗೆ ಮೀರಿದ ಮಾರ್ಗವನ್ನೇ ನಿರ್ಮಾಣ ಮಾಡಿದವರು. ಅದೇನೆ ಆಗಿರಲಿ ನೆನಪಿನ ದೃಷ್ಟಿಯಿಂದ ಅದೊಂದು ಚಾರಿತ್ರಿಕ ನಡಿಗೆಯೇ ಆಗಿತ್ತು. ಹಾಗೆಯೇ ಆ ಪೆರಿಯಾರ್ ನದಿಯ ಮರಳ ರಾಶಿಯನ್ನು ಕುರಿತು ಎಷ್ಟು ಮಮಕಾರದಿಂದ ಮಾತಾಡಿದ್ದರು. ಅದನ್ನು ರೇಷಿಮೆಯ ಬಣ್ಣಕ್ಕೆ ಹೋಲಿಸಿದ್ದರು. ಯಾಕೆಂದರೆ ಅದು ಅಷ್ಟು ಪರಿಶುದ್ಧವಾಗಿತ್ತು. ಒಂದೆರಡು ಬಾರಿ ಖುಷಿಯಿಂದ ಕಾಲುಚಾಚಿ ಜಿ.ಎಸ್.ಎಸ್. ಅವರ ಜೊತೆ ನಾವೆಲ್ಲ ಕೂತು ಸಂಭ್ರಮಪಟ್ಟಿದ್ದುಂಟು. ಇದಕ್ಕೆ ಸಂಬಂಧಿಸಿಯೇ ಅನಂತರಮೂರ್ತಿಯವರನ್ನು ಕುರಿತು "ಈ ಜಾಗವನ್ನು ಹೇಗೆ ಆಯ್ಕೆಮಾಡಿದಿರಿ?" ಎಂದು ಕೇಳಿದಾಗ; "ಅದೊಂದು ನಿಜವಾಗಿಯೂ ಆಕಸ್ಮಿಕವೆ. ನಾನು ಕೊಟ್ಟಾಯಂ ಗಾಂಧಿ ವಿಶ್ವವಿದ್ಯಾಲಯದಲ್ಲಿ ಉಪಕುಲಪತಿಯಾಗಿದ್ದಾಗ; ಒಂದು ವಿಚಾರ ಸಂಕಿರಣವನ್ನು ಈ ಮಲಬಾರ್ ಅರಮನೆಯಲ್ಲಿ ಕೆಲವು ಅಧ್ಯಾಪಕರ ಸಲಹೆ ಮೇರೆಗೆ ವ್ಯವಸ್ಥೆ ಮಾಡಿದ್ದೆ. ಆಗ ಆಕಸ್ಮಿಕವಾಗಿ ಈ ನದಿಯ ದಡ, ಮರಳ ರಾಶಿ ನನ್ನನ್ನು ಸೆಳೆದುಬಿಟ್ಟಿತ್ತು ಮಾನಸಿಕವಾಗಿ. ಆಗ ಸಮಾವೇಶವನ್ನು ಇಲ್ಲಿ ಮಾಡುವುದು ಎಂದು ನಾನು ಸೂಚಿಸಿದಾಗ ಎಲ್ಲರೂ ಸಂತೋಷದಿಂದ ಒಪ್ಪಿಕೊಂಡಿದ್ದರು ಸರ್" ಎಂದಾಗ  ಜಿ.ಎಸ್.ಎಸ್. ಮಂದಸ್ಮಿತರಾಗಿದ್ದರು. ಮತ್ತು "ನಮ್ಮನ್ನು ಇಲ್ಲಿಗೆ ಕರೆತಂದು ಅಪೂರ್ವ ಅನುಭವಕ್ಕೆ ಕಾರಣಕರ್ತರಾಗುವಂತೆ ಮಾಡಿದಿರಿ"

ಎಂದಾಗ; "ನೀವು ಬಂದು ಕಳೆಕಟ್ಟಿದಿರಿ" ಎಂದದ್ದಕ್ಕೆ ಮುಗ್ಧತೆಯ ಸರಳ ನಗು ಅವರ ಮುಖದ ತುಂಬ ಆವರಿಸಿಕೊಂಡಿತ್ತು. ಅದರಲ್ಲೂ ಹೊಸಹೊಸ ಜಾಗಗಳಿಗೆ ಹೋಗುವುದೆಂದರೆ; ಜಿ.ಎಸ್.ಎಸ್. ಅವರಿಗೆ ಚೇತೋಹಾರಿತನ ತುಂಬಿ ತುಳುಕಿಬಿಡುತ್ತಿತ್ತು. ಅವರ 'ಒಂದು ಹಳೆಯ ಕತೆ' ಕವಿತೆಯಂತೆ. ಎಂಥ ಧ್ವನಿಪೂರ್ಣವಾದದ್ದು:

**"ಈಡನ್ನಿನ ತೋಟದಲ್ಲಿ ಮೊಟ್ಟಮೊದಲ ದಂಪತಿಗಳು**
**ಬೆಳಕಿನಂತೆ, ಗಾಳಿಯಂತೆ, ಹಸುರಿನಂತೆ, ಹೂವಿನಂತೇ**
**ಹಾಯಾಗಿಯೇ ಇದ್ದರು. ಆ ಇಬ್ಬರೇ ಇಬ್ಬರು**
**.....ಒಂದು ಚೂರೂ ಬಟ್ಟೆಯಿಲ್ಲ ಅವರ ಮೈಯ ಮೇಲೆ**
**ಬಾನಿನಂತೆ, ಬೆಟ್ಟದಂತೆ, ಹಕ್ಕಿಯಂತೆ, ಪ್ರಾಣಿಯಂತೆ**
**ಲಜ್ಜೆಯರಿಯದಿದ್ದರು. ಆ ಇಬ್ಬರೇ ಇಬ್ಬರು !"**

ಎಂಥ ಭಾವ ತುಂಬಿದ ಶಬ್ದಗಳು. ಆ ಶಬ್ದಗಳೂ ಕೂಡ ಖುಷಿ ಪಟ್ಟಿರಬಹುದು. ಒಬ್ಬ ಕವಿಯಿಂದ ಇಂಥ ಅರ್ಥಗಳನ್ನು ನಮ್ಮ ಒಡಲಿಗೆ ತುಂಬಿಕೊಳ್ಳುತ್ತಿದ್ದೇವೆ ಎಂದು. ಆದರೆ ಒಂದಂತು ಸತ್ಯ: ಅವರ ವಿಸ್ಮಯಗಳಿಗೆ ಕೊನೆ ಮೊದಲೆಂಬುದು ಇರಲೇ ಇಲ್ಲ. ಆ ಕಾರಣಕ್ಕಾಗಿಯೇ ನನ್ನ ಅರಿವಿನ ಮಟ್ಟಿಗೆ ಜಿ.ಎಸ್.ಎಸ್. ಅವರ ನೋಟಕ್ಕೆ ಆಯಾಸವೆಂಬುದು ಗೋಚರಿಸಲೇ ಇಲ್ಲ. ವಿಭಿನ್ನ ಆಯಾಮಗಳನ್ನು ಕಂಡುಕೊಳ್ಳುತ್ತಲೇ ಹೋಗುತ್ತಿದ್ದರು. ಅರಿವಿನ ಬಾಗಿಲುಗಳನ್ನು ಯಾವುದೇ ಕಾರಣಕ್ಕೂ ಮುಚ್ಚುವ ಪರಿಸ್ಥಿತಿಯನ್ನು ತಂದುಕೊಳ್ಳಲೇ ಇಲ್ಲ.

ನವನೀತ್ ಸೇನ್ ಅವರು ಬಂಗಾಳಿಯ ಬಹು ಮುಖ್ಯ ಲೇಖಕಿ. ಇಂಗ್ಲೀಷ್‌ನಲ್ಲೂ ಗಂಭೀರವಾಗಿಯೇ ಬರೆಯುತ್ತಿರುವಂಥವರು. ಆಕೆ ಪಾದರಸದಂತೆ ಮಾತು ಮತ್ತು ಕೃತಿಯಲ್ಲಿ. ರವೀಂದ್ರನಾಥ ಟಾಗೂರರ ಹತ್ತಿರದ ಸಂಬಂಧಿ ಎನ್ನುವುದರ ಜೊತೆಗೆ; ಅವರ ತೊಡೆಯ ಮೇಲೆ ಆಡಿ ಬೆಳೆದವರು ಎಂಬುದು ಸುದ್ದಿಯಾಗಿತ್ತು. ಹಾಗೆಯೇ ಅರ್ಥಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿ ವಿಜೇತ ಮತ್ತು ಬಹುದೊಡ್ಡ ಸಾಮಾಜಿಕ ಚಿಂತಕ ಅಮರ್ತ್ಯ ಸೇನ್ ಅವರ ಪತ್ನಿ ಎಂದು ಯಾರೋ ಜಿ.ಎಸ್.ಎಸ್. ಅವರ ಕಿವಿಯ ಮೇಲೆ ಹಾಕಿದ್ದಾರೆ. ಅದರ ಬಗ್ಗೆ ಎಷ್ಟು ಕುತೂಹಲವನ್ನು ಬೆಳೆಸಿಕೊಂಡಿದ್ದರು. ಸಾಮಾನ್ಯವಾಗಿ ಇಂದಿರಾ ಗೋಸ್ವಾಮಿ, ಪ್ರತಿಭಾ ರಾಯ್, ಕಮಲಾದಾಸ್, ನವನೀತ್ ಸೇನ್ ಯಾವಾಗಲೂ ಒಟ್ಟೊಟ್ಟಿಗೆಯೇ ಇರುತ್ತಿದ್ದರು. ಕೆಲವು ಲೇಖಕರನ್ನು ಆತ್ಮೀಯವಾಗಿ ಭೇಡಿಸುತ್ತಿದ್ದರು. ಕೊನೆಗೆ

ಸಮಾರೋಪದ ಸಮಯದಲ್ಲಿ ಶಿವರಾಮ ಕಾರಂತರು, ತಕಳಿ ಶಿವಶಂಕರ ಪಿಳ್ಳೆಯವರ ಜೊತೆ ಜಿ.ಎಸ್.ಎಸ್. ಅವರು ಮಾತಾಡುತ್ತಿದ್ದಾಗ; ಪಂಜರದ ಗಿಳಿ ಮತ್ತು ವೇದಿಕೆಯನ್ನು ಕುರಿತು ಪ್ರಸ್ತಾಪಿಸುತ್ತ ತಮ್ಮ ಮೆಚ್ಚಿಗೆಯನ್ನು ಸೂಚಿಸಿದ್ದರು. ಆಗ ಒಟ್ಟು ವಿಷಯ ತಿಳಿದು ಕಾರಂತರು ಒಳ್ಳೆಯದಾಯಿತು ಎಂದು ಹೇಳುತ್ತ "ನಿಮ್ಮ ಕೇರಳದ ಬಹುಪಾಲು ಮನೆಗಳಲ್ಲಿ ಪಂಜರದ ಗಿಳಿಗಳನ್ನು ಕಂಡಿದ್ದೇನೆ. ಅದಕ್ಕೆ ಬೇರೆ ಏನಾದರೂ ನಂಬಿಕೆಯ ಕಾರಣಗಳಿದೆಯಾ?" ಎಂದು ಕೇಳಿದರು. ಅದಕ್ಕೆ ತಕಳಿಯವರು "ನಂಬಿಕೆಯ ಕಾರಣಗಳಿಗಾಗಿ ಮುಂದುವರೆಯುತ್ತಿಲ್ಲ. ಇಲ್ಲಿ ಸಾಕಷ್ಟು ಗಿಳಿಗಳು ಸಿಗುತ್ತವೆ. ಒಂದು ವಿಧದ ಫ್ಯಾಷನ್ ಮತ್ತು ಹಾಬಿಗಾಗಿ ಸಾಕುವರು. ಕೆಲವು ಮನೆಗಳಲ್ಲಿ ಒಂದಕ್ಕಿಂತ ಮೇಲ್ಪಟ್ಟು ಇರುವವು. ಅವುಗಳಿಗೆ ಹಿಂಸೆ ಅನ್ನಿಸಿದರೂ; ನಾನಾ ರೀತಿಯ ತಿಂಡಿಗಳನ್ನು ಕೊಡುತ್ತ, ಅವುಗಳ ಜೊತೆ ಇವರೂ ಗಿಳಿಗಳಂತೆ ಆಡುವ ಪರಿ ಮೊದಲಿನಿಂದಲೂ ನಡಕೊಂಡು ಬಂದಿದೆ. ಅದರಲ್ಲೂ ಮಕ್ಕಳಿಗೆ ಎಲ್ಲಿಲ್ಲದ ಕುತೂಹಲ. ಅವು ಗಿಳಿಯ ಮಾತಿನೊಡನೆ ಸಮೀಕರಿಸಿಕೊಂಡು ಆನಂದ ಪಡುವರು. ಆದರೆ ಮೊದಲನೆ ದಿವಸ ವೇದಿಕೆಯಲ್ಲಿ ಗಿಳಿಯ ಪಂಜರವನ್ನು ನೇತು ಹಾಕಿದ್ದು ದೊಡ್ಡ ತಪ್ಪು. ಆ ಕಿರಿಕಿರಿಯನ್ನು ತಪ್ಪಿಸಲು ಶಿವರುದ್ರಪ್ಪನವರು ಚೀಟಿ ಕಳಿಸಿದ್ದು ಒಳ್ಳೆಯದಾಯಿತು." ಎಂದಿದ್ದರು.

ಇದೇ ಸಮಯದಲ್ಲಿ ದೇಶಾಭಿಮಾನಿ ಪತ್ರಿಕೆಯ ಸಂಪಾದಕರಾದ ಗೋವಿಂದ ಪಿಳ್ಳೆಯವರು ಕಾರಂತರನ್ನು ಮಾತಾಡಿಸಲು ಬಂದರು. ಗೋವಿಂದ ಪಿಳ್ಳೆಯವರು ಜಿ.ಎಸ್.ಎಸ್. ಅವರಿಗೆ ಗೊತ್ತಿತ್ತು. ಕನ್ನಡವನ್ನು ಚೆನ್ನಾಗಿ ಕಲಿತಿದ್ದರು. ಆಗ ಕಾರಂತರು ಕೊಚ್ಚಿನ್‌ನಲ್ಲಿ ನಡೆದ ರಾಷ್ಟ್ರೀಯ ತುರ್ತುಪರಿಸ್ಥಿತಿ ವಿರೋಧಿ ಲೇಖಕರ ಸಮಾವೇಶವನ್ನು ಉದ್ಘಾಟಿಸಿದ್ದರು. ಅವರ ಉದ್ಘಾಟನಾ ಭಾಷಣವು ಎಷ್ಟೋ ದಿವಸ ಪತ್ರಿಕೆಗಳಿಗೆ ಸುದ್ದಿಯಾಗಿತ್ತು. ಕರ್ನಾಟಕದಿಂದ ಡಿ.ಆರ್. ನಾಗರಾಜ್, ಸಿದ್ಧಲಿಂಗಯ್ಯ, ಶೂದ್ರ ಅವರು ಬಂದಿದ್ದರು ಎಂದು ತಿಳಿಸಿದ್ದರು. ಜಿ.ಎಸ್.ಎಸ್. ಅವರೂ ತುರ್ತುಪರಿಸ್ಥಿತಿಯನ್ನು ವಿರೋಧಿಸಿದವರಾದ್ದರಿಂದ ಗೋವಿಂದ ಪಿಳ್ಳೆಯವರ ಮಾತುಗಳನ್ನು ಆತ್ಮೀಯವಾಗಿ ತೆಗೆದುಕೊಂಡಿದ್ದರು. ಹಾಗೆಯೇ ಕಾರಂತರಿಗೆ ತಮ್ಮ ಮೆಚ್ಚಿಗೆಯನ್ನು ಸೂಚಿಸಿದರು.

ಅಂದು ಕಾರಂತರ ಸಮಾರೋಪ ಭಾಷಣವು ಅಷ್ಟೇ ಅರ್ಥ ಗರ್ಭಿತವಾಗಿತ್ತು. ಕನ್ನಡದ ರೀತಿಯಲ್ಲಿಯೇ ಅವರ ಮಾತು ದಿಟ್ಟತೆಯಿಂದ ಕೂಡಿತ್ತು. "ಇಂಗ್ಲೀಷ್‌ನಲ್ಲೂ ಮಾತಾಡುವುದನ್ನು ಕಾರಂತರು ಎಷ್ಟು ಚೆನ್ನಾಗಿ ರೂಢಿಸಿಕೊಂಡಿದ್ದಾರೆ" ಎಂದು

ಅಭಿಮಾನದಿಂದ ಗೋವಿಂದ ಪಿಳ್ಳೆಯವರಿಗೆ ಹೇಳಿದ್ದರು. ಇಂಥ ಅಪೂರ್ವ ಸಮಾವೇಶದಲ್ಲಿ ಎಲ್ಲರೂ ವೇದಿಕೆಯ ಮೇಲೆ ಹೋಗಿ ಮಾತಾಡಲು ಸಾಧ್ಯವಿಲ್ಲದಿದ್ದರೂ; ಒಬ್ಬರಿಗೊಬ್ಬರು ಭೇಟಿಯಾಗಿ ನಡೆಸಿದ ಪರಸ್ಪರ ಸಮಾಲೋಚನೆ ಒಂದು ರೀತಿಯಲ್ಲಿ ಸಾರ್ಥಕ ಅನ್ನಿಸಿತ್ತು. ಅನಂತಮೂರ್ತಿಯವರು ಪ್ರಾರಂಭದಲ್ಲಿಯೇ ತಮ್ಮ ಪ್ರಾಸ್ತಾವಿಕ ನುಡಿಗಳಲ್ಲಿ 'ಪರಸ್ಪರ' ಎಂಬುದಕ್ಕೆ ಒತ್ತು ಕೊಟ್ಟು ಮಾತಾಡಿದ್ದರು. ಹಾಗೆಯೇ ಒಬ್ಬರಿಗೊಬ್ಬರು ಅರಿಯುವುದೇ ಇದರ ಮುಖ್ಯ ಉದ್ದೇಶ ಎಂದು ಹೇಳಿದ್ದರು.

ನಾವು ವಾಪಸ್ಸು ಬರುವಾಗ ಕೊನೇ ಕ್ಷಣದಲ್ಲಿ ವಿಮಾನ ನಿಲ್ದಾಣದಲ್ಲಿ ಒಂದು ನಾಟಕೀಯ ಪ್ರಸಂಗ ನಡೆಯಿತು. ಅದೇನೆಂದರೆ: ಅನಂತಮೂರ್ತಿಯವರಿಗೆ ಮಾತ್ರ ವಿಮಾನದಲ್ಲಿ ಹೋಗಲು ವ್ಯವಸ್ಥೆ ಮಾಡಿದ್ದರು ಅಲ್ಲಿಯ ವ್ಯವಸ್ಥಾಪಕರು. ಮಿಕ್ಕವರೆಲ್ಲ ಬಸ್ಸಿನಲ್ಲಿ ಹೋಗುವುದಕ್ಕೆ ಟಿಕೆಟ್ಟು ಕೊಡಲು ಬಂದರು. ಅನಂತಮೂರ್ತಿಯವರು ಎಲ್ಲರಿಗೂ ವಿಮಾನದಲ್ಲಿ ಹೋಗಲು ವ್ಯವಸ್ಥೆ ಮಾಡಬೇಕು ಎಂದು ಉಗ್ರವಾಗಿ ಪ್ರತಿಭಟಿಸುತ್ತ ಸಂಘಟಕರೊಡನೆ ಕೂಗಾಡಲು ಶುರು ಮಾಡಿದರು. ಮುಖ್ಯವಾಗಿ ಕಾಂಗ್ರೆಸ್‌ನ ಹಿರಿಯ ನಾಯಕರಾದ ಕರುಣಾಕರನ್ ಅವರ ಮಗನ ಬಳಿ. ಸುಮಾರು ಎರಡು ಗಂಟೆಗೂ ಮೇಲ್ಪಟ್ಟು ವಾಗ್ವಾದ ನಡೆಯಿತು. ಅವರು ತಣ್ಣಗಾಗಿದ್ದು ಪತ್ರಿಕೆಯವರನ್ನು ಕರೆದು ವಿವರಿಸುವೆ ಎಂದಾಗ, ನಂತರ ಸಹಾರ ಏರ್‌ವೇಸ್‌ನಲ್ಲಿ ವ್ಯವಸ್ಥೆ ಮಾಡಿದರು. ಇದು ಜಿ.ಎಸ್.ಎಸ್. ಅವರಿಗೆ ತುಂಬ ಇಷ್ಟವಾಯಿತು. ಕೊನೆಗೆ ಅವರ ಕೈ ಕುಲುಕತ್ತ "ನಮಗಾಗಿ ಇಷ್ಟು ರಿಸ್ಕ್ ತಗೊಂಡ್ರಲ್ಲ" ಎಂದರು. ಅದಕ್ಕೆ ಅವರು "ಇಲ್ಲ ಸರ್, ಮೊದಲೇ ಎಲ್ಲ ನಿರ್ಧಾರವಾಗಿತ್ತು. ಎಲ್ಲ ಕಡೆಯಿಂದ ಬಂದವರನ್ನು ವಿಮಾನದಲ್ಲಿಯೇ ವಾಪಸ್ಸು ಕಳಿಸಬೇಕೆಂದು, ಇಷ್ಟಾದರೂ ನಿಮಗೆಲ್ಲ ಕಿರಿಕಿರಿಯಾಗಿದ್ದಕ್ಕೆ ಕ್ಷಮೆ ಕೇಳ್ತಿನಿ" ಎಂದು ಹೇಳುವ ಸಮಯಕ್ಕೆ, ಎಲ್ಲರನ್ನು ಕಳಿಸಿಕೊಡಲು ಬಂದಿದ್ದ ಅಲ್ಲಿಯ ಕೆಲವು ಯುವ ಲೇಖಕರು ನಮಸ್ಕರಿಸುತ್ತ ಕ್ಷಮಾಪಣೆ ಕೇಳಿದ್ದರು. ಅವರಿಗೆಲ್ಲ ಅನಂತಮೂರ್ತಿಯವರನ್ನು ಕಂಡರೆ ಎಲ್ಲಿಲ್ಲದ ಅಭಿಮಾನ. ಕೊನೆಗೂ ಬೆಂಗಳೂರು ತಲುಪಿದೆವು. ಜಿ.ಎಸ್.ಎಸ್. ಅವರು ವಿಮಾನದಲ್ಲಿ ಕಿಟಕಿಯ ಪಕ್ಕದಲ್ಲಿ ಕೂರುವುದನ್ನು ಮರೆಯಲಿಲ್ಲ. ಬಹುದೂರದವರೆವಿಗೂ ಆ ಕೇರಳದ ಹಸಿರಿನ ಸೊಬಗನ್ನು ತುಂಬಿಕೊಂಡಿದ್ದರು.

ಕೆಲವು ದಿವಸ ಅವರನ್ನು ಭೇಟಿಯಾದಾಗಲೆಲ್ಲ; ತಮಗೆ ಇಷ್ಟವಾದ ಲೇಖಕರನ್ನು ಕುರಿತು ಪ್ರಸ್ತಾಪಿಸುತ್ತಲೇ ಇದ್ದರು. ಅವರ ಸಹಜ ಗುಣವೆಂದರೆ;

ಬಹುದೊಡ್ಡ ಕವಿಯಾಗಿ, ಲೇಖಕರಾಗಿ, ಕಾವ್ಯ ಮೀಮಾಂಸೆಯ ಚಿಂತಕರಾಗಿ ಒಂಟಿತನವನ್ನು ಎಷ್ಟು ಪ್ರೀತಿಸುತ್ತಿದ್ದರೋ ಅಷ್ಟೇ ಎಲ್ಲರಲ್ಲೂ ಒಳಗೊಳ್ಳುವುದನ್ನು ಸಂಭ್ರಮಿಸುತ್ತಿದ್ದರು. ಈ ನೆಲೆಯಲ್ಲಿ ದಲಿತ ಸಂಘಟನೆಯ, ಬಂಡಾಯ ಸಂಘಟನೆಯ ಎಂತೆಂಥ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಭಾಗವಹಿಸುತ್ತಿದ್ದ ಯಾವುದೇ ಕಾರ್ಯಕ್ರಮದಲ್ಲಿ ಕೊನೆಯವರೆವಿಗೂ ಇದ್ದು; ಸಭಿಕರ ನಮಸ್ಕಾರವನ್ನು ಸಂಕೋಚದಿಂದ ಸ್ವೀಕರಿಸಿ ಹೊರಡುತ್ತಿದ್ದರು. ಶೂದ್ರದ ಮೂಲಕ ಅವರ ಹೆಸರಿನಲ್ಲಿ ಗೌರವ ಕಾವ್ಯ ಪ್ರಶಸ್ತಿಯನ್ನು ಕೊಡಲು ಪ್ರಾರಂಭಿಸಿದಾಗ; ಅದರ ಮೊದಲ ಪ್ರಶಸ್ತಿಯನ್ನು ಅತ್ಯಂತ ಪ್ರತಿಭಾವಂತ ಯುವ ಕವಿ ಎನ್.ಕೆ. ಹನುಮಂತಯ್ಯಗೆ ಪ್ರದಾನ ಮಾಡುತ್ತ ಎಷ್ಟು ಮಾರ್ಮಿಕವಾಗಿ ಮಾತಾಡಿದ್ದರು. ಹನುಮಂತಯ್ಯನಂತೂ ಹಿರಿಯ ರಾಜಕಾರಣಿ ಮತ್ತು ಸರ್ವೋದಯ ಚಿಂತಕರಾದ ಎಂ. ಚಂದ್ರಶೇಖರ್, ಶಿವಮೊಗ್ಗ ಸುಬ್ಬಣ್ಣ, ರಂಜಾನ್ ದರ್ಗಾ ಮತ್ತು ನರಸಿಂಹಲು ವಡವಾಟಿಯವರ ಸಮ್ಮುಖದಲ್ಲಿ ವೇದಿಕೆಯ ಮೇಲೆ ಜಿ.ಎಸ್.ಎಸ್. ಅವರಿಗೆ ಕಾಲಿಗೆ ಬಿದ್ದು ನಮಸ್ಕರಿಸುತ್ತ, ಭಾವುಕನಾಗಿ ಕಣ್ಣೀರು ಸುರಿಸಿದ್ದ. ಅದಕ್ಕೆ ಆತನ ಕೈಹಿಡಿದು ಮೇಲಕ್ಕೆತ್ತಿ "ನಿಮ್ಮಂಥವರು ಹೀಗೆ ಕಾಲಿಗೆ ಬೀಳಬಾರದು, ಹೀಗೆಯೇ ಚೆನ್ನಾಗಿ ಬರೆಯಲು ಪ್ರಯತ್ನಿಸಿ" ಎಂದು ಮೈದಡವಿದ್ದರು. ಮತ್ತು ಎಂದಾದರು ಮನೆಗೆ ಕರೆದುಕೊಂಡು ಬಾಪ್ಪ ಶೂದ್ರ ಎಂದು ಹೇಳಿದ್ದರು. ಅದಕ್ಕೂ ಹನುಮಂತಯ್ಯ ಪುಳಕಿತನಾಗಿದ್ದ. ಇದೇ ಹನುಮಂತಯ್ಯ ಜಿ.ಎಸ್.ಎಸ್. ಅವರು ನಿಧನರಾಗುವುದಕ್ಕೆ ಎರಡು ವರ್ಷ, ಮುನ್ನ ತೀರಿಕೊಂಡಿದ್ದಕ್ಕೆ ಎಷ್ಟು ನೊಂದು ನುಡಿದಿದ್ದರು.

ಅದೇ ಸಮಯದಲ್ಲಿ ಕವಿ ಇಕ್ಬಾಲರ ಭಾವಚಿತ್ರವನ್ನು ಅನಾವರಣ ಮಾಡಿದ್ದರು. ಜೊತೆಗೆ ಆ ಕವಿಯ 'ಸಾರಾ ಜಹಾನ್ ಸೆ ಅಚ್ಛಾ ಹಿಂದೂಸ್ತಾನ್ ಹಮಾರ' ಸ್ಮರಣೀಯ ಗೀತೆಯು ಜನಗಣಮನ ಸ್ಥಾನದಲ್ಲಿ ರಾಷ್ಟ್ರಗೀತೆಯಾಗಬೇಕಾಗಿತ್ತು ಎಂದು ಒಂದು ದೀರ್ಘ ಲೇಖನವನ್ನೇ 'ಸಲ್ಲಾಪ' ಎಂಬ ವಾರಪತ್ರಿಕೆಗೆ ಬರೆದುಕೊಟ್ಟಿದ್ದರು. ಮತ್ತೆ ಸಾಕಷ್ಟು ಲೇಖನಗಳನ್ನು ಬರೆದರು. ಕೇವಲ ಒಂದು ವರ್ಷ ಮಾತ್ರ ಆ ಟ್ಯಾಬಲಾಯ್ಡ್ ಪತ್ರಿಕೆಯನ್ನು ತರಲು ಸಾಧ್ಯವಾಗಿತ್ತು. ಅದರ ಪ್ರಕಟಣೆಯನ್ನು ನಿಲ್ಲಿಸಿದಾಗ; ಯಾಕೆ ತರಲು ಆಗುತ್ತಿಲ್ಲ ಎಂಬುದನ್ನು ವೇದನೆಯಿದ ಅವರ ಬಳಿ ತಿಳಿಸಿದೆ. ಹಾಗೆಯೇ ಇತ್ತೀಚಿನ ವರ್ಷಗಳಲ್ಲಿ ಅವರ ಹೆಸರಿನ ಗೌರವ ಕಾವ್ಯಪ್ರಶಸ್ತಿಯನ್ನು ಎಲ್.ಎನ್. ಮುಕುಂದರಾಜ್ ಮತ್ತು ಟಿ. ಯಲ್ಲಪ್ಪ ಅವರ ಕವನ ಸಂಕಲನಗಳಿಗೆ ಕೊಟ್ಟಾಗಲೂ

ಎನ್.ಕೆ. ಹನುಮಂತಯ್ಯನನ್ನು ಸ್ಮರಿಸಿಕೊಂಡೇ ಕಾವ್ಯಾನುಸಂಧಾನದ ಬಗ್ಗೆ ತಮ್ಮ ಅನಾರೋಗ್ಯದ ನಡುವೆಯೂ ದೀರ್ಘವಾಗಿ ಮಾತಾಡಿದ್ದರು. ಅಂದು ಅವರೊಡನೆ ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ ಮತ್ತು ಪ್ರೊ. ಸಿ.ಎನ್.ಆರ್. ಅವರೂ ಇದ್ದರು. ಅದೇ ಸಮಯದಲ್ಲಿ ಪ್ರೊ. ಮಲರ್‌ವಿಳಿಯವರು ಪರಿಚಯ ಮಾಡಿಕೊಂಡಾಗ; ಆಕೆಯ ತಲೆ ನೇವರಿಸಿ ವೈರಮುತ್ತು ಅವರ ಕವಿತೆಗಳನ್ನು ಎಷ್ಟು ಚೆನ್ನಾಗಿ ಅನುವಾದ ಮಾಡಿದ್ದೀರಿ ಎಂದು ಹೇಳಿದ್ದಕ್ಕೆ "ಸರ್, ಈ ಮಾತನ್ನು ಕೇಳಿಸಿಕೊಳ್ಳುವುದಕ್ಕೆ ನಾನು ಪುಣ್ಯವಂತಳು" ಎಂದು ಪ್ರೊ. ಜಿ.ಎಸ್.ಎಸ್. ಅವರ ಜೊತೆ ಭಾವಚಿತ್ರಕ್ಕೆ ನಿಂತಿದ್ದರು.

ಕೆಲವು ವರ್ಷಗಳ ಹಿಂದೆ ಮಾಜಿ ಶಿಕ್ಷಣ ಸಚಿವರಾಗಿದ್ದ ಎಂ. ಚಂದ್ರಶೇಖರ್ ಅವರ ಮನೆಯಲ್ಲಿ ಒಂದು ಸಭೆಯನ್ನು ಕರೆದಿದ್ದರು. ಅದರ ಅಧ್ಯಕ್ಷತೆಯನ್ನು ಜಿ.ಎಸ್.ಎಸ್. ಅವರು ವಹಿಸಿದ್ದರು. ಅಂದು ಜಿ. ನಾರಾಯಣ, ಡಾ. ಚಿದಾನಂದಮೂರ್ತಿ, ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸರಾವ್, ಪ್ರೊ. ದಾಸೇಗೌಡ, ಪ್ರೊ. ಎಂ.ಎಚ್. ಕೃಷ್ಣಯ್ಯ, ತೀ.ನಂ. ಶಂಕರನಾರಾಯಣ (ತೀ.ನಂ.ಶ್ರೀಯವರ ಮಗ), ಜಗದೀಶ್‌ರೆಡ್ಡಿ ಮುಂತಾದವರೆಲ್ಲ ಸೇರಿದ್ದೆವು. ಅಲ್ಲಿ ಮುಖ್ಯವಾಗಿ ಪ್ರಸ್ತಾಪವಾಗಿದ್ದು; ಬಿ.ಟಿ.ಎಂ. ಬಡಾವಣೆಗೆ ಕುವೆಂಪು ಅವರ ಹೆಸರನ್ನಿಡುವುದು ಮತ್ತು ಜಯನಗರ ಸೌತ್‌ಎಂಡ್ ವೃತ್ತದ ಬಳಿ ತೀ.ನಂ.ಶ್ರೀಯವರ ಪ್ರತಿಮೆಯನ್ನು ಅನಾವರಣಗೊಳಿಸುವುದು. ಇದಕ್ಕೆ ಜಿ.ಎಸ್.ಎಸ್. ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು. ಅದೇ ಸಮಯದಲ್ಲಿ "ನೋಡಪ್ಪ ಶೂದ್ರ, ಜಿ. ನಾರಾಯಣ ಅವರು ಮತ್ತು ಎಂ. ಚಂದ್ರಶೇಖರ್ ಅವರು ಕೇಳುತ್ತಿದ್ದಾರೆ. ಶ್ರೀಮತಿ ಕಡಿದಾಳ್ ಮಂಜಪ್ಪ ಅವರನ್ನು ಕುರಿತು ಒಂದೆರಡು ಪುಟ ಬರೆದು ಕೊಡು. ಹೇಗಿದ್ದರೂ ಅವರ ಕುಟುಂಬ ಪರಿಚಯವಿದೆಯಲ್ಲ" ಎಂದಾಗ ಸಂತೋಷವಾಗಿ ಬರೆದುಕೊಟ್ಟಿದ್ದೆ ರಾಜ್ಯೋತ್ಸವ ಪ್ರಶಸ್ತಿಗೆ. ಅದಕ್ಕೆ ಅವರ ಸಹಿಯನ್ನು ಪಡೆದಿದ್ದೆ. ಎಂ. ಚಂದ್ರಶೇಖರ್ ಮತ್ತು ಜಿ. ನಾರಾಯಣ ಅವರಿಗೆ ಜಿ.ಎಸ್.ಎಸ್. ಅವರನ್ನು ಕಂಡರೆ ಗೌರವ ಮತ್ತು ಅಭಿಮಾನ. 'ರಾಮಾಯಣ ದರ್ಶನ'ದ ಗಮಕ ಕಾರ್ಯಕ್ರಮಕ್ಕೆ ಎರಡು ಮೂರು ಬಾರಿ ಕರೆದುಕೊಂಡು ಹೋಗಿದ್ದರು. ಶಾಸ್ತ್ರೀಯ ಸಂಗೀತವನ್ನು ಕೇಳಿದಷ್ಟೆ ಖುಷಿ ಪಟ್ಟಿದ್ದೆ. ಅದರಲ್ಲೂ ಕುವೆಂಪು ಅವರಿಗೆ ಸಂಬಂಧಿಸಿದಂತೆ ಎಷ್ಟು ಕಾರ್ಯಕ್ರಮಗಳನ್ನು ರೂಪಿಸಿದರೂ ಅತೃಪ್ತಿಯೆಂಬುದನ್ನು ತುಂಬಿಕೊಂಡೇ ಇದ್ದರು. ಹಾಗೆ ನೋಡಿದರೆ ಕುವೆಂಪು ಅವರ ಹೆಸರನ್ನು ಎಂದೂ ದುರುಪಯೋಗ ಪಡಿಸಿಕೊಂಡವರಲ್ಲ. ಅನಗತ್ಯವಾಗಿ

ಯಾರ ಬಗ್ಗೆಯೂ ಭಟ್ಟಂಗಿತನವನ್ನು ಬಿಟ್ಟುಕೊಂಡವರಲ್ಲ. ಈ ದೃಷ್ಟಿಯಿಂದ ಕುವೆಂಪು ಅವರ ಹೆಸರನ್ನು ದುರುಪಯೋಗ ಪಡಿಸಿಕೊಂಡಾಗ; ವಿಷಾದದಿಂದ "ಏನಪ್ಪ ಅವರು ಹೀಗೆ ವ್ಯವಹರಿಸುತ್ತಾರೆ" ಎಂದು ಸಂಕಟಪಡುತ್ತಿದ್ದರು. ಹಾಗೆಯೇ ಜಾತಿ ಮೀರಿದ ದೊಡ್ಡ ಕವಿಯನ್ನ, ದಾರ್ಶನಿಕ ವ್ಯಕ್ತಿತ್ವವನ್ನು ಜಾತಿಯೊಳಗೆ ಸಿಕ್ಕಿಸಿ ಅವರ ಆತ್ಮವನ್ನು ನರಳಿಸುತ್ತಾರೆ ಎಂಬ ವಿಷಾದವನ್ನು ಬಹಳಷ್ಟು ವ್ಯಕ್ತಪಡಿಸಿದ್ದಾರೆ.

ಈ ಚೌಕಟ್ಟಿನಲ್ಲಿ ಒಂದು ಅಪರೂಪದ ಸಂವಾದವನ್ನು ಇಲ್ಲಿ ದಾಖಲಿಸುವುದು ಸೂಕ್ತ ಅನ್ನಿಸುತ್ತದೆ. ಕೇಂದ್ರ ಸಾಹಿತ್ಯ ಅಕಾಡೆಮಿಗೆ ಕಥೆಗಾರ ಮತ್ತು ಚಲನಚಿತ್ರ ನಿರ್ದೇಶಕ ಕೃಷ್ಣ ಮಾಸಡಿಯವರು ಒಂದು ಸಾಕ್ಷ್ಯಚಿತ್ರವನ್ನು ತಂದರು. ಅದಕ್ಕೆ ಸಂಬಂಧಿಸಿದಂತೆ ಇಡೀ ದಿವಸ ಪ್ರೊ. ಜಿ.ಎಸ್.ಎಸ್. ಅವರ ಮನೆಯಲ್ಲಿ ಯು.ಆರ್. ಅನಂತಮೂರ್ತಿ, ಹೆಚ್.ಎಸ್. ರಾಘವೇಂದ್ರರಾವ್, ಕೆ. ಮರುಳಸಿದ್ದಪ್ಪ ಮತ್ತು ಕ್ರಿಯಾಶೀಲ ನಿರ್ದೇಶಕ ಚೈತನ್ಯ ಅವರೆಲ್ಲ ಸೇರಿದ್ದೆವು. ನಮ್ಮ ನಮ್ಮ ಅಭಿಪ್ರಾಯಗಳನ್ನು ದಾಖಲಿಸುವುದರ ಜೊತೆಗೆ, ಜಿ.ಎಸ್.ಎಸ್. ಅವರಂಥ ಮೇರು ವ್ಯಕ್ತಿತ್ವವನ್ನು ನಾವು ಹೇಗೆ ಗ್ರಹಿಸಿದೆವು ಎಂಬುದನ್ನು ಹೇಳಬೇಕಾಗಿತ್ತು. ಇದರ ಜೊತೆಗೆ ಜಿ.ಎಸ್.ಎಸ್. ಮತ್ತು ಅನಂತಮೂರ್ತಿಯವರ ಮಾತುಕತೆಯು ಎಷ್ಟು ಮಾರ್ಮಿಕವಾಗಿತ್ತು ಅನ್ನಿಸುತ್ತದೆ. ಯಾಕೆಂದರೆ ಇಬ್ಬರೂ ಮೈಸೂರಿನ ಸಾಂಸ್ಕೃತಿಕ ವಾತಾವರಣವನ್ನು ಹತ್ತಿರದಿಂದ ಬಲ್ಲವರು. ಅಲ್ಲಿ ಕುವೆಂಪು ಅವರು ಬೆಳೆದು ಬಂದ ವಾತಾವರಣ ಹಾಗೂ ಅವರ ಸುತ್ತಲೂ ಆದ ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಪಲ್ಲಟಗಳನ್ನು ಕುರಿತಂತೆ ಒಂದು ಮುಕ್ತವಾದ ಮಾತುಕತೆ ಅಲ್ಲಿ ತೆರೆದುಕೊಂಡಿತ್ತು. ಎಲ್ಲಿಯೂ ವೈಯಕ್ತಿಕ ಆರೋಪವಿರಲಿಲ್ಲ. ತಾವು ಸಮೃದ್ಧಿಯಾಗಿ ಪಡೆದ ಸಾಹಿತ್ಯ ಸಂಪತ್ತಿನ ಬಗ್ಗೆ ಒಂದು ಆಪ್ತ ಅವಲೋಕನವು ಮುಖಾಮುಖಿಯಾಗಿತ್ತು. ಇಬ್ಬರೂ ಕೆಲವು ವಿಷಯಗಳಲ್ಲಿ ಸಮಾನ ಮನಸ್ಕರಾಗಿದ್ದರಿಂದ ಹಾಗೂ ಭಿನ್ನಾಭಿಪ್ರಾಯಗಳನ್ನು ಸಮತೋಲನದಿಂದ ಸಂವಾದದೊಳಗೆ ಬಿಟ್ಟುಕೊಳ್ಳುವಂಥವರಾಗಿದ್ದರು. ಈ ದೃಷ್ಟಿಯಿಂದ ಕುವೆಂಪು ಡಿ.ಎಲ್.ಎನ್., ತೀ.ನಂ.ಶ್ರೀ., ತ.ಸು. ಶಾಮರಾಯರು, ಸಿ.ಡಿ.ಎನ್. ಮುಂತಾದವರೆಲ್ಲ ತಮ್ಮ ತಮ್ಮ ವ್ಯಕ್ತಿತ್ವವನ್ನು ಅತ್ಯಂತ ಘನತೆಯಿಂದ ಸಾಬೀತು ಪಡಿಸಿ ಹೋದವರಂತೆ; ತಮ್ಮ ಮಾತುಕತೆಯ ಲಯಕ್ಕೆ ತಂದುಕೊಂಡಿದ್ದರು. ಯಾವುದೇ ವಿಧದ ಹಮ್ಮುಬಿಮ್ಮು ಇಲ್ಲದ ಸಂವಾದ. ಜೊತೆಗೆ ಪಕ್ಕದಲ್ಲಿ ಕೂತು ಕೇಳಿಸಿಕೊಳ್ಳುತ್ತಿದ್ದ ನಮ್ಮಂಥವರಿಗೆ; ಆ ಕಾಲಘಟ್ಟದಲ್ಲಿ ನಡೆದುಹೋದ ಸ್ಥಿತ್ಯಂತರಗಳನ್ನು ಕುರಿತು

ಅಧ್ಯಯನ ಮಾಡಬಾರದೇಕೆ ಅಥವಾ ಬೇರೆಯವರಿಂದ ಇಲ್ಲಿಯ ಮಾಹಿತಿಯನ್ನೇ ಕೊಟ್ಟು ಯಾಕೆ ಮಾಡಿಸಬಾರದು ಎನ್ನುವ ಮಟ್ಟಿಗೆ ನಮ್ಮ ಮನಸ್ಸನ್ನು ಸೆಳೆದುಕೊಂಡಿತ್ತು. ಹೀಗೆ ತೆರೆದ ಮನಸ್ಸಿನಲ್ಲಿ ನಡೆಯುತ್ತಿದ್ದ ಮಾತುಕತೆಯಲ್ಲಿ ಜಿ.ಎಸ್.ಎಸ್. ಅವರು ಬೆಂಗಳೂರಿಗೆ ಬಂದು ಕನ್ನಡ ವಿಭಾಗವನ್ನು ಕಟ್ಟುವ ಸಮಯದಲ್ಲಿ ಆದ ಅನುಭವ ಹಾಗೂ ಸಾಹಿತ್ಯ ಅಕಾಡೆಮಿಯಲ್ಲಿ ಮೂರು ವರ್ಷ ಅತ್ಯಂತ ಚೇತೋಹಾರಿಯಾಗಿ ನಡೆದು ಹೋದ ಕಾರ್ಯಕ್ರಮಗಳನ್ನು ಸಿಂಹಾವಲೋಕನ ಮಾಡಿಕೊಳ್ಳುವಾಗ; ಅನಂತಮೂರ್ತಿಯವರು ತಾವು ನ್ಯಾಷನಲ್ ಬುಕ್ ಟ್ರಸ್ಟ್‌ನಲ್ಲಿದ್ದಾಗ, ಕೊಟ್ಟಾಯಂನಲ್ಲಿ ಗಾಂಧಿ ವಿಶ್ವವಿದ್ಯಾಲಯದಲ್ಲಿದ್ದಾಗ ಹಮ್ಮಿಕೊಂಡ ಕಾರ್ಯಕ್ರಮಗಳು ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಯಂಥ ಸಂಸ್ಥೆಯಲ್ಲಿದ್ದಾಗ ನಡೆಸಿದ ಕಾರ್ಯಕ್ರಮಗಳ ಅನುಭವದ ಊರ್ಣ ನಮಗೆ ಧಕ್ಕಿತ್ತು. ಇದೇ ಸಮಯದಲ್ಲಿ ಕೇರಳದ ಕೊಚ್ಚಿನ್ ಬಳಿಯ ಆಳ್ವೆಯಲ್ಲಿ ನಡೆದ ಸಾಹಿತ್ಯ ಸಮಾವೇಶದ ಶ್ರೀಮಂತಿಕೆಯನ್ನು ಕುರಿತು ಮಾತು ಧ್ವನಿಪೂರ್ಣವಾಗಿ ಬಂದು ಹೋಯಿತು. ಕೊನೆಗೆ ಆ ಮಾತುಕತೆಗೆ ಸಮಾರೋಪ ಎಂಬಂತೆ ಭರ್ಜರಿ ಊಟ ಬೇರೆ. ಊಟದ ಮಧ್ಯೆಯೂ ಒಂದು ಸಂವಾದದ ಗೋಷ್ಠಿ ಬಂದು ಹೋಗಿತ್ತು. ಚೈತನ್ಯ ಅವರ ಕಾರಣಕ್ಕಾಗಿ ಕೆಲವು ಸ್ಮರಣೀಯ ಚಿತ್ರಗಳೂ ಬಂದು ಹೋದುವು. ಮುಖ್ಯವಾಗಿ ಸತ್ಯಜಿತ್ ರಾಯ್ ಅವರ ಚಿತ್ರಗಳು. ಅದರಲ್ಲೂ ಅವರ ಜಲಸಾಗರ್, ಋತ್ವಿಕ್ ಘಟಕ್ ಅವರ 'ಮೇಘ ಡಾಕಾ ತಾರಾ'. ಹಾಗೆ ನೋಡಿದರೆ ಮೊದಲನೆಯ ಬಾರಿಗೆ ರೇ ಯವರನ್ನು ಪರಿಚಯ ಮಾಡಿಕೊಳ್ಳುವ ಮತ್ತು ಮುಂದೆ ಮತ್ತೆ ಮತ್ತೆ ನೋಡಿ ಅವಲೋಕಿಸಿಕೊಳ್ಳುವ ಮನಸ್ಥಿತಿಯನ್ನು ತಂದುಕೊಟ್ಟವರು. ಡಾ. ಕೆ.ಎಂ.ಎಸ್. ಅವರು. ಅವರು ಬೆಂಗಳೂರಿನ ಮಹಾತ್ಮಗಾಂಧಿ ರಸ್ತೆಯ ಫ್ಲಾಜಾ ಚಿತ್ರಮಂದಿರದಲ್ಲಿ ನಡೆದ 'ರೆ ಫಿಲಂ ಫೆಸ್ಟಿವಲ್'ಗೆ ಸೀಸನ್ ಟಿಕೆಟ್ ತೆಗೆದುಕೊಟ್ಟಿದ್ದರು. ಕೆಲವು ಚಿತ್ರಗಳನ್ನು ಜಿ.ಎಸ್.ಎಸ್. ಅವರ ಜೊತೆ ನೋಡುವ ಅವಕಾಶವೂ ದೊರಕಿತ್ತು. ಈ ನೆಲೆಯಲ್ಲಿ ನನ್ನ ವ್ಯಕ್ತಿತ್ವಕ್ಕೆ 'ಟರ್ನಿಂಗ್ ಪಾಯಿಂಟ್' ಆದ ಚಿತ್ರಗಳು. ಈ ಕಾರಣಕ್ಕಾಗಿ ಕೆ.ಎಂ.ಎಸ್. ಅವರನ್ನು ಮರೆಯಲು ಸಾಧ್ಯವೇ ಇಲ್ಲ. ಹಾಗೆಯೇ ರಾಜಕೀಯ ಸೂಕ್ಷ್ಮತೆಗಳನ್ನು ವಿಸ್ತರಿಸಿದರು.

ಈ ಫೆಸ್ಟಿವಲ್ ಸಮಯದಲ್ಲಿಯೇ ಕೆಲವು ಮಾರ್ಮಿಕವಾದ 'ಷಾರ್ಟ್ ಫಿಲಮ್ಸ್' ನೋಡಿದ್ದೆವು. ಸುಮಾರು ನೂರು ಚಿತ್ರಗಳಿಗೂ ಮೇಲ್ಪಟ್ಟು , ಅದರಲ್ಲೂ ಓಬೆರಾನ್ಸ್‌ನ ಚಿತ್ರಗಳಂತೂ ನಮ್ಮ ಬದುಕಿನುದ್ದಕ್ಕೂ ನೆನಪು

ಮಾಡಿಕೊಳ್ಳುವಂಥವು. ಅವರ ಸಮ್ಮುಖದಲ್ಲಿ ಚಡಚಣದಲ್ಲಿ ಬೀರಬಲ್ಲನ ಎರಡು ಕಥೆಗಳನ್ನು ತೆಗೆದುಕೊಂಡು ಅಕ್ಬರನ ವ್ಯಕ್ತಿತ್ವವನ್ನು ಕುರಿತು ಮಾತಾಡುವ ಸಮಯದಲ್ಲಿ ಓಬೆರಾನ್ಸ್‌ನ ಒಂದೂವರೆ ನಿಮಿಷದ 'ಸ್ಲೇವರಿ' ಚಿತ್ರವನ್ನು ಕುರಿತು ಪ್ರಸ್ತಾಪಿಸಿದ್ದೆ. ಅದಕ್ಕೆ ಅವರು "ಅಯ್ಯೋ ಶೂದ್ರ ನಾನು ಮರೆತೇ ಹೋಗಿದ್ದೆ. ಆ ಚಿತ್ರವನ್ನು ಮತ್ತೆ ನೆನಪು ಮಾಡಿಸಿದ್ದಕ್ಕೆ ಧನ್ಯವಾದಗಳು" ಎಂದಿದ್ದರು. ಘಟಕ್ ಅವರ 'ಮೇಘ ಡಾಕಾ ತಾರಾ' ಚಿತ್ರವಂತೂ ತುಂಬ ಡಿಸ್ಟರ್ಬ್ ಮಾಡಿತ್ತು. ಹಾಗೆಯೇ ೨೦೧೧ರಲ್ಲಿ ಕಲ್ಕತ್ತೆಯಲ್ಲಿ ಮಹಾಶ್ವೇತದೇವಿಯವರನ್ನು ನೋಡಲು ಹೋದಾಗ, ಘಟಕ್ ವಿಷಯ ಪ್ರಸ್ತಾಪಿಸಿದಾಗ; ತಮ್ಮ ಅನಾರೋಗ್ಯದ ನಡುವೆಯೂ ಆಕೆ "ಅವರೊಬ್ಬ ನನ್ನ ಪ್ರೀತಿಯ ಚಿಕ್ಕಪ್ಪ. ಅದಕ್ಕೂ ಮೀರಿದ ಜೀನಿಯಸ್ಸು ಆಗಿದ್ದ. ಈಗಲೂ ನಾನು 'ಮೇಘ ಡಾಕಾ ತಾರಾ'ವನ್ನು ಒಂದು ಬದುಕಿನ ಮಹಾಕಾವ್ಯವೆಂದೇ ನೋಡುವೆ" ಎಂದಿದ್ದರು. ಜಿ.ಎಸ್.ಎಸ್. ಅವರು ಘಟಕ್ ಮಹಾಶ್ವೇತದೇವಿಯವರ ಚಿಕ್ಕಪ್ಪ ಎಂದು ತಿಳಿದು ಎಷ್ಟು ಪುಳಕಗೊಂಡಿದ್ದರು. ಈಗಲೂ ಬಹಳಷ್ಟು ಇಷ್ಟವಾದ ವಿಷಯಗಳಿಗೆ ಸಂಬಂಧಿಸಿ 'ಹೌದೇನಪ್ಪ' ಎಂದು ದನಿಗೂಡಿಸುತ್ತಿದ್ದರು. ಅದು ಎಂಥ ಆಪ್ತವಾದ ಧ್ವನಿ.

ಹೀಗೆಯೇ ಒಮ್ಮೆ ರವೀಂದ್ರನಾಥ ಟ್ಯಾಗೂರರ 'ತಪೋವನ' ಲೇಖನವನ್ನು ಎಷ್ಟು ಬಾರಿ ಓದಿಕೊಂಡರೂ ಸಾಲದು. ಒಂದೊಂದು ಓದು ಯಾವುದೋ ಭಾವಲೋಕಕ್ಕೆ ಕರೆದೊಯ್ಯುವುದು ಎಂದು ಹೇಳಿದಾಗ; "ಅದರ ಬಗ್ಗೆಯೇ ಏಳೆಂಟು ಮಂದಿ ಕೈಯಲ್ಲಿ ಲೇಖನ ಬರೆಸಿ ಒಂದು ಕೃತಿಯನ್ನು ಸಂಪಾದಿಸಲು ಪ್ರಯತ್ನಿಸು ಎಂದಿದ್ದರು. ಸಾಧ್ಯವಾದರೆ ಇಂಥಿಂಥವರ ಕೈಯಲ್ಲಿ ಬರೆಸಲು ಪ್ರಯತ್ನಿಸು" ಎಂದಿದ್ದರು. ಆಗ "ಸರ್, ನಿಮ್ಮ ರೀತಿಯಲ್ಲಿಯೇ ಅನಂತಮೂರ್ತಿಯವರೂ ಹೇಳಿದ್ದಾರೆ. ಅವರು ಕೇವಲ 'ತಪೋವನ' ಮಾತ್ರವಲ್ಲ; 'ಗಾಂಧೀಜಿ, ರಾಜಾರಾಮ್ ಮೋಹನರಾಯ್ ಮತ್ತೆ ಬುದ್ಧನ ಕುರಿತ ಲೇಖನಗಳ ಬಗ್ಗೆಯೂ ಒಂದು ಪ್ರತಿಕ್ರಿಯೆ ಎಂದು ಒಂದಷ್ಟು ಮಂದಿ ಕೈಯಲ್ಲಿ ಬರೆಸು, ಬೇಕಾದರೆ ನಾನೂ ಬರೆಯುತ್ತೇನೆ" ಎಂದಿದ್ದಾರೆ ಎಂದೆ. ಜಿ.ಎಸ್.ಎಸ್. ಅದಕ್ಕೆ ಸಾಕಷ್ಟು ಖುಷಿಪಟ್ಟಿದ್ದರು. ಹಾಗೆ ನೋಡಿದರೆ; ರವೀಂದ್ರನಾಥ ಟ್ಯಾಗೂರರು ತಮ್ಮ ಎಂಬತ್ತನೆಯ ಹುಟ್ಟು ಹಬ್ಬದ ದಿವಸ ಶಾಂತಿನಿಕೇತನದಲ್ಲಿ ಒಂದು ಉಪನ್ಯಾಸವನ್ನು ಕೊಡ್ತಾರೆ. ಅದು 'ಕಲ್ಚರಲ್ ಕ್ರೈಸೀಸ್' ಎಂಬ ವಿಷಯ ಕುರಿತು. ಅದೇ ಅವರ ಕೊನೆಯ ಉಪನ್ಯಾಸ. ಎಷ್ಟೊಂದು ಚಾರಿತ್ರಿಕ ಸಂಗತಿಗಳನ್ನು ಅವಲೋಕನಕ್ಕೆ ಒಳಪಡಿಸಿಕೊಳ್ತಾರೆ. ಇದರ ಬಗ್ಗೆಯೂ

ಹೃದಯ ಮತ್ತು ಮನಸ್ಸು ತೆರೆದು ಕೂರುತ್ತಿದ್ದರು. ಕೊನೆ ಕೊನೆಯಲ್ಲಂತೂ ಎಡಭಾಗದ ಕಿವಿ ಸರಿಯಾಗಿ ಕೇಳಿಸುವುದಿಲ್ಲವೆಂದು ಬಲಗಡೆಯ ಭಾಗದಲ್ಲಿ ಹತ್ತಿರದಲ್ಲೆ ಕೂರಿಸಿಕೊಂಡು ಮಾತುಕತೆಗೆ ತೊಡಗುತ್ತಿದ್ದರು. ಆಗಲೂ ಅವರ ಕೈಯಲ್ಲಿ ಪುಸ್ತಕ ಮತ್ತು ಪೆನ್ನು ಇರಲೇಬೇಕು. ಅಷ್ಟು ಹೃದಯವಂತಿಕೆಯ ಬಹುದೊಡ್ಡ ಲೇಖಕರು.

ಇಂಥವರ ಬಳಿಯೂ ತುಂಬ ತೀವ್ರವಾಗಿ ಕಿತ್ತಾಡಿದ್ದೇನೆ. ಒಮ್ಮೆ ಒಂದು ದೀರ್ಘವಾದ ಪತ್ರವನ್ನು ಬರೆದೆ. ಕೆಲವು ಆಕ್ಷೇಪಣೆಗಳನ್ನೆತ್ತಿ, ಆದರೆ ಅದನ್ನು ಪೂರ್ತಿ ಮರೆತೇ ಹೋದವರಂತೆ ನನ್ನನ್ನು ನೋಡಿಕೊಂಡರು. ಅದು ಅವರ ಬಹು ದೊಡ್ಡ ಗುಣವಾಗಿತ್ತು. ನಾನೇ ಬರೆದು ಸಂಕೋಚದಿಂದ ನರಳುತ್ತಿರುವಾಗ; ಅದನ್ನು ನಿಜವಾಗಿಯೂ ಕಿತ್ತಾಕಿದರು. ಇದೇ ಸಮಯದಲ್ಲಿ ನಾನು ಶೂದ್ರದಲ್ಲಿ ಲಂಕೇಶ್ ಅವರಿಗೆ ಬರೆದ ಒಂದು ಬಹಿರಂಗ ಪತ್ರವನ್ನು ಪ್ರಕಟಿಸಿದ್ದೆ. ಆ ಪತ್ರದಲ್ಲಿ "ನೀವು ಗಾಂಧೀಜಿ, ಹಿಟ್ಲರ್ ಮತ್ತು ಸ್ಟ್ಯಾಲಿನ್ ಮೂರು ವ್ಯಕ್ತಿತ್ವಗಳನ್ನು ಏಕಕಾಲದಲ್ಲಿ ಅನುಭವಿಸುತ್ತ ಬದುಕುತ್ತೀರಿ" ಹೀಗೆ ಇನ್ನು ಏನೇನೋ ಬರೆದಿದ್ದೆ. ಒಮ್ಮೆ ಜಿ.ಎಸ್.ಎಸ್. ಅವರು ಸಿಕ್ಕಿದಾಗ "ಏನಪ್ಪ ಶೂದ್ರ, ಆ ಪತ್ರ ಬರೆದ ಮೇಲೂ ನೀವೂ ಲಂಕೇಶ್ ಅವರು ಎಷ್ಟು ಆರಾಮವಾಗಿ ಒಟ್ಟೊಟ್ಟಿಗೆ ಓಡಾಡಿಕೊಂಡಿದ್ದೀರಿ" ಎಂದು ಖುಷಿಯಿಂದ ಹೇಳಿದ್ದರು. ಅದಕ್ಕೆ ಏನನ್ನು ಹೇಳಲಾಗದೆ ಮೌನಿಯಾಗಿ ಬಿಟ್ಟಿದ್ದೆ. ಯಾಕೆಂದರೆ ಆ ಪತ್ರದ ಸ್ವಾರಸ್ಯ ಬೇರೊಂದು ರೂಪದಲ್ಲಿಯೂ ಮುಂದುವರೆದಿತ್ತು. ಇರಲಿ, ಸ್ವಲ್ಪ ಹೆಚ್ಚು ಕಮ್ಮಿ ಇದೇ ಕಾಲಘಟ್ಟದಲ್ಲಿ ಜಿ.ಎಸ್.ಎಸ್. ಅವರಿಂದ ಬಹುಮುಖ್ಯ ಮಾತೊಂದನ್ನು ಕೇಳಿಸಿಕೊಂಡೆ. ಅವರ ಜೊತೆಯಲ್ಲಿ ಬೆಂಗಳೂರಿನ ಕಾರ್ಪೋರೇಷನ್ ಬಳಿ ಇರುವ ಬಾದಾಮಿ ಹೌಸ್‌ನಲ್ಲಿ ಒಂದು ಚಲನಚಿತ್ರ ನೋಡಲು ಹೋಗಿದ್ದೆ. ಅಂದು ಚೆನ್ನವೀರ ಕಣವಿಯವರೂ ಬಂದಿದ್ದರು. ಚಲನಚಿತ್ರವನ್ನು ನೋಡಿ ಹೊರಗೆ ಬಂದಾಗ; ಜಿ.ಎಸ್.ಎಸ್. ಮತ್ತು ಕಣವಿಯವರೂ ಒಂದು ಅಮೂಲ್ಯ ಮಾತು ಹೇಳಿದರು; ಅದೇನೆಂದರೆ: "ನೋಡಪ್ಪ, ಸಾಧ್ಯವಾದರೆ; ಶೂದ್ರದಲ್ಲಿ ಒಂದಷ್ಟು ಸಾಹಿತ್ಯಕ್ಕೂ ಜಾಗವಿರಲಿ. ಇತ್ತೀಚೆಗೆ ಅದು ಹೆಚ್ಚಾಗಿ ರಾಜಕೀಯ ಸಿದ್ಧಾಂತದ ಪತ್ರಿಕೆಯಾಗಿ ಬಿಟ್ಟಿದೆ" ಎಂದು ಹೇಳಿದಾಗ; ನಾನು ನಾಚಿಕೆಯಿಂದ ಒದ್ದಾಡಿಬಿಟ್ಟಿದ್ದೆ. ಅವರಿಗೆ ಸುತ್ತಿ ಬಳಸಿ ಸಬೂಬು ಹೇಳಲು ಹೋಗಲಿಲ್ಲ. "ಕ್ಷಮಿಸಿ, ಸರ್" ಇಷ್ಟನ್ನು ಹೇಳಿ ಗಂಭೀರ ಸಾಹಿತ್ಯ ಪತ್ರಿಕೆಯನ್ನಾಗಿಯೇ ಬದಲಾಯಿಸಿದ್ದೆ. ಒಂದು ದೃಷ್ಟಿಯಿಂದ 'ಕನಸಿಗೊಂದು ಕಣ್ಣು' ಅಂಕಣ

ಹುಟ್ಟಿಕೊಂಡಿದ್ದೂ ಕೂಡ ಆ ಮಾತಿನ ನಂತರವೇ. ಇದನ್ನು ಅಂದು ಸಂಜೆ ಲಂಕೇಶ್ ಅವರನ್ನು ಭೇಟಿಯಾದಾಗ ಹೇಳಿದೆ; ಅವರು ಸಂತೋಷ ಪಟ್ಟಿದ್ದರು.

ಅವರ ಸಿಟ್ಟು ಮತ್ತು ಅಸಮಾಧಾನ ಕೆಲವು ಕ್ಷಣಕ್ಕೆ ಮಾತ್ರ ಸೀಮಿತಗೊಂಡಿರುತ್ತಿತ್ತು. ಅತ್ಯಂತ ಶಿಸ್ತಿನ ಮತ್ತು ಸಮಯ ಪರಿಪಾಲನೆಯವರಾಗಿದ್ದರಿಂದ ಸ್ವಲ್ಪ ತಡವಾದರೂ ಬೇಸರ ಮಾಡಿಕೊಳ್ಳುತ್ತಿದ್ದರು. ಈ ದೃಷ್ಟಿಯಿಂದ ಭೇಟಿಯಾಗುವ ಸಮಯ ಬಂದಾಗಲೆಲ್ಲ ಕಾಲವನ್ನು ಗಣನೆಗೆ ತೆಗೆದುಕೊಂಡೇ ಭೇಟಿಯಾಗಿದ್ದೇನೆ. ಇರಲಿ, ಈ ಕಾಲವನ್ನು ಪಕ್ಕಕ್ಕೆ ಸರಿಸಿ ಅವರ ಸಮಾಧಾನ ಚಿತ್ತದ ಬಗ್ಗೆ ಒಂದು ಘಟನೆಯನ್ನು ಹೇಳುವುದು ಸೂಕ್ತ ಅನ್ನಿಸುತ್ತದೆ. ನಾವು ವಿದ್ಯಾರ್ಥಿಗಳಾಗಿದ್ದಾಗ; ಮೂರು ವರ್ಷದ ಆನರ್ಸ್ ವಿದ್ಯಾರ್ಥಿಗಳು ಹಾಗೂ ಎಂ.ಎ. ವಿದ್ಯಾರ್ಥಿಗಳು ಒಟ್ಟಿಗೆ ಸೆಮಿನಾರ್‌ಗಾಗಿ ಭಾಗವಹಿಸುತ್ತಿದ್ದೆವು. ತುಂಬ ಚರ್ಚೆ ಮತ್ತು ವಾಗ್ವಾದಗಳು ನಡೆಯುತ್ತಿದ್ದ ಕಾಲವದು. ಅದರಲ್ಲೂ ನವ್ಯ ಮತ್ತು ನವೋದಯದ ಎರಡು ಮನಸ್ಸುಗಳು ಏಕಕಾಲಕ್ಕೆ ಮುಖಾಮುಖಿಯಾಗುತ್ತಿದ್ದ ದಿನಗಳವು. ಕಿ.ರಂ. ನಾಗರಾಜ ಅವರು ಆಗ ತಾನೇ ಬಸವನಗುಡಿಯ ನ್ಯಾಷನಲ್ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದರು. ಒಂದು ದೃಷ್ಟಿಯಿಂದ ಇಲ್ಲಿಯ ಕನ್ನಡ ವಿಭಾಗದಿಂದ ಹೋದವರೆ. ಒಂದು ವಾರ ಅವರು ಅಡಿಗರ 'ವರ್ದಮಾನ' ಕವಿತೆಯ ಬಗ್ಗೆ ಮಾತಾಡಲು ಬಂದರು. ಅದು ಪ್ರಜಾವಾಣಿಯ ಭಾನುವಾರದ ಸಂಚಿಕೆಯಲ್ಲಿ ಪ್ರಕಟವಾಗಿತ್ತು. ಕಿ.ರಂ. ಅವರಿಗೆ ಕಾವ್ಯಕ್ಕೆ ಸಂಬಂಧಿಸಿದಂತೆ ಮಾತಾಡಬೇಕೆಂದರೆ; ವಿವಿಧ ಮುಖಗಳು ತೆರೆದುಕೊಂಡು ಬಿಡುತ್ತಿದ್ದವು. ಕಿ.ರಂ. ಅವರು ಮಾಮೂಲಿ ಸಂಭ್ರಮದಿಂದಲೇ ಮಾತಾಡಿದರು. ಆದರೆ ಚರ್ಚೆಯ ಸಂದರ್ಭ ಬಂದಾಗ; ಪ್ರೊ. ಜಿ.ಎಸ್.ಎಸ್. ಅವರು ಕಿ.ರಂ. ಅವರಿಗೆ ನಿಮಗಿಂತ ಆ ಕವಿತೆಗೆ ಚಿತ್ರ ಬಿಡಿಸಿರುವ ರಾಮಮೂರ್ತಿಯವರು ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆಂದರು. ಅವರು ಹಾಗೆ ಹೇಳುವ ಅಗತ್ಯವಿರಲಿಲ್ಲ. ರಾಮಮೂರ್ತಿಯವರು ನಿಜವಾಗಿಯೂ ಪ್ರತಿಭಾವಂತ ವ್ಯಂಗ್ಯಚಿತ್ರಕಾರರಾಗಿದ್ದರು. ಆ ಕಾಲಕ್ಕೆ ಪ್ರಜಾವಾಣಿಯ ಎಲ್ಲ ಸಾಪ್ತಾಹಿಕ ಕವಿತೆಗಳಿಗೆ ಅವರೇ ಚಿತ್ರ ಬಿಡಿಸುತ್ತಿದ್ದುದು. ಕಿ.ರಂ. ಅವರ ಕೋಪ ತುತ್ತತುದಿಗೆ ಹೋಗಿತ್ತು. ಎಲ್ಲರೂ ಪೆಚ್ಚಾಗಿ ಕೂತಿದ್ದರು. ಕಿ.ರಂ. ಅವರು ಕೂಗಾಡುತ್ತ ಹೊರಗೆ ಹೊರಟುಬಿಟ್ಟರು. ಆಗ ಜಿ.ಎಸ್.ಎಸ್. ಅವರೇ ಸಮಾಧಾನ ಮಾಡಿ ಒಳಗೆ ಕರೆದರು. ಪ್ರೊ. ರಂ.ಶ್ರೀ ಮುಗಳಿಯವರು ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದರು. "ನನ್ನ ಮಾತಿನಿಂದ ನಿಮಗೆ ನೋವಾಗಿದ್ದರೆ, ಕ್ಷಮೆಯನ್ನು ಕೇಳುತ್ತೇನೆ" ಎಂದಾಗ; ಚರ್ಚೆ ಮುಂದುವರಿಯಲಿಲ್ಲ. ಎಲ್ಲರೂ

ಹೊರಗೆ ಬಂದರು. ಕಿ.ರಂ. ಅವರನ್ನು ಕೆ.ಎಂ.ಎಸ್. ಅವರು ತಮ್ಮ ಕೊಠಡಿಗೆ ಕರೆದುಕೊಂಡು ಹೋಗಿ ಕಾಫೀ ತರಿಸಿ ಮಾತುಕತೆಯಲ್ಲಿ ತೊಡಗಿದ್ದಾಗ; ಅಲ್ಲಿಗೆ ಲಂಕೇಶ್ ಅವರು ಬಂದರು. ಆ ಕಾಲಕ್ಕೆ ಮರುಳಸಿದ್ದಪ್ಪ ಅವರ ಕೊಠಡಿ 'ಕಲ್ಚರಲ್ ಸೆಂಟರ್' ಆಗಿತ್ತು. ಲಂಕೇಶ್ ಅವರಂತೂ ತರಗತಿ ಮುಗಿಸಿ ಇಲ್ಲಿಗೆ ಬಂದು ಬಿಡುತ್ತಿದ್ದರು. ಕಿ.ರಂ. ಅವರಿಗೂ ಲಂಕೇಶ್ ಅವರನ್ನು ಕಂಡರೆ ಎಲ್ಲಿಲ್ಲದ ಅಭಿಮಾನ. ಅದೇ ಸಮಯಕ್ಕೆ ಲಂಕೇಶ್ ಅವರು 'ಅಕ್ಷರ ಹೊಸಕಾವ್ಯ' ತರಲು ಸಿದ್ಧತೆ ನಡೆಸಿದ್ದರು.

ಕಿ.ರಂ. ಅವರಿಗೆ ಆಂತರಿಕವಾಗಿ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗವನ್ನು ಬಿಟ್ಟು ಹೋಗುವಂತಿರಲಿಲ್ಲ. ಆದರೆ ಅವರಲ್ಲಿ ನವೋದಯ ಕಾವ್ಯದ ವಿರೋಧಿ; ಆದ್ದರಿಂದಲೇ ತಮ್ಮನ್ನು ಉಳಿಸಿಕೊಳ್ಳಲಿಲ್ಲ ಎಂಬ ಮನಸ್ಥಿತಿ ಗಾಢವಾಗಿ ಬೇರೂರಿಬಿಟ್ಟಿತ್ತು. ಮುಂದೆ ಮುಗಳಿಯವರು ನಿವೃತ್ತರಾದ ಮೇಲೆ ಪ್ರೊ. ಜಿ.ಎಸ್.ಎಸ್. ಅವರು ಮುಖ್ಯಸ್ಥರಾದಾಗ ಕಿ.ರಂ. ಅವರನ್ನು ಕನ್ನಡ ವಿಭಾಗಕ್ಕೆ ಬರಮಾಡಿಕೊಂಡರು. ಕನ್ನಡ ವಿಭಾಗದ ವಿಚಾರ ಸಂಕಿರಣಗಳು ಉತ್ತುಂಗತೆಯ ಘಟ್ಟವನ್ನು ಮುಟ್ಟಿದ ಕಾಲವದು. ಈ ದೃಷ್ಟಿಯಿಂದ ಜಿ.ಎಸ್.ಎಸ್. ಅವರು ಎಷ್ಟು ಪ್ರಬುದ್ಧ ಮನಸ್ಸಿನವರೋ ಅಷ್ಟೇ ಮುಗ್ಧರೂ ಆಗಿದ್ದರು. ನಾಟಕೀಯವಾಗಿ ಮುಖಗಳನ್ನು ನೋಡಿ ನಯವಾಗಿ ಮಾತಾಡಲು ಪ್ರಯತ್ನಿಸಿದವರಲ್ಲ. ಹೌದಪ್ಪಗಳನ್ನು ಕಂಡರೆ ಮುಜುಗರದಿಂದ ಒದ್ದಾಡುತ್ತಿದ್ದರು. ಹೀಗೆ ಗುಣಾತ್ಮಕ ವ್ಯಕ್ತಿತ್ವವನ್ನು ಕೊನೆಯವರೆವಿಗೂ ಉಳಿಸಿಕೊಂಡಿದ್ದರು. ಆದ್ದರಿಂದಲೇ ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ವಿಶ್ವವಿದ್ಯಾಲಯಗಳ ಇತರೆ ವಿಭಾಗಗಳ ಮುಖ್ಯಸ್ಥರು ಅವರೊಡನೆ ಅಗೌರವದಿಂದ ವರ್ತಿಸುತ್ತಿರಲಿಲ್ಲ. ಅವರಿದ್ದೆಡೆ ಸ್ವಾಭಾವಿಕವಾಗಿಯೇ ಗಂಭೀರತೆ ಎಂಬುದು ಆವರಿಸಿಕೊಂಡು ಬಿಡುತ್ತಿತ್ತು. ಅವರಿಗೆ ನೃಪತುಂಗ ಪ್ರಶಸ್ತಿಯನ್ನು ಕರ್ನಾಟಕದ ಸಾರಿಗೆ ಇಲಾಖೆಯಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ ಕೊಡುವಾಗ; ತೀರ್ಪುಗಾರರಾಗಿದ್ದವರು ಪ್ರೊ. ಎಂ.ಎಚ್. ಕೃಷ್ಣಯ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿದ್ದ ಚಂದ್ರಕಾಂತರಾಜ ಅರಸ್ ಹಾಗೂ ನಾನು. ಇದನ್ನು ನಲ್ಲೂರು ಪ್ರಸಾದ್ ಅವರು ವ್ಯವಸ್ಥೆ ಮಾಡಿದ್ದರು. ಎಲ್ಲರೂ ಅವರ ಘನತೆ ಮತ್ತು ಕೊಡುಗೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮತ್ತೊಂದು ಹೆಸರನ್ನು ಯೋಚಿಸಲು ಹೋಗಲಿಲ್ಲ.

ಅವರಿಗೆ ಯಾವಾಗಲೂ ಕೈತುಂಬ ಕೆಲಸವಿರಬೇಕು. ಹೀಗೆ ಕೆಲಸದಿಂದ ಓದು ಮತ್ತು ಬರವಣಿಗೆಗೆ ತೊಂದರೆಯಾಗುತ್ತದೆಂದು ಎಂದೂ ತಿಳಿದವರಲ್ಲ. ಎಲ್ಲವೂ ಅಚ್ಚುಕಟ್ಟಾಗಿ ಆಗಬೇಕು. ಸದಾ ನಗುತ್ತ ಹೇಳುತ್ತಿದ್ದರು. ಅದರದರ ಕೆಲಸವನ್ನು ಅದಕ್ಕೆ ಕೊಟ್ಟರೆ ಮುಗಿಯಿತು. ನೆಮ್ಮದಿಯಿಂದ ಇರಬಹುದು ಎಂಬುದು ಮೂಲಮಂತ್ರವಾಗಿತ್ತು. ತಮ್ಮ ಪುಸ್ತಕಗಳ ಮುದ್ರಣದ ವಿಷಯದಲ್ಲಿ ಎಷ್ಟು ನಿಗಾ ವಹಿಸುತ್ತಿದ್ದರು. ಹಾಗೆಯೇ ಸಾಹಿತ್ಯ ಅಕಾಡೆಮಿಯಲ್ಲಿದ್ದಾಗ; ಅಲ್ಲಿಯ ಕೃತಿಗಳ ಪ್ರಕಟಣೆಯ ವಿಷಯದಲ್ಲಿಯೂ ಅಷ್ಟೆ; ಜವಾಬ್ದಾರಿಯನ್ನು ಬೇರೆಯವರ ಮೇಲೆ ಹಾಕಿ ಆರಾಮವಾಗಿರಲು ಬಯಸಿದವರಲ್ಲ. ಎಷ್ಟೋ ವರ್ಷ ಉಳಿದು ಹತ್ತಾರು ಮನಸ್ಸುಗಳಿಗೆ ನೆಮ್ಮದಿಯನ್ನು ಕೊಡಬೇಕು. ಹೋಗುವಾಗ ದೋಷ ಮುಕ್ತವಾಗಿರಬೇಕು ಎಂದು ನಂಬಿದ್ದರು.

ಈ ಶ್ರದ್ಧೆ, ಶಿಸ್ತು ಅವರ ಹೆಸರಿನ ವಿಸ್ವಸ್ತ ಮಂಡಲಿಗೂ ತಂದುಕೊಡಲು ಪ್ರಯತ್ನಿಸಿದರು. ಕಳೆದ ಆರೇಳು ವರ್ಷಗಳಿಂದ ಆ 'ಡಾ॥ ಜಿಎಸ್ಸೆಸ್ ವಿಸ್ವಸ್ತ ಮಂಡಲಿ(ರಿ)'ಯ ಸದಸ್ಯನಾಗಿ ಕಾರ್ಯದರ್ಶಿಯಾಗಿ ಮತ್ತೆ ಅವರ ಕಾರ್ಯವೈಖರಿಯ ಲವಲವಿಕೆಯನ್ನು ಹತ್ತಿರದಿಂದ ನೋಡಲು ಸಾಧ್ಯವಾಯಿತು. ಆ ಮಂಡಲಿಯಿಂದ ಕಳೆದ ಒಂದೂವರೆ ದಶಕದಿಂದ ಪ್ರತಿಷ್ಠಿತ ವಿಮರ್ಶಕರಿಗೆಲ್ಲ ಪ್ರಶಸ್ತಿ ದೊರಕುತ್ತ ಬಂದಿದೆ. ಈ ಪ್ರಶಸ್ತಿಯನ್ನು 'ಅತ್ಯಂತ ಗೌರವ'ದ ಪ್ರಶಸ್ತಿ ಎಂದು ಸ್ವೀಕರಿಸುತ್ತಾರೆ. ಆಯ್ಕೆ ಮಾಡುವಾಗ ಯಾವುದೇ ಹೆಸರನ್ನು ವಿಸ್ವಸ್ತ ಮಂಡಲಿಯ ಸದಸ್ಯರ ಮೇಲೆ ಒತ್ತಡವನ್ನು ತರುತ್ತಿರಲಿಲ್ಲ. ಆದರೆ ಮೀಟಿಂಗಿನ ಪ್ರೊಸೆಂಡಿಂಗ್ಸನ್ನ ಅವರೇ ಬರೆಯುತ್ತಿದ್ದರು. ಮತ್ತೊಂದು ಮುಖ್ಯ ವಿಷಯವೆಂದರೆ ಪ್ರಶಸ್ತಿ ಕಾರ್ಯಕ್ರಮದ ಆಹ್ವಾನ ಪತ್ರಿಕೆಯನ್ನ ವಿಳಾಸ ಬರೆದು ಅವರೇ ಕಳಿಸುತ್ತಿದ್ದರು. ಕೆಲಸದ ಬಗ್ಗೆ ಅಷ್ಟು ತಾದಾತ್ಮ್ಯವನ್ನು ತುಂಬಿಕೊಂಡಿದ್ದರು.

ಇಷ್ಟೆಲ್ಲ ಹೃದಯ ವೈಶಾಲ್ಯತೆ, ಜೀವನ ಪ್ರೀತಿ ಮತ್ತು 'ಎಲ್ಲವೂ ಸರಿ ಇರಬೇಕು, ಎಲ್ಲರೂ ಸರಿಯಾಗಬೇಕು' ಎಂಬ ಕನಸುಗಳನ್ನು ತುಂಬಿಕೊಂಡಿದ್ದವರು; ಕೊನೆಯ ದಿನಗಳಲ್ಲಿ ಎಷ್ಟೊಂದು ಒದ್ದಾಡಿದರು. ಸದಾ ನಗುಮುಖದ, ಲವಲವಿಕೆಯ ಜಿ.ಎಸ್.ಎಸ್. ಅವರು ಇವರೇನಾ ಎನ್ನುವ ಮಟ್ಟಿಗೆ ಮುಖಚರ್ಯೆ ಬದಲಾದದ್ದನ್ನು ಕಂಡು ಒದ್ದಾಡಿದ್ದೆ. ಆಸ್ಪತ್ರೆಯಲ್ಲಿ ಶ್ರೀಮತಿ ರುದ್ರಾಣಿ ಮೇಡಂ ಅವರು "ಶೂದ್ರ ಅವರು ಬಂದಿದ್ದಾರೆ. ನೋಡಿ, ಮಾತಾಡಿ" ಎಂದಾಗ ಕಣ್ಣು ತೆರೆಯಲು, ತುಟಿ ಬಿಚ್ಚಲು ಪ್ರಯತ್ನಿಸುತ್ತಿದ್ದರು. ಆದರೂ ಆಗುತ್ತಿರಲಿಲ್ಲ. ಆಗ ಹೊರಗೆ ಬರಲಾಗದ ಶಬ್ದಗಳು ಒಳಗೆ ಹೇಗೆ ವಿಲವಿಲನೆ ಒದ್ದಾಡಿರಬಹುದು.

ಕೊನೆಗೂ ಅವರ 'ವಿಲ್‌ಪವರ್'ನಿಂದ ಅಷ್ಟು ದಿವಸ ಶ್ರೀಮಂತವಾಗಿ ಬದುಕಿದರು. ಶ್ರೀಮಂತವಾದದ್ದನ್ನೇ ನೂರಾರು ಕಾಲ ಇರುವಂತೆ ಬಿಟ್ಟು ಹೋದರು. ಕೊನೆಗೆ ಅವರನ್ನು ನೋಡಲು ಜನಸ್ತೋಮ ಎಲ್ಲೆಲ್ಲಿಂದಲೋ ಬಂದರು. ಎದೆತುಂಬಿ ದರ್ಶನ ಭಾಗ್ಯ ಪಡೆದು ಹೋಗಲು.

# ಜಿ.ಎಸ್.ಎಸ್. ಅವರ ಕಾವ್ಯಾನುಸಂಧಾನ

ಜಿ.ಎಸ್.ಎಸ್. ಅವರು ತಮ್ಮ ದೀರ್ಘಕಾಲದ ಬದುಕಿನಲ್ಲಿ ಆರುದಶಕಗಳಿಗೂ ಮೇಲ್ಪಟ್ಟು ಕಾವ್ಯರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಹೀಗೆ ತೊಡಗಿಸಿಕೊಳ್ಳುತ್ತಲೇ ಜೀವನದ ವಿವಿಧ ಆಯಾಮಗಳನ್ನು ಗ್ರಹಿಸುತ್ತ ಹೋದರು. ಅದರಲ್ಲಿ ಸಂಭ್ರಮ ಪಟ್ಟರು. ನೋಡುವ ಪ್ರಕ್ರಿಯೆಗೆ ಅರ್ಥವ್ಯಾಪ್ತತೆಯನ್ನು ಎಂದೂ ಮೊಟಕುಗೊಳ್ಳಸಿಕೊಳ್ಳಲಿಲ್ಲ. ಯಾಕೆಂದರೆ ಇದು ಪ್ರತಿಕ್ರಿಯೆಯಾದ್ದರಿಂದ; ಸೃಷ್ಟಿಯ ಸೂಕ್ಷ್ಮತೆಗಳ ಗ್ರಹಿಕೆಗಳಿಗೆ ಸಾಣೆಯಾಗುತ್ತಲೇ ಹೋದರು. ಆದ್ದರಿಂದಲೇ ಅದರ ನಿರಂತರತೆಯಿಂದ ಹಿಂದೆ ಸರಿಯಲಿಲ್ಲ. ಹಾಗೆ ಇದ್ದುದರಿಂದಲೇ ಅವರಿಗೆ 'ನವನವ ಉನ್ಮೇಷ ಹಾಗೂ ನವನವ ಉಲ್ಲೇಖ' ಎರಡೂ ಕಾವ್ಯರಚನಾ ವಿಧಾನಕ್ಕೆ ಚೈತನ್ಯಪೂರಕವಾಗಲು ಸಾಧ್ಯವಾಯಿತು. ಆದ್ದರಿಂದಲೇ ರಚನೆಯ ಹಾದಿಗೆ 'ಉನ್ಮೇಷ'ವೆಂಬುದು ದೀವಿಗೆಯಾಗುತ್ತಲೇ ಹೋಯಿತು. ಅದರಲ್ಲೂ ತಮ್ಮ ಕೃಷಿಯಲ್ಲಿ ಶ್ರೀಮಂತವಾಗಿದ್ದರು. ನವೋದಯದ ಸಾಹಿತ್ಯ ಪ್ರಕಾರ ಕಾವ್ಯಕ್ಕೆ ಪೋಷಕವಾಗುವ ರೀತಿಯಲ್ಲಿ ಸಮೃದ್ಧವಾಗಿ ಬೆಳೆಯುತ್ತಿದ್ದ ಸಮಯವದು. ಅದೇ ಸಮಯಕ್ಕೆ ಅದರ ಪ್ರಯೋಗಶೀಲತೆಯನ್ನು ಪ್ರಶ್ನಿಸುವಂತೆ; ನವ್ಯ ಸಾಹಿತ್ಯ ತನ್ನ ನೆಲೆಯನ್ನು ಭದ್ರಪಡಿಸಿಕೊಳ್ಳುತ್ತಿತ್ತು. ಅದೇನೆ ಆಗಿರಲಿ ಜಿ.ಎಸ್.ಎಸ್.ಅವರು ತಮ್ಮ ಕಾವ್ಯಮಾರ್ಗವನ್ನು ಎಂದೂ ದುರ್ಬಲಗೊಳಿಸಿಕೊಳ್ಳಲು ಪ್ರಯತ್ನಿಸಲಿಲ್ಲ. ಅನುಭವದ ಹುಡುಕಾಟವನ್ನು ಸೃಜನಶೀಲ ಪ್ರಕ್ರಿಯೆಯಲ್ಲಿಯೇ ಅವಲೋಕಿಸುವ ಸೂಕ್ಷ್ಮತೆ ಗಾಢವಾಗಿತ್ತು. ಜೊತೆಗೆ ಯಾವುದೇ ಸೃಷ್ಟಿ ಎಂಬುದಕ್ಕೆ ಅನುಭವದ ವಿಪುಲತೆಯು ಎಷ್ಟು ಮುಖ್ಯವೋ; ಅದನ್ನು ಕಲಾತ್ಮಕಗೊಳಿಸುವಂಥ ಸಮಯದಲ್ಲಿ ದಟ್ಟವಾದ ತಾಳ್ಮೆಯಂತೂ ಬೇಕು. ಇಲ್ಲದಿದ್ದರೆ, ಒಟ್ಟು ಜೀವನದ ನೋಟ ಜಾಳು ಜಾಳಾಗಿ ಹೋಗಿಬಿಡುವ ಸಾಧ್ಯತೆ ಇದೆ. ಇದು ಜಿ.ಎಸ್.ಎಸ್. ಅವರಲ್ಲಿ ಗಾಢವಾಗಿತ್ತು ಎಂಬುದಕ್ಕೆ ಅವರ ಕಾವ್ಯ ರಚನಾಕ್ರಮದಲ್ಲಿ ತೋರಿಸುತ್ತ ಹೋದ ಶ್ರದ್ಧೆ ಮತ್ತು ನಿಷ್ಠೆಯು ಅಭೂತಪೂರ್ವವಾದದ್ದು. ಇದಕ್ಕೆ ಮುಖ್ಯ ಕಾರಣ: ಹಿಂದೆ ಪ್ರಸ್ತಾಪಿಸಿದ ಕುವೆಂಪು ಮತ್ತು ಪು.ತಿ.ನ. ಅಂಥವರ ವ್ಯಕ್ತಿತ್ವದಿಂದ ಪ್ರಭಾವಿತರಾದವರು. ಅನುಭವ ಹಾಗೂ ವಿಚಾರಶೀಲತೆಯನ್ನು ಸದಾ ಮನನ ಮಾಡಿಕೊಳ್ಳುತ್ತಲೇ; ನುಡಿಗಳ ಸೃಷ್ಟಿಗೆ ಮುಂದಾಗುತ್ತಿದ್ದರು.

ಅವರೊಳಗೆ ಒಬ್ಬ ಗಟ್ಟಿಯಾದ ವಿಮರ್ಶಕ ಕೂಡ ಮೇಳಯಿಸಿಕೊಂಡಿದ್ದರು. ಮತ್ತೊಂದು ಮುಖ್ಯ ವಿಷಯ: ಅವರು ಎಷ್ಟು ಮುಖ್ಯವಾಗಿ ಕಾವ್ಯಾನುಸಂಧಾನದ ಹುಡುಕಾಟದಲ್ಲಿ ತೊಡಗಿದ್ದರೋ; ಅದನ್ನು ಯಾವಾಗಲೂ ವಿದ್ಯಾರ್ಥಿಗಳ

ಮುಂದೆ ವ್ಯಾಖ್ಯಾನಿಸುವ ಬಹುಮುಖ್ಯ ಪ್ರಾಧ್ಯಾಪಕರೂ ಕೂಡ ಆಗಿದ್ದರು. ಆಗ ತಮ್ಮನ್ನು ನೋಡಿಕೊಳ್ಳುವ ದಟ್ಟವಾದ ಒಳಗಣ್ಣು ನಿರಂತರ ಜೀವಂತವಾಗಿರಬೇಕಾಗುತ್ತದೆ. ಅವರೇ ಹೇಳುತ್ತಿದ್ದಂತೆ ಹಾಗೂ ಇತರೆ ಕುವೆಂಪು ಅವರ ವಿದ್ಯಾರ್ಥಿಗಳು ಹೇಳುತ್ತಿದ್ದಂತೆ ಒಳನೋಟ ತಮಗೆ ಅನ್ವಯಿಸಿಕೊಂಡೇ ಜೀವನಾನುಭವ, ಹಾಗೂ ಕಾವ್ಯಾನುಭವಕ್ಕೆ ಆಕಾರ ಕೊಡುತ್ತಿದ್ದರು ಎಂಬುದು ಮಹತ್ವಪೂರ್ಣವಾದದ್ದು. ಸಾಹಿತ್ಯ ಮತ್ತು ಕಲೆಯ ಅಭಿರುಚಿಯು ಹತ್ತು ದಿಕ್ಕು ಹರಿಯುವುದು ಹೀಗೆಯೇ ಆಗಿರುತ್ತದೆ. ಇದಕ್ಕೆ ಅನ್ವಯಸಿ ಜಿ.ಎಸ್.ಎಸ್. ಅವರಲ್ಲಿದ್ದ ತುಡಿತ ಅಗಾಧವಾದದ್ದು. ಅದೇ ಸಮಯಕ್ಕೆ ಅದು ಓತಪ್ರೋತವಾಗಿ ಒಂದೇ ಸಮನೇ ಹರಿದು ಹೋಗಲು ಬಿಡಲಿಲ್ಲ. ಹಾಗೆ ಬಿಟ್ಟರೆ ಒಟ್ಟು ಕಾವ್ಯ ಕ್ಲೀಷೆಯಾಗುವ ಸಾಧ್ಯತೆ ಇರುತ್ತದೆಂದು ಪ್ರಾಮಾಣಿಕವಾಗಿ ನಂಬಿದ್ದರು. ಹೀಗೆ ಇದ್ದುದರಿಂದಲೇ ಏಳುನೂರಕ್ಕೂ ಮೇಲ್ಪಟ್ಟು ಕವಿತೆಗಳು ಅವರಿಂದ ಸೃಷ್ಟಿಯಾಗಲು ವೇದಿಕೆ ನಿರ್ಮಾಣವಾಗಿದ್ದು. ಮತ್ತೊಂದು ಮುಖ್ಯವಿಷಯ: ಅವರ ಬಹಳಷ್ಟು ಕವಿತೆಗಳು ಹಾಡಿಗೆ ತೆರೆದುಕೊಳ್ಳುತ್ತಿದ್ದುದರಿಂದ; ಆ ಧ್ವನಿಯ ನಾದಮಯತೆಯ ಲೋಲುಪತೆಗೆ ಮನಸೋಲಲಿಲ್ಲ. ಅದರ ಮಿತಿಗಳನ್ನು ಬಲ್ಲವರಾಗಿದ್ದರು. ಸೃಜನಶೀಲತೆಯ ಸೂಕ್ಷ್ಮತೆಗಳನ್ನು ಅದು ಹೇಗೆ ಬಲಿ ತೆಗೆದುಕೊಳ್ಳುತ್ತದೆಂಬುದನ್ನು ಅರಿತಿದ್ದರು. ಎಷ್ಟೋ ಬಾರಿ ರಾಮಚಂದ್ರ ಶರ್ಮ, ಡಿ.ಆರ್.ಅಂಥವರು ಲಂಕೇಶ್ ಅಂಥವರ ಮುಂದೆ ಪ್ರಸ್ತಾಪಿಸಿದ್ದೂ ಉಂಟು ''ಈ ಸುಗಮ ಸಂಗೀತಗಾರರ ಮಧ್ಯೆ ಜಿ. ಎಸ್. ಶಿವರುದ್ರಪ್ಪ ಅಂಥವರು ಹೇಗಿರುತ್ತಾರೆ?'' ಎಂದು. ''ಇರಲಿ ಬಿಡಿ, ಅವರ ವ್ಯಾಮೋಹಗಳಿಗೆಲ್ಲ ನಾವ್ಯಾಕೆ ಅಡ್ಡಿಯಾಗುತ್ತ ಹೋಗಬೇಕು'' ಎಂದಿದ್ದರು. ಎಷ್ಟೋ ಬಾರಿ ನಾವೇ ಜಿ. ಎಸ್. ಎಸ್. ಅವರನ್ನು ಕೇಳಿದಾಗ; ''ಅಯ್ಯೋ ಬಿಡಿಯಪ್ಪ ಅದರ ಪಾಡಿಗೆ ಅದು ಇರುತ್ತದೆ. ಅದೇ ಕಾವ್ಯವನ್ನು ಮುಂದುವರೆಸುವಂಥದ್ದು ಎಂದು ನಾನು ತಿಳಿದಿಲ್ಲ'' ಎಂದುಬಿಟ್ಟಿದ್ದರು.

ಅವರು 'ಕಾವ್ಯಾನುಸಂಧಾನ'ದಲ್ಲಿ ತಮ್ಮನ್ನು ಎಷ್ಟು ತೀವ್ರವಾಗಿ ತೊಡಗಿಸಿಕೊಂಡಿದ್ದರೋ; ಅಷ್ಟೇ ಅದರ ಅನುಸಂಧಾನವನ್ನು ಬೇರೆಯವರಿಗೂ ತಲುಪಿಸುತ್ತ ಅಭಿರುಚಿಯ ಮನಸ್ಸುಗಳನ್ನು ಬೆಳೆಸುವ ಕ್ರಿಯೆಯಲ್ಲಿ ಸಮುದಾಯದೊಡನೆ ಹೆಚ್ಚು ಹೆಚ್ಚು ಬೆರೆಯುತ್ತಿದ್ದವರು. ಅದು ಕೇವಲ ವಿದ್ಯಾರ್ಥಿಗಳ ನಡುವೆ ಮಾತ್ರವಲ್ಲ. ಸೃಜನಶೀಲತೆಯ ಗುಣಾತ್ಮಕತೆ ಕುಗ್ಗಿಹೋಗದಂತೆ ಸದಾ ಎಚ್ಚರವಹಿಸುವುದರ ಜೊತೆಗೆ; ಅತ್ಯುತ್ತಮ ಓದು ನಮ್ಮನ್ನು ಕಾಪಾಡುತ್ತದೆ ಎಂದು ತಿಳಿದಿದ್ದರು. ಹಾಗೆಯೇ ಉತ್ತಮ ಕವಿತೆಯ ಓದಿನಿಂದ ಎಂದೂ ವಂಚಿತರಾದವರಲ್ಲ. ಕವಿತೆಯ ಓದಿನ ಏಕಾಂತತೆ ಮತ್ತು ಅದರ ಗ್ರಹಿಕೆಗಳು ಆ ಯಾವ ಯಾವ ರೂಪದ್ದು ಎಂಬ ಎಚ್ಚರಿಕೆಯ ಬಗ್ಗೆ ವಂಚಿತರಾದವರಲ್ಲ.

ಎಷ್ಟಾದರೂ ದೊಡ್ಡವರ ಸಮಾಗಮದಲ್ಲಿ ಬೆಳೆಯುತ್ತಲೇ ನಂತರದ ತಲೆಮಾರಿನ ಪ್ರತಿಭಾವಂತರ ಮಾತಿಗೆ ಯಾವಾಗಲೂ ತಲೆಬಾಗುವಂತವರಾಗಿದ್ದರು. ಈ ದೃಷ್ಟಿಯಿಂದ ತಮ್ಮ ವಿದ್ಯಾರ್ಥಿಗಳೇ ಆದ ಕೆ. ವಿ. ನಾರಾಯಣ, ಹೆಚ್. ಎಸ್. ರಾಘವೇಂದ್ರ ರಾವ್, ಡಿ.ಆರ್. ನಾಗರಾಜ್ ಮುಂತಾದವರ ಧ್ವನಿಯನ್ನು ಕೇಳಿಸಿಕೊಳ್ಳುತ್ತಿದ್ದರು; ಅಷ್ಟೇ ಅಲ್ಲ ಅದನ್ನು ಸಲಹಾ ರೂಪದಲ್ಲಿ ಪಡೆಯುತ್ತಿದ್ದರು. ಹೀಗೆ ನೋಡಿಕೊಳ್ಳುವಲ್ಲಿ ತಮ್ಮ ದೊಡ್ಡಸ್ಥಿಕೆಯನ್ನು ತೋರಿಸಿದವರಲ್ಲ. ಇದನ್ನು ಈಗಾಗಲೇ ಸಾಕಷ್ಟುಬಾರಿ 'ಅರಿವಿನ ಬಾಗಿಲುಗಳನ್ನು ತೆರೆದವರು' ಭಾಗದಲ್ಲಿ ಪ್ರಸ್ತಾಪಿಸಿರುವುದರಿಂದ ಮತ್ತೆ ವಿಸ್ತರಿಸಿದರೆ ಕ್ಲೀಷೆಯಾಗಬಹುದು. ಆದರೆ ಇಷ್ಟಂತೂ ಸತ್ಯ; ಜಿ.ಎಸ್.ಎಸ್. ಹೇಳುವಂತೆ: "ಕೃತಿ ನಿರ್ಮಾಣ ಎನ್ನುವುದು ಮೊದಲು ಸ್ಫೂರ್ತಿಯಲ್ಲಿ ಹೊಳೆದು ಆಮೇಲೆ ಭಾಷೆಯಲ್ಲಿ ಮೈದೋರುವ ಕ್ರಿಯೆ ಅಲ್ಲ; ಅದು ಬರೆಯುತ್ತಾ ಹೋದಂತೆ ತೆರೆಯುತ್ತ ಹೋಗುವ ಒಂದು ಚಟುವಟಿಕೆ. ಮೊಟ್ಟಮೊದಲ ಹೊಳೆ ಹರಿದಂತೆ ಅದರ ರೀತಿ. ಮೊಟ್ಟಮೊದಲ ಹೊಳೆ ತಾನು ಹರಿಯುತ್ತಲೇ ತನ್ನ ಪಾತ್ರವನ್ನು ನಿರ್ಮಿಸಿಕೊಂಡಂತೆ, ಸ್ಫೂರ್ತಿ ಹರಿಯುತ್ತಲೇ ತನ್ನ ರಚನೆಯ ಪಾತ್ರವನ್ನು ರೂಪಿಸುತ್ತ ಹೋಗಬಹುದು. ಕೃತಿ ನಿರ್ಮಾಣ ಮುಗಿದ ಮೇಲೆ ಅದರ ರಚನೆ ಕವಿಗೇ ಬೆರಗನ್ನು ತರಬಹುದು. ಆದ್ದರಿಂದ ಕೃತಿ ಮುಗಿದ ನಂತರವೇ ಕವಿಗೆ ಅದರ ಆಕೃತಿ ಗೋಚರವಾಗುವುದು. ಆದರೆ ಇಷ್ಟು ಮಾತ್ರ ನಿಜ: ಕವಿ ತನ್ನ ಮೂಲಾನುಭವವನ್ನು ತನ್ನ ಅಭಿವ್ಯಕ್ತಿಯೊಂದಿಗೆ ಹೋಲಿಸಿಕೊಂಡಾಗ ತನ್ನ ಉಜ್ವಲವಾದ ಅನುಭವದ ಎದುರಿಗೆ ತನ್ನ ಅಭಿವ್ಯಕ್ತಿ ತೀರ ಸಪ್ಪೆಯಾಗಿ ತೋರಬಹುದು; ತನ್ನ ಅನುಭವ ಎಷ್ಟೊಂದು ಉಜ್ವಲವಾಗಿತ್ತು, ಆದರೆ ಅದನ್ನೆಲ್ಲ ಹಿಡಿದಿಡಲು ಆಗಿಲ್ಲವಲ್ಲ ಎಂದು ಅನ್ನಿಸಬಹುದು." ಇದಕ್ಕೆ ಪ್ರಮಾಣವೆಂಬಂತೆ ಜಿ.ಎಸ್.ಎಸ್. ಅವರೇ ಷೆಲ್ಲಿ ಕವಿಯ ಮಾತನ್ನು ಉಲ್ಲೇಖಿಸುತ್ತಾರೆ: "ಜಗತ್ತಿನ ಅತ್ಯುತ್ತಮ ಕಾವ್ಯ ಎಂದು ಯಾವುದನ್ನು ಕರೆಯುತ್ತೇವೋ ಅದು ಕೂಡ ಬಹುಶಃ ಕವಿಯ ಮೂಲಾನುಭವದ ದುರ್ಬಲ ಛಾಯೆ ಮಾತ್ರ" ಎಂದು.

ಹೀಗೆ ಗಂಭೀರವಾಗಿ ಯೋಚಿಸಿ ತಮ್ಮ ಇತಿಮಿತಿಗಳ ಬಗ್ಗೆ ಯೋಚಿಸುತ್ತಲೇ ತಾಳ್ಮೆಯಿಂದ ಇರುವಂಥ ಜಿ.ಎಸ್.ಎಸ್. ರೀತಿಯ ಕವಿ 'ಹಣತೆ' ಯಂಥ ಕವಿತೆಯನ್ನು ಸೃಷ್ಟಿಸಲು ಸಾಧ್ಯ. ಅದು ಹೀಗಿದೆ:

**"ಈ ಮುರುಕು ಗುಡಿಸಲಲಿ**
**ಕಿರಿಹಣತೆ ಬೆಳಗುತಿದೆ**
**ಧ್ಯಾನಸ್ಥ ಯೋಗಿಯೊಲು ಸ್ತಿಮಿತವಾಗಿ !**

**ಬಡವರಾತ್ಮದ ಹಣತೆ**
**ಇಂತೆ ಬೆಳಗುವುದಲೆ**
**ಅಜ್ಞಾತವಾಸದಲ್ಲಿ ದೀನವಾಗಿ.''**

ಈ ಕವಿತೆಯು ಹೀಗೆಯೇ ಮುಂದುವರೆಯುತ್ತದೆ ಅದು ಬೇರೆ ವಿಷಯ. ಆದರೆ 'ಧ್ಯಾನಸ್ಥಯೋಗಿಯೊಲು ಸ್ತಿಮಿತವಾಗಿ' ಎಂಬ ಧ್ವನಿಯನ್ನು ನಾವು ಯಾವ ಹಂತಕ್ಕೆ ಬೇಕಾದರೂ ಕೊಂಡೊಯ್ಯಬಹುದು ವ್ಯಾಖ್ಯಾನಕ್ಕೆ. ಆದರೆ ಇಷ್ಟಂತೂ ಸತ್ಯ: 'ಧ್ಯಾನಸ್ಥ' ಮತ್ತು 'ಸ್ತಿಮಿತ' ವ್ಯಾಖ್ಯಾನಿಸಬಹುದಾದ ಗೂಢಾರ್ಥಗಳನ್ನೆಲ್ಲ ಒಳಗೆ ಬಚ್ಚಿಟ್ಟುಕೊಂಡು ಬಿಟ್ಟಿದೆಯೇನೋ ಅನ್ನಿಸುತ್ತದೆ. ಶಬ್ದಗಳಿಗೆ ಜೀವತುಂಬಿ ತನ್ನ ಮನೋಲೋಕದ ಎಲ್ಲ ಒಳಗುದಿಗಳು ಶ್ರೀಮಂತವಾದ ಅರ್ಥವ್ಯಾಪ್ತತೆಯನ್ನು ಸ್ಫುರಿಸುವಂತೆ ಮಾಡುವ ಅಗಾಧವಾದ ಆಂತರಿಕ ಶಕ್ತಿ ಇರಬೇಕಾಗುತ್ತದೆ. ಅದನ್ನು ಜಿ.ಎಸ್.ಎಸ್. ಪಡೆದಿದ್ದರು; ಕಾಲಕಾಲಕ್ಕೆ ಅದರ ಹಿಂದುಮುಂದು ನೋಡಿ ಸರಿಪಡಿಸಿಕೊಳ್ಳುತ್ತ.

ಯಾವ ಕವಿಗೆ ಆಗಲಿ, ಕಾವ್ಯರಚನೆಯ 'ಅನುಸಂಧಾನ'ದಲ್ಲಿ ನಿರಂತರತೆ ಇಲ್ಲದಿದ್ದರೆ; ದಟ್ಟವಾದ ಮೊತ್ತದ ರೂಪದಲ್ಲಿ 'ಕಾವ್ಯಗುಚ್ಛ'ವನ್ನು ಕೊಡಲು ಸಾಧ್ಯವಿಲ್ಲ. ಈ ದೃಷ್ಟಿಯಿಂದ ಜಿ.ಎಸ್.ಎಸ್. ಅವರು ತಮ್ಮ ಕಾವ್ಯರಚನೆಯ ಬತ್ತಳಿಕೆಯಲ್ಲಿ ಪುಂಖಾನುಪುಂಖವಾಗಿ ಪ್ರತಿಮೆಗಳನ್ನು ತುಂಬಿಕೊಂಡಿದ್ದವರು. ಅದನ್ನು ಎಚ್ಚರಿಕೆಯಲ್ಲಿಯೇ ರಚನೆಯ ಸಂದರ್ಭದಲ್ಲಿ ಬಳಸಿಕೊಳ್ಳುವರು. ಯಾಕೆಂದರೆ; ಯಾವ ಅನುಭವವೇ ಆಗಲಿ, ಅದರ ಇತಿಮಿತಿಗಳ ನಡುವೆಯೂ ಗಟ್ಟಿಯಾಗಿ ಬೇರೂರಬೇಕೆಂಬುದು ಅವರ ಆಶಯ. ಹಾಗೆಯೇ ಎಲ್ಲ ಸೃಷ್ಟಿಯೂ ಸೋತುಸುಣ್ಣವಾಗಬಾರದು ಎಂಬ ಧೋರಣೆಯಿಂದ ಎಂದೂ ಹಿಂದೆ ಸರಿದವರಲ್ಲ. ಜೊತೆಗೆ ಹೀಗೆಯೇ ಎಲ್ಲವೂ ಆಗಿ ಬಿಡಬೇಕೆಂದು ಧಾವಂತಪಟ್ಟವರಲ್ಲ. ೧೯೮೭ರಲ್ಲಿ ಜಿ.ಎಸ್.ಎಸ್. ಅವರ ಸಮಗ್ರಕಾವ್ಯ ಬರುವ ಸಂದರ್ಭದಲ್ಲಿ ಡಿ.ಆರ್. ನಾಗರಾಜ್ ಅವರ ಕೆಲವು ಸಾಲುಗಳನ್ನು ಬೆನ್ನುಡಿಯಲ್ಲಿ ದಾಖಲಿಸಿದ್ದಾರೆ. ಆ ಸಾಲುಗಳು ಎಷ್ಟು ಸೊಂಪಾಗಿವೆ ಎನ್ನುವ ಕಾರಣಕ್ಕಾಗಿ ಇಲ್ಲಿಡಲು ಬಯಸುವೆ: "ಮುವತ್ತಕ್ಕೂ ಹೆಚ್ಚು ವರ್ಷಗಳ ಅವಧಿಯಲ್ಲಿ ಸೃಷ್ಟಿಯಾದ ಕಾವ್ಯ ಇಲ್ಲಿದೆ. ಇಲ್ಲಿಯ ಕವನಗಳಲ್ಲಿ ಆಧುನಿಕ ಕನ್ನಡ ಕಾವ್ಯದ ಇಡೀ ಚರಿತ್ರೆ ಪ್ರತಿಫಲಿಸುತ್ತದೆ. ನವೋದಯ ನವ್ಯ ನವ್ಯೋತ್ತರ ಹೀಗೆ ಮೂರು ಕಾವ್ಯ ಮಾರ್ಗಗಳು ಇಲ್ಲಿ ತಮ್ಮ ಅಸ್ತಿತ್ವವನ್ನು ಸಾರಿವೆ. ಆದರೆ ಇವೆಲ್ಲವುಗಳ ಹಿಂದೆ ಬದಲಾವಣೆಗಳಿಂದಾಗಿ ಕರಗಿಹೋಗದ, ಕೊಚ್ಚಿಹೋಗದ ಸೋಪಜ್ಞ ವ್ಯಕ್ತಿತ್ವವೊಂದು ಕಾಣುತ್ತದೆ.

ಕೆಲವು ಮೂಲಭೂತ ಗುಣಗಳು ಈ ಸಮಗ್ರಕಾವ್ಯದ ಉದ್ದಕ್ಕೂ ಹರಿದಿವೆ. ಇಲ್ಲಿ ಎಲ್ಲವನ್ನು ಹೇಳಲು ಸಾಧ್ಯವಿಲ್ಲವಾದ್ದರಿಂದ, ಒಂದು ಪ್ರಮುಖ ಗುಣವನ್ನು ಮಾತ್ರ ಇಲ್ಲಿ ಪ್ರಸ್ತಾಪಿಸಬಹುದು: ಅದು ಒಂದು ಬಗೆಯ ಪ್ರಸನ್ನತೆ. ವಿಷಾದ ವ್ಯಂಗ್ಯಗಳ ಪದರುಗಳೊಳಗೂ, ಸಹಿಷ್ಣು, ಪ್ರಸನ್ನತೆ ಹರಡಿರುತ್ತದೆ. ಇಂಥ ಗುಣದ ಕಾರಣಕ್ಕಾಗಿಯೇ ಕಾವ್ಯವನ್ನು ಚಾರಿತ್ರ್ಯದ ಅಭಿವ್ಯಕ್ತಿ ಎಂದು ಕರೆಯುವುದು. ಜಿ.ಎಸ್.ಎಸ್. ಅವರ ಕಾವ್ಯಕ್ಕಂತೂ ಈ ಮಾತು ಪೂರ್ಣ ಅನ್ವಯವಾಗುತ್ತದೆ.

ಈ ಸಮಗ್ರ ಕಾವ್ಯದ ಉದಕ್ಕೂ ಅನೇಕ ಪುನರ್‌ಜನ್ಮಗಳಿವೆ. ಆದರೆ ಆ ಹೊಸ ಹುಟ್ಟಿನಲ್ಲಿ ಹಳೆಯ ನೆನಪುಗಳು, ಲಯಗಳು, ವಾಸನೆಗಳು ಇಂಗಿ ಹೋಗುವುದಿಲ್ಲ. ಹೀಗೆ ಪುನರ್‌ಜನ್ಮಗಳನ್ನು ಪಡೆಯಬಲ್ಲ ಶಕ್ತಿ ಪ್ರತಿಭಾವಂತ ಕವಿಗಳಿಗೆ ಮಾತ್ರ ಸಾಧ್ಯ. ಜಿ.ಎಸ್. ಶಿವರುದ್ರಪ್ಪನವರು ಈ ರೀತಿಯ ಕವಿ ಎಂಬುದಕ್ಕೆ ಉದ್ದಕ್ಕೂ ಸಮರ್ಥನೆಗಳು ಸಿಗುತ್ತವೆ." ಈ ನೋಟಕ್ಕೆ ಪೂರಕವಾಗಿರುವಂಥ, ಅರ್ಥಪೂರ್ಣವಾದ ಮುನ್ನುಡಿಯನ್ನು ೧೯೮೧ರಲ್ಲಿ 'ಕಾಡಿನ ಕತ್ತಲಲ್ಲಿ' ಸಂಕಲನಕ್ಕೆ ನಾಗರಾಜ್ ಬರೆದಿದ್ದಾರೆ. ಅದರ ಕೆಲವು ಸಾಲುಗಳು ಹೀಗಿವೆ: "ಗ್ರೀಷ್ಮದುರಿಬಿಸಿಲಲ್ಲಿ ಕಾವ್ಯಾಭಿಮಾನಿಗಳು ಇಂಥ ಕಾವ್ಯಕ್ಕಾಗಿ ಕಾಯುತ್ತಾರೆ. ದಟ್ಟ ಕಾರ್ಮೋಡದ ಆಕಾಶದ ಎದೆವೊಡೆದಂತೆ ಬೋರೆಂದು ನುಗ್ಗುವ, ಧೋಧೋ ಎಂದು ಸುರಿಸುವ ಆ ಮಳೆಗಾಗಿ ಕಾಯುತ್ತಾರೆ. ಒಣಗಿ ಬೆಂಗಾಡಾದ ಹೃದಯಗಳು ಮತ್ತೆ ನೀರುಂಡು ತಣಿದು ಬದಲಾವಣೆಯ ರಥಕ್ಕೆ ಕೈ ಹಚ್ಚುತ್ತವೆ. ಅಂಥ ದೈತ್ಯ ಸಂಕಟಗಳ ಹೊತ್ತಿನಲ್ಲೂ ಪ್ರೊಮಿತ್ಯೂಸನಿಗೆ ಶಕ್ತಿ ನೀಡಿದ್ದು ಅವನ ಬಾಯಿಂದ ಹೊರಟ ಆ ಮಹಾ ಕವನಗಳಲ್ಲವೇನು? ದೇವರು ಧರ್ಮಗಳ ಸರಳ ಸಮಾಧಾನಗಳಿಲ್ಲದ ಕಾವ್ಯ ಅದು." ಈ ನೆಲೆಯಲ್ಲಿ ಒಂದು ಮಹತ್ವಪೂರ್ಣ ಕವಿತೆ ಅಥವಾ ಕೆಲವು ಶ್ರೇಷ್ಠ ಮಹಾಕಾವ್ಯಗಳು; ನೂರಾರು, ಸಾವಿರಾರು ವರ್ಷಗಳಾದರೂ ಎಷ್ಟೊಂದು ಜೀವ ತುಂಬಿಕೊಂಡಿರುತ್ತವೆ. ಹಾಗೆ ನೋಡಿದರೆ ನಾಗರಾಜ ಮುನ್ನುಡಿ ಬರೆದಿರುವ 'ಕಾಡಿನ ಕತ್ತಲಲ್ಲಿ' ಶೀರ್ಷಿಕೆಯ ಕವನವೇ ಅತ್ಯಂತ ವಿಷಾದದೆಡೆಗೆ ಕರೆದೊಯ್ಯುವಂಥದ್ದು. ಕಾಡಿನ ಕತ್ತಲಲ್ಲಿ ಹುಡುಗನೊಬ್ಬ ಅನಾಥನಾಗಿ ಮರದ ಕೆಳಗೆ ಕೂತಿದ್ದಾನೆ. ಅವನ ಹಸು ತಪ್ಪಿಸಿಕೊಂಡಿದೆ. ಮನೆಗೆ ಹೋದರೆ ಚಾಟಿ ಏಟು. ಅದರ ಏಟಿನ ಭಯಕ್ಕೆ ಕುತಿದ್ದಾನೆ. ಅದರ ಹಿಂದಿರುವ ದುಗುಡ ಮತ್ತು ವೇದನೆಯನ್ನು ಕುರಿತಂಥದ್ದು. ನಮ್ಮನ್ನು ಎಷ್ಟು ಗಾಢವಾಗಿ ಕಲುಕುವಂಥದ್ದು. ಆ ಕವಿತೆಯ ಕೊನೆಯ ಸಾಲುಗಳು ಹೀಗಿವೆ:

**''ದಟ್ಟ ಕಾಡಿನ ಮೇಲೆ ಕತ್ತಲೆ ಇಳಿದು**
**ಹಬ್ಬುವುದು ನಿಲ್ಲುವುದಿಲ್ಲ; ಕಪ್ಪೆಗಳ**
**ವಟವಟ, ಚಿಕ್ಕೆಗಳ ಮಿರಾಮಿರಾ – ಯಾವುದೂ**
**ನಿಲ್ಲುವುದಿಲ್ಲ. ಈ ಕತ್ತಲೆಯ ಒಳಗೆಲ್ಲೋ**
**ಕಾದಿದ್ದಾನೆ ಒಡೆಯ**
**ಕೈಯಲ್ಲಿ ಚಾವಟಿ ಹಿಡಿದು, ಹೀಗೆಯೇ**
**ಇಂಥ ಕಡ್ಡಿ ಕಾಲಿನ, ಜೋಲು ಮೋರೆಯ**
**ಹಾಲುಗಣ್ಣಿನ ಮೈಯ ಚರ್ಮಸುಲಿಯುತ್ತ**
**ಈ ದಟ್ಟಗಾಡಿನ ಕತ್ತಲೆಗೆ ಕೆಂಗಣ್ಣು ಹಾಯಿಸುತ್ತ''**

ಇದು ನಮ್ಮನ್ನು ಬಾಲ್ಯಕಾಲಕ್ಕೆ ಕರೆದೊಯ್ಯುತ್ತದೆ. ಅದಕ್ಕಿಂತ ಮಿಗಿಲಾಗಿ ಆ ಹುಡುಗ ನಮ್ಮ ಮನಸ್ಸಿನ ತುಂಬ ಆವರಿಸಿಕೊಂಡುಬಿಡ್ತಾನೆ. ಅವನಿಗೆ ತಪ್ಪಿಸಿಕೊಂಡ ಹಸು ಸಿಕ್ಕಿಬಿಡಲಿ. ಹಾಗೆಯೇ ಚರ್ಮಕಿತ್ತು ಬರುವ ಏಟಿನಿಂದ ಬಿಡುಗಡೆಯಾಗಲಿ ಎಂಬ ಯಾತನೆಯು ನಮ್ಮನ್ನು ಗಾಢವಾಗಿ ಕಾಡುತ್ತಿರುತ್ತದೆ.

ಜಿ.ಎಸ್.ಎಸ್. ಅವರು ಯಾವುದೇ ರೀತಿಯ ಬಂಡಾಯದ ಘೋಷಣೆಯಿಂದ ಬರೆದ ಕವಿತೆಯಲ್ಲ. ಒಬ್ಬ ಜೀವನ ಪ್ರೀತಿಯ ದೊಡ್ಡ ಕವಿಗೆ, ಕವಿತೆಯ ಜೀವಾಳ ಹೃದಯವಂತಿಕೆಯೇ ಆಗಿರುತ್ತದೆ. ಒಂದು ದೊಡ್ಡಕಥೆ ಕೊಡುವ ಸಂವೇದನೆಯನ್ನು ಈ ಕವಿತೆ ಕಟ್ಟಿಕೊಡುತ್ತದೆ ಎನ್ನುವುದು ಮುಖ್ಯ. ಮಾನವೀಯ ಸಂಬಂಧಗಳ ಏರುಪೇರುಗಳನ್ನು ಅತ್ಯಂತ ಗಹನವಾಗಿ ನೋಡುವ ಜಿ.ಎಸ್.ಎಸ್. ಅವರಿಗೆ; ಜಗತ್ತಿನ ಎಲ್ಲ ಶ್ರೇಷ್ಠ ಕವಿಗಳ ರೀತಿಯಲ್ಲಿ ಕಾಡುವ ಸಂಗತಿಗಳು ನೂರಾರು. ಯಾಕೆ ಕಾಡುವಂತೆ, ಸೂಕ್ಷ್ಮತೆಗಳು ಕಾವ್ಯಬಂಧ ಜೀವನಾಭಿವ್ಯಕ್ತಿಯಾಗಿ ನಮ್ಮ ಮುಂದೆ ನಿಲ್ಲುವಂತೆ ಮಾಡುತ್ತದೆಂಬುದೂ ಕೂಡ ಮುಖ್ಯವಾದದ್ದು. ಹಾಗೆಯೇ ಹೀಗೆ ರಚನಾ ವಿಧಾನಕ್ಕೆ ತೊಡಗಿದ ಕವಿಯು ಅದರಲ್ಲಿ ಕಾಣುವ ಸುಖ–ಸಂತೋಷ ಅಮೋಘವಾದದ್ದು. ತನ್ನನ್ನು ಯಾರೋ ಗಮನಿಸುತ್ತಾರೆ ಅಥವಾ ಗಮನಿಸಲಿ ಎಂಬ ವಾಂಛಲ್ಯದಿಂದ ಸೃಷ್ಟಿಯಾದದ್ದಲ್ಲ. ಆದರೆ ಎಲ್ಲ ಸೃಷ್ಟಿಯ ನಂತರ ಅದಕ್ಕೆ ಒದಗಿ ಬರುವ ಸೆಳೆತವಂತೂ ವಿಚಿತ್ರ ಹಂತಗಳನ್ನು ದಾಟಿ ಮುಂದೆ ಸಾಗುತ್ತಿರುತ್ತದೆ. ಕವಿತೆಯೊಂದು ಹೀಗೆ ಯಾರ್‍ಯಾರೋ ಮನಸ್ಸಿನಲ್ಲಿ ಭಿನ್ನಭಿನ್ನ ನೆಲೆಗಳಲ್ಲಿ ಅರ್ಥವ್ಯಾಪ್ತತೆಯನ್ನು ಪಡೆಯುತ್ತ ಹೋಗುವುದು. ಜಗತ್ತಿನ ಉದ್ದಗಲಕ್ಕೂ ಪ್ರತಿ ದಿವಸ ಲಕ್ಷಾಂತರ ಕವಿತೆಗಳು ಸೃಷ್ಟಿಯಾಗುತ್ತಿರುತ್ತವೆ.

ಅಷ್ಟೇ ಅಲ್ಲ ನಮ್ಮ ಮಹಾಕಾವ್ಯಗಳೂ ಹೊಸ ಒಳನೋಟಗಳನ್ನು ಪಡೆದು ರಚನೆಯಾಗುತ್ತಲೇ ಇರುತ್ತವೆ. ಅಲ್ಲಿಯ ಪಾತ್ರಗಳು ಕವಿಯ ಮೂಲಕ ಮರುಹುಟ್ಟು ಪಡೆಯುತ್ತಿರುತ್ತವೆ. ಜನ ಓದುತ್ತಾರೆ, ಎಂಥದೋ ಭಾವನೆಗಳನ್ನು ಅನುಭವಿಸುತ್ತಾರೆ ಮತ್ತು ಪ್ರತಿಕ್ರಿಯಿಸುತ್ತಾರೆ. ವ್ಯಾಖ್ಯಾನಗಳಿಗೆ ಒಳಪಡಿಸುತ್ತಾರೆ. ಮೂಲ ಕವಿಗೆ ಇದ್ಯಾವುದರ ಅರಿವೇ ಇರುವುದಿಲ್ಲ. ಅದು ಭೂಮಿಯನ್ನು, ಆಕಾಶವನ್ನು ಆಹ್ವಾನಿಸಿದಂತೆ ಮನುಷ್ಯನ ಚಿಂತನಾ ಕ್ರಮಕ್ಕೆ ಈ ಎಲ್ಲ ಗುಣಗಳು ಸ್ವಾಭಾವಿಕವಾಗಿಯೇ ಹೇಗೋ ಜಾಗ ಗಿಟ್ಟಿಸಿಬಿಟ್ಟಿರುತ್ತದೆ.

'ಚೆಲುವು–ಒಲವು' ಸಂಕಲನದ 'ಕ್ರಾಂತಿಕಾರ' ಕವಿತೆಯು ಹುಟ್ಟಿ ಸುಮಾರು ಅರವತ್ತೈದು ವರ್ಷಗಳಿಗೆ ಮೇಲ್ಪಟ್ಟು ಆಗಿದ್ದರೂ; ಇಂದಿಗೂ ಅವರವರ ಮನೆಯ ಮಗುವನ್ನು ಕುರಿತು ರಚಿಸಿದಂತೆ ಧುತ್ತನೆ ನಮಗೆ ಮುಖಾಮುಖಿಯಾಗುವುದು. ನಾಳೆಗೂ ಅಷ್ಟೆ. ಆದರೆ ಶಬ್ದಗಳ ಸೃಷ್ಟಿಗೆ ಹಾಗೆ ಸಾರ್ವತ್ರಿಕವಾಗುವ ಅನನ್ಯತೆ ಜೀವ ಪಡೆದು ಬಿಟ್ಟಿರುತ್ತದೆ. ಮಗುವೊಂದು ಬೆಳೆಯುತ್ತ ಹೋದಂತೆ ಮನೆಯನ್ನು ತನ್ನ ಚಕ್ರಾದಿಪತ್ಯವೆಂದು ತಿಳಿದು ನಡೆಸುವ ಕ್ರಿಯೆ ನಿಜವಾಗಿಯೂ ಅಮೋಘ ವಾದದ್ದು.

**"ಅದೋ ಬಂದ ಇವನೊಂದು ಕಿರಿಯ ಬಿರುಗಾಳಿ!**
**ಮನೆಯ ವಸ್ತುಗಳೆಲ್ಲ ದಿಕ್ಕುಪಾಲು**
**ಇವನು ಮಲಗಲು ಮನೆಗೆ ಕವಿಯುವುದು ಮಂಪರ!**
**ಇವನ ಮಾತಿನ ಅರ್ಥದೇವರೇ ಬಲ್ಲ !**
**ಭಾವಗೀತೆಗಳಂತೆ ಅಸ್ಪಷ್ಟವೆಲ್ಲ**

ಹೀಗೆ ಮುಂದುವರೆದು:

**"ನನಗು ಅವಳಿಗು ನಡುವೆ ವ್ಯಕ್ತಪ್ರೇಮದ ಸೇತು**
**ಇವ ಮಾಯಕಾರ**
**ಎರಡು ಬಾಳನು ಬೆಸೆದ ಸೂತ್ರಧಾರ!"**

ಅತ್ಯಂತ ಸಾರ್ಥಕವಾದ ಕವಿತೆ. ಈ ಸಂಕಲನದ ಮುನ್ನುಡಿಯಲ್ಲಿ ಪು.ತಿ.ನ. ಅವರೂ ಇದಕ್ಕೆ ಸಂಭ್ರಮಿಸುತ್ತಾರೆ. ಜಿ.ಎಸ್.ಎಸ್. ಅವರು ಈ ಕವಿತೆಯನ್ನು ನಾನಾ ಸಂದರ್ಭದ ಕವಿಗೋಷ್ಠಿಗಳಲ್ಲಿ ಓದಿ ಸಭಿಕರನ್ನು ಸಂಚಲನಗೊಳಿಸಿದ್ದನ್ನು ಸಾಕಷ್ಟು ಮಂದಿ ಕಂಡಿದ್ದಾರೆ. ಹೀಗೆ ಆಯಾ ಕವಿತೆಯ ಜೀವನಾಡಿ ಹಿಡಿದು ವ್ಯಾಖ್ಯಾನಿಸುತ್ತ ಹೋದಾಗ, ಕವಿಯ ಅಂತರಂಗ ತುಮುಲ ಎಂತೆಂಥ ಸ್ಥಿತ್ಯಂತರಗಳನ್ನು ಪಡೆದಿರಬಹುದು ಅನ್ನಿಸುತ್ತದೆ.

ಏಳುನೂರಕ್ಕೂ ಮೇಲ್ಪಟ್ಟು ಹೊರಗೆ ಬಂದಿರುವ ಕವಿತೆಗಳ ಒಂದೊಂದರ ಜೀವಾತ್ಮ ಯಾವ ತೆರನದ್ದು ಎಂದು; ಅದರ ಹುಟ್ಟಿನ ಸಂದರ್ಭ ಕುರಿತು ನಾಲ್ಕು ಸಾಲು ಸೃಷ್ಟಿಯಾಗಿದ್ದರೆ; ಜಿ.ಎಸ್.ಎಸ್. ಅವರ ಕಾವ್ಯಾಭಿಮಾನಿಗಳ ಹುಡುಕಾಟಕ್ಕೆ ಬೇರೆ ವಿಧದ ಆಯಾಮ ದೊರಕುತ್ತಿತ್ತು. ಹೀಗೆ ಮಾಡದಿರುವುದಕ್ಕೆ ಮುಖ್ಯಕಾರಣ: ಕಾವ್ಯದ ಹುಟ್ಟು ಸಾರ್ವತ್ರಿಕವಾಗಬಾರದು ಎಂಬ ಮನಸ್ಥಿತಿಯೂ ಕಾರಣವಿರಬಹುದು. ಇದು ಕೇವಲ ಕನ್ನಡ ಸಂದರ್ಭದಲ್ಲಿ ಮಾತ್ರವಲ್ಲ. ಜಗತ್ತಿನ ಎಲ್ಲ ಭಾಷೆಗಳ ಕವಿಗಳ ಸಮಸ್ಯೆಯೂ ಹೌದು. ಒಂದು ದೃಷ್ಟಿಯಿಂದ ಒಳ್ಳೆಯದೂ ಇರಬಹುದು. ಯಾಕೆಂದರೆ; ಈ ಪರಂಪರೆ ಬೆಳೆದರೆ: ಚಿಲ್ಲರೆ ಪಲ್ಲರೆ ಕವಿಗಳೆಲ್ಲ ಏನು ಬೇಕಾದರೂ ಬರೆದಿಟ್ಟು ವಕ್ರತೆಯನ್ನು ಅನುಭವಿಸುತ್ತ ಹೋಗಬಹುದು. ದೊಡ್ಡ ಕವಿಗಳ ಅರ್ಥಾತ್ ಸಾರ್ಥಕ ಕವಿಗಳ ಬಹುಮುಖ್ಯ ಕವಿತೆಗಳ ಹಿಂದೆ ನಾನಾ ವಿಧವಾದ ಮಾರ್ಮಿಕ ದುಗುಡಗಳು ಕೆಲಸ ಮಾಡಿರಬಹುದು. ಎಲ್ಲವೂ ಖುಷಿಯಿಂದ ಬಂದಿರಲಾರವು. ಒಂದು ಪ್ರಕೃತಿಯನ್ನು ಕುರಿತು ಸಂಭ್ರಮಿಸಿದ ಕವಿತೆಯ ಹುಟ್ಟಿನ ಹಿಂದೆ; ಎಂಥದೋ ಭಾವನಾತ್ಮಕ ಸಂಗತಿಗಳು ಗುನುಗುನಿಸಿರಲು ಸಾಧ್ಯ. ದುಗುಡ, ಆತಂಕ, ತಲ್ಲಣಗಳು ಯಾವಾಗಲೂ ಕವಿತೆಗಳ ಸ್ಥಾಯಿಭಾವವಾಗಿ ಕೆಲಸಮಾಡಿರಲು ಸಾಧ್ಯ. ಇದಕ್ಕೆ ಇರಬಹುದು ಎಲ್ಲ ಶ್ರೇಷ್ಠ ಅಥವಾ ಅತ್ಯುತ್ತಮ ಕವಿತೆಗಳು ನಿರಾಡಂಬರ ಸುಂದರಿಯರಂತೆ ಮರು ಓದಿಗೆ ಆಹ್ವಾನಿಸುತ್ತಲೇ ಹೋಗುವುದು. ಕಾವ್ಯಕ್ಕೆ ಅಂಥ ಸೊಗಸು ಯಾವಾಗಲೂ ಇರುತ್ತದೆಂಬ ಕಾರಣಕ್ಕಾಗಿಯೇ ಹೀಗೆ ದಾಖಲಿಸಲು ಬಯಸುತ್ತಿರುವುದು. ಈ ನೆಲೆಯಲ್ಲಿ 'ಕವಿತೆಯ ಕಷ್ಟ' ಎಂಬ ಕವಿತೆಯ ಈ ಸಾಲುಗಳು ಎಷ್ಟು ಆಪ್ತವಾಗಿವೆ:

**''ಕೆಲವು ಕವಿತೆಗಳು**
**ಕರೆದ ಕೂಡಲೇ ಬಂದುಬಿಡುತ್ತವೆ**
**ಚಿಕ್ಕಮಕ್ಕಳ ಹಾಗೆ**
**ಇನ್ನು ಕೆಲವಂತು ಹೊಸಿಲು ದಾಟಿ ಹೊರಕ್ಕೆ**
**ಬರುವುದೇ ಇಲ್ಲ – ಹೊಸ ಮದುವೆ ಹೆಣ್ಣಿನ ಹಾಗೆ**
**ಅವಕ್ಕೆ ಮೈತುಂಬ ನಾಚಿಕೆ''**

ಹೀಗೆ ಮುಂದಿನ ಸಾಲುಗಳು ಎಷ್ಟು ನಾಚಿಕೆ ಮತ್ತು ಸಂಕೋಚವನ್ನು ವ್ಯಕ್ತಪಡಿಸುತ್ತಲೇ ನೆನಪಿಗೆ ಕಾವು ಕೊಡುವಂತೆ ಮರೆಯಾಗಿಬಿಡುತ್ತವೆ. ಜೀವನದ ಸಂಪತ್ತು ಭರಿತತೆಯ ಬಗ್ಗೆ ಕಳಕಳಿ ಇರುವವರು ಮಾತ್ರ ಇಂಥ ಚೇತೋಹಾರಿ ಕವಿತೆಗಳನ್ನು ರಚಿಸಲು ಸಾಧ್ಯ. ಈ ಕವಿತೆಯ ಪಕ್ಕದಲ್ಲಿಯೇ, 'ಅಗ್ನಿಪರ್ವ'

ಸಂಕಲನದಲ್ಲಿ 'ಮುನ್ನುಡಿ ಕವಿತೆ' ಎಂಬ ಕವಿತೆ ಇದೆ. ಎಂಥ ಸೊಬಗಿನಿಂದ ಕೂಡಿದೆ. ಕೆ.ಎಸ್.ನ. ಅವರ 'ಎದೆ ತುಂಬ ನಕ್ಷತ್ರ' ಕವನ ಸಂಕಲನಕ್ಕೆ ಮುನ್ನುಡಿ ರೂಪದಲ್ಲಿ ಬರೆದಂಥದ್ದು. ಆಪ್ತತೆ ಹಾಗೂ ಲವಲವಿಕೆ ಎರಡನ್ನು ಮೇಳಯಿಸುಕೊಂಡಿರುವ ಬಗೆಯೇ ಜೀವ ತುಂಬಿಬಂದಂತೆ ಇದೆ. ಅದರ ಎರಡನೆಯ ಮತ್ತು ಕೊನೆಯ ಸ್ಟ್ಯಾಂಜಾ ಹೀಗಿದೆ:

**"ಹಣ್ಣಾದ ಈ ಮರದ ಕೊಂಬೆರೆಂಬೆಯ ತುಂಬ**
**ಎಷ್ಟೊಂದು ಹಕ್ಕಿಗಳು, ಎಷ್ಟು ಹೂವು!**
**ಅದೇ ಬೆರಗು, ಮತ್ತದೇ ಬೆಡಗು, ಜೋ**
**ಕಾಲಿಯಾಡುತ್ತಿವೆ ಚೆಲುವು–ಒಲವು.**

**ಎಲೆ ತುಂಬ ನಕ್ಷತ್ರಗಳ ಬಚ್ಚಿಟ್ಟುಕೊಂಡ**
**ಚೈತನ್ಯಕ್ಕೆ ಕತ್ತಲೆಯ ಭಯವಿಲ್ಲ.**
**ಕಾರ್ತೀಕದಾಕಾಶದಂಥ ಉಜ್ವಲ ಕವಿಗೆ**
**ಮುನ್ನುಡಿಯ ಹಣತೆಗಳ ಯಾವ ಹಂಗೂ ಇಲ್ಲ!"**

ಈ ಕೊನೆಯ ನಾಲ್ಕು ಸಾಲುಗಳಲ್ಲಿ ಮೊದಲನೆಯ ಎರಡು ಸಾಲು ಅತ್ಯಂತ ಅರ್ಥಗರ್ಭಿತವಾಗಿವೆ. 'ಎದೆ ತುಂಬ ನಕ್ಷತ್ರಗಳ ಬಚ್ಚಿಟ್ಟುಕೊಂಡ' ಎಂಥ ಅಪೂರ್ವ ಸಾಲು. ರಚನೆಯ ಸಂದರ್ಭದಲ್ಲಿ ಆಯಾ ಕವಿತೆಗಳಿಗೆ ಹೊಂದಿಕೊಳ್ಳುವಂತೆ ಶಬ್ದಗಳ ಮತ್ತು ಶೀರ್ಷಿಕೆಯ ಹುಡುಕಾಟವೂ ಶ್ರಮವನ್ನು ಕೊಟ್ಟಿರಲು ಸಾಧ್ಯ. ಸಾಹಿತ್ಯ ಪ್ರಕಾರದ ಎಲ್ಲ ಸೃಷ್ಟಿಯ ಹಿಂದೆ ಸಾಕಷ್ಟು ಮಾನಸಿಕ ಶ್ರಮವು ಇರುತ್ತದೆ. ಅಷ್ಟು ಸುಲಭದಲ್ಲಿ ದಕ್ಕಿರುವುದಿಲ್ಲ. ಇಷ್ಟಾದರೂ ಶಬ್ದಕೋಶದಲ್ಲಿರುವ ಸಾವಿರಾರು ಶಬ್ದಗಳಲ್ಲಿ ಕೇವಲ ಕೆಲವು ನೂರುಗಳನ್ನು ಮಾತ್ರ ಬಳಸಿಕೊಳ್ಳಲು ಸಾಧ್ಯವಿರುತ್ತದೆ ಎಂದು ವಿಷಾದದಿಂದ ಒದ್ದಾಡಿರುತ್ತಾರೆ. ಒಮ್ಮೆ ಇದಕ್ಕೆ ಸಂಬಂಧಿಸಿಯೇ ಲಂಕೇಶ್ ಅವರು ಮತ್ತು ಜಿ. ಎಸ್. ಶಿವರುದ್ರಪ್ಪನವರು 'ಅಕ್ಷರ ಹೊಸ ಕಾವ್ಯ' ದಂಥ ಮಹತ್ವಪೂರ್ಣ 'ಆಂಥಲಾಜಿ'ಯ ಎರಡನೆಯ ಆವೃತ್ತಿಯ ಪರಿಷ್ಕರಣ ಸಂಪುಟವು ಬಂದಾಗ ಮುಖಾಮುಖಿ ಮಾತುಕತೆ ಇತ್ತು. ಆಗ ಪತ್ರಿಕೆ ಕಚೇರಿಯ ಕೊಠಡಿಯಲ್ಲಿ; ಕಾವ್ಯಕ್ಕೆ ಜೀವ ತುಂಬುವ ಎಷ್ಟೋ ನುಡಿಗಳಲ್ಲಿ "ಅಯ್ಯೋ ನಾವು ಸರಿಯಾಗಿ ಇನ್ನೂರು ಮುನ್ನೂರು ಶಬ್ದಗಳನ್ನು ಬಳಸಿಕೊಳ್ಳುವುದಿಲ್ಲ. ಮಿಕ್ಕ ಶಬ್ದಗಳು ಅನಾಥವಾಗಿ ಕೊರಗುತ್ತ ಇರುತ್ತವೆ" ಎಂದು ತಮ್ಮ ವಿಷಾದವನ್ನು ಹಂಚಿಕೊಂಡಿದ್ದರು. ಇದೇ ಸಂದರ್ಭದಲ್ಲಿ ನಮ್ಮ ನಡುವಿನ ಅತ್ಯಂತ ಸೂಕ್ಷ್ಮ

ಸಂವೇದನೆಯ ವಿಮರ್ಶಕರು ಮತ್ತು ಚಿಂತಕರಾದ ಕೆ.ವಿ. ನಾರಾಯಣ ಅವರು ಒಮ್ಮೆ ಒಂದು ಮಾತು ಹೇಳಿದ್ದರು: "ಶೂದ್ರ, ಯಾರಿಂದಲಾದರೂ ಲಂಕೇಶ್ ಪತ್ರಿಕೆಯ ಬಗ್ಗೆ ಒಂದು ಸಂಶೋಧನಾತ್ಮಕ ಲೇಖನ ಬರೆಸಿ. ಆ ಪತ್ರಿಕೆ ಬಂದ ಮೇಲೆ ಮೇಸ್ಟ್ರು ಎಷ್ಟು ಹೊಸ ಶಬ್ದಗಳನ್ನು ಚಲಾವಣೆಗೆ ತಂದಿದ್ದಾರೆ" ಎಂದು. ಇದಕ್ಕೆ "ಹೌದಲ್ಲವಾ?" ಎಂದು ಜಿ.ಎಸ್.ಎಸ್. ಅವರೂ ದನಿಗೂಡಿಸಿದ್ದರು.

ಜಿ.ಎಸ್.ಎಸ್. ಅವರು ತಮ್ಮ ಕಾವ್ಯ ಸಂಕಲನಗಳ ಪ್ರಾರಂಭದ ಎರಡಕ್ಕೆ ಕುವೆಂಪು ಅವರಿಂದ 'ಸಾಮಗಾನ'ಕ್ಕೆ ಹಾಗೂ 'ಚೆಲುವು–ಒಲವು'ಗೆ ಪು.ತಿ.ನ. ಅವರಿಂದ ಮುನ್ನುಡಿ ಬರೆಸಿಕೊಂಡಿದ್ದಾರೆ. ಮೆಚ್ಚಿಗೆಯನ್ನು ಪಡೆದಿದ್ದಾರೆ. 'ಕಾಡಿನ ಕತ್ತಲಲ್ಲಿ' ಸಂಕಲನಕ್ಕಂತೂ ಡಿ.ಆರ್.ನಾಗರಾಜ ಬಹು ದೀರ್ಘವಾಗಿಯೇ ಅವರ ಕಾವ್ಯವನ್ನು ಕುರಿತು ಚರ್ಚಿಸಿದ್ದಾನೆ. ನಂತರ ಸಮಗ್ರ ಕಾವ್ಯಕ್ಕೆ ಬೆನ್ನುಡಿಗೆ ಕೆಲವು ಅಮೂಲ್ಯ ನುಡಿಗಳನ್ನು ದಾಖಲಿಸಿದ್ದಾನೆ. ಇದೇ ಸಮಗ್ರ ಕಾವ್ಯಕ್ಕೆ ಕೆ.ವಿ. ನಾರಾಯಣ ಅವರು ಅರ್ಥಪೂರ್ಣವಾಗಿ ಜಿ.ಎಸ್.ಎಸ್. ಅವರ ಕಾವ್ಯಕ್ಕೆ ಮಾರ್ಮಿಕವಾಗಿ ಪ್ರತಿಕ್ರಿಯಿಸಿದ್ದಾರೆ. ಅದರ ಪ್ರಾರಂಭದಲ್ಲಿ ಹೀಗೆ ಪ್ರಸ್ತಾಪಿಸುವರು: "ಜಿ.ಎಸ್.ಎಸ್. ಕಳೆದ ನಾಲ್ಕು ದಶಕಗಳಲ್ಲಿ ಬರೆದ ಎಲ್ಲ ಕವನಗಳು, ಅನುವಾದಿಸಿದ ಕವಿತೆಗಳು ಇಗೋ ಇಲ್ಲಿ ಒಟ್ಟಾಗಿವೆ. ನಲವತ್ತು ವರ್ಷಗಳ ಕಾಲ ಹೀಗೆ ಕಾವ್ಯರಚನೆ ನಡೆಸಿದ ಸಂಗತಿಯೇ ಕವಿಗೆ ಕವಿತೆಯ ಕೃಷಿಯೆಂಬುದು ಪ್ರಿಯವಾದ ಹಾಗೂ ಹೊಣೆಯುಳ್ಳ ಕ್ರಿಯೆಯಾಗಿದೆ ಎಂಬ ಅಂಶವನ್ನು ಸಾಬೀತು ಮಾಡುವುದು. ಹೀಗೆ ಕವಿ ರಚಿಸಿದ ಕವನಗಳೆಲ್ಲವನ್ನೂ ಒಗ್ಗೂಡಿಸುವ ಮೂಲಕ ಕವಿಯ ಎಲ್ಲ ಕವಿತತೆಗಳ ಸಂಬಂಧವನ್ನು ತಿಳಿಯಲು ಸಾಧ್ಯವಾಗುವುದು; ಇದರೊಡನೆ ಈ ಕವಿಗಳು ಮೈದಳೆಯುತ್ತಿದ್ದ ಹೊತ್ತಿನ ಕನ್ನಡ ಕಾವ್ಯ ಪರಂಪರೆಯ ಚಹರೆಗಳನ್ನು ಕಂಡುಕೊಳ್ಳಬಹುದು." ಹೀಗೆಯೇ ಮುಂದುವರಿದು ದಾಖಲಿಸಿರುವ ನುಡಿ ಮಹತ್ವಪೂರ್ಣವಾದದ್ದು: "ಇಲ್ಲಿ ಒಗ್ಗೂಡಿಸಿದ ಕವಿತೆಗಳ ಓದಿನಿಂದ ಇನ್ನೊಂದು ಸಂಗತಿ ಗೋಚರಿಸುತ್ತದೆ. ಇಲ್ಲಿನ ಕವಿತೆಗಳು ಮುಖ್ಯವಾಗಿ ಪ್ರತಿಕ್ರಿಯಾರೂಪಿಯಾದವು; ಭಾವಸಂವಾದಿಯಾದವು. ಬಿಡಿಬಿಡಿಯಾಗಿ ಕವಿತೆಗಳು ತಮಗೆ ತಾವೇ ಸಂಪೂರ್ಣವಾಗಿವೆ. ಹೀಗೆ ಬಿಡಿಬಿಡಿಯಾದ ರಚನೆಗಳು ಮತ್ತೆ ಬೇರೊಂದು ಗಹನ ರಚನೆಗಾಗಿ ನಡೆಸಿದ ಪೂರ್ವಭಾವಿಸಿದ್ಧತೆಗಳಾಗಲೀ, ಕರಡು ರೂಪಗಳಾಗಲಿ ಅಲ್ಲ. ಹೀಗೆಂದು ಈ ಕವಿತೆಗಳು ಸದ್ಯತನಕ್ಕೆ ಬದ್ಧವಾಗಿಬಿಟ್ಟಿವೆ. ಅಂದಂದಿಗೆ ಸೀಮಿತವಾಗಿವೆ ಎಂದೂ ಹೇಳುವಂತಿಲ್ಲ. ಕವಿತೆಗಳು ಹೀಗೆ ದೈನಿಕ ಹಾಗೂ ನೈರಂತರ್ಯಗಳ ನಡುವೆ ನಿಲ್ಲುವ ಈ ಗುಣ ಕಾವ್ಯರಚನೆ ವ್ಯಕ್ತಿತ್ವದ ಒಂದು ಹೊರಬಾಗಿರುವ ಕವಿಗಳಲ್ಲಿ ಸಹಜವೇ ಸರಿ. ಸೃಜನಶೀಲ ಲೇಖಕರಾಗಿ ಜಿ.ಎಸ್.ಎಸ್.

ತಮ್ಮನ್ನು ಕವಿತೆಯ ಪ್ರಕಾರಕ್ಕೆ ಬದ್ಧಗೊಳಿಸಿಕೊಂಡರಷ್ಟೆ. ಹೀಗಾಗಿ ಕವಿ ವ್ಯಕ್ತಿತ್ವದ ಸ್ಪಂದನಗಳು ಪೂರ್ವಧ್ಯಾನಿತ ಸ್ಥಿತಿಯಲ್ಲಿ ಉಕ್ತಿರೂಪ ಪಡೆದು ಕವಿತೆಗಳಾಗಿವೆ" ಎಂದು ಆತ್ಮೀಯವಾಗಿ ಚರ್ಚಿಸಿದ್ದಾರೆ. ಹಾಗೆ ನೋಡಿದರೆ; ಎಲ್ಲವೂ ಪೂರ್ವಧ್ಯಾನಿತ ಸೃಷ್ಟಿಯೇ ಆಗಿರುತ್ತವೆ. ದೊಡ್ಡದಾಗಿರಲಿ, ಚಿಕ್ಕದಾಗಿರಲಿ 'ಪೂರ್ವಧ್ಯಾನ'ಕ್ಕೆ ಒಳಪಡದೆ ಆಕಾರ ಪಡೆದು ಹೊರಗೆ ಬರಲು ಸಾಧ್ಯವಿಲ್ಲ ಅನ್ನಿಸುತ್ತದೆ. ಹಿಂದೆ ಪ್ರಸ್ತಾಪಿಸಿದಂತೆ ಒಂದು ಕವಿತೆಯ ಶೀರ್ಷಿಕೆಯಿಂದ ಮೊದಲ್ಗೊಂಡು ಕಾವ್ಯದ ರಚನಾ ವಿಧಾನದ ಸಮಯದಲ್ಲೂ; ಕವಿಯ ಧ್ಯಾನಸ್ಥ ಮನಸ್ಥಿತಿಯಿಂದಲೇ ಶಬ್ದಗಳು ಬಂದು ಕೂರಲು ಸಾಧ್ಯವಿರುತ್ತದೆ. ಹಾಗೆ ನೋಡಿದರೆ; ಸೃಜನಶೀಲ ಸೃಷ್ಟಿಯೆಲ್ಲವೂ ಧ್ಯಾನಸ್ಥ ರೂಪಕಗಳು ಅನ್ನಿಸುತ್ತದೆ.

ಜಿ.ಎಸ್.ಎಸ್. ಅವರ ಕಾವ್ಯಸೃಷ್ಟಿಯ ಸಮಯದ ಉದ್ದಕ್ಕೂ 'ನವ್ಯ ಮತ್ತು ನವೋದಯ'ದ ನಡುವೆ ಒಂದು ವಿಧದ ಸಂಘರ್ಷರೂಪದ ಕಾಲಮಾನವದು. ಇದಕ್ಕೆ ಪ್ರತಿಕ್ರಿಯಾತ್ಮಕವಾಗಿಯೂ ತಮ್ಮ ಚಿಂತನಾ ಕ್ರಮವನ್ನು ಹರಿಸಿದ್ದಾರೆ. ಅದರಲ್ಲೂ ಕನ್ನಡ ವಿಭಾಗದ ಮುಖ್ಯಸ್ಥರಾಗಿ, ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ವ್ಯವಸ್ಥೆಮಾಡುತ್ತಿದ್ದ ವಿಚಾರ ಸಂಕಿರಣಗಳು; ಅದು ಯಾವುದು ಎಂಬುದನ್ನು ಆರೋಗ್ಯಪೂರ್ಣವಾಗಿ ವಿವೇಚನೆಗೊಳಪಡಿಸಲು ಪ್ರಯತ್ನಿಸಿದ್ದಾರೆ. ಅದು ಅವರ ಬಹುದೊಡ್ಡ ಕೊಡುಗೆ. ಅವರನ್ನು ಯಾರೋ 'ಸಮನ್ವಯ' ಕವಿ ಎಂದು ಕರೆದಾಗಲೂ ತಲೆಕೆಡಿಸಿಕೊಳ್ಳಲಿಲ್ಲ. ಇದು ಪೂರ್ವಚಿಂತನಾ ಕ್ರಮವಿಲ್ಲದೆ ದಾರಿಹೋಕರ ಮಾತಿನಂತಿದೆ. ಈ ದೃಷ್ಟಿಯಿಂದ ಜಿ.ಎಸ್.ಎಸ್. ಅವರು ಎಲ್ಲೋ ಮೂಲೆಯಲ್ಲಿ ಕೂತು; ಕೇವಲ ಕಾವ್ಯರಚನೆಯಲ್ಲಿ ಕೂತವರಲ್ಲ. ಕಾವ್ಯದ ಬೆಳವಣಿಗೆಯಲ್ಲಿ ಎಲ್ಲ ಚಿಂತನಾಕ್ರಮಗಳಿಗೆ ಆರೋಗ್ಯಪೂರ್ಣ ವೇದಿಕೆಯನ್ನು ನಿರ್ಮಾಣ ಮಾಡಿಕೊಟ್ಟವರು. ದಲಿತ–ಬಂಡಾಯ ಎಂಬ ಎರಡು ತೀವ್ರರೂಪದ ಕಾವ್ಯ ಪ್ರಯೋಗಗಳ ನಡೆಯುತ್ತಿದ್ದ ಸಮಯದಲ್ಲೂ ಅದನ್ನು ಗುಮಾನಿಯಿಂದ ನೋಡಲಿಲ್ಲ. ಬರೆಯಿರಿ, ಪ್ರಯೋಗಕ್ಕೆ ಮುಖಾಮುಖಿಯಾಗಿ ಎಂದು ಪ್ರೋತ್ಸಾಹಿಸಿದವರು. ಯಾಕೆಂದರೆ: ಎಲ್ಲ ಬೆಳೆಗಳು ಸಮೃದ್ಧವಾಗಿ ಬೆಳೆಯಲಿ ಎಂಬುದು ಸದಾಶಯವಾಗಿತ್ತು. ಈ ದೃಷ್ಟಿಯಿಂದ ಜಿ.ಎಸ್.ಎಸ್. ಅವರ ಬಹುಮುಖೀ ಚಿಂತನೆಯ ಜೀರ್ಣಕ್ರಿಯೆ ಅಷ್ಟರಮಟ್ಟಿಗೆ ಸಮಾಧಾನಚಿತ್ತದಿಂದ ಕೂಡಿತ್ತು.

ಕಾವ್ಯದ ರಚನೆಯಲ್ಲಿ ಯಾವಾಗಲೂ ಅವ್ಯಕ್ತ ಸೊಬಗನ್ನು ಕಾಣುತ್ತ ಹೋದವರು. ಇಷ್ಟು ಗಂಭೀರವಾಗಿ ಬರೆಯುತ್ತ ನಿರಂತರತೆಯನ್ನು ಕಾಪಾಡಿಕೊಂಡು ಬರುತ್ತಿರುವಾಗಲೇ; ಕಾವ್ಯರಚನಾ ವಿಧಾನದ ಅನುಸಂಧಾನ ಕುರಿತು ಮಾತಾಡುವಾಗ;

ಎಂದೂ ತಮ್ಮ ಕಾವ್ಯವನ್ನು ಉದಾಹರಿಸುತ್ತಿರಲಿಲ್ಲ. ಬೇರೆಯವರ ಉತ್ತಮ ಕವಿತೆಗಳನ್ನು ಪ್ರಸ್ತಾಪಿಸುತ್ತಲೇ ಅದರ ಹೆಚ್ಚುಗಾರಿಕೆ ಬಗ್ಗೆ ವ್ಯಾಖ್ಯಾನಿಸುತ್ತಿದ್ದರು. ಇದು ಜಿ.ಎಸ್.ಎಸ್. ಅವರ ಬಹುದೊಡ್ಡ ಗುಣವಾಗಿತ್ತು. "ನಮ್ಮನ್ನು ನಾವು ಹೆಚ್ಚು ಪ್ರಮೋಟ್ ಮಾಡಿಕೊಳ್ಳಲು ಹೋಗಬಾರದು" ಎಂದು ಸಾಂದರ್ಭಿಕವಾಗಿ ವ್ಯಕ್ತಪಡಿಸುತ್ತಿದ್ದರು. ಹಾಗೆಯೇ ಹೀಗೆ ಮಾಡುತ್ತ ಹೋದರೆ; ಕವಿಗೆ ಮತ್ತು ಕಾವ್ಯಕ್ಕಿರುವ ಗಾಂಭೀರ್ಯ ನಾಪತ್ತೆಯಾಗಿಬಿಡುತ್ತದೆಂದು ಪ್ರಾಮಾಣಿಕವಾಗಿ ನಂಬಿದ್ದರು. ಈ ದೃಷ್ಟಿಯಿಂದ ತಮ್ಮ ವ್ಯಕ್ತಿತ್ವಕ್ಕೆ ಎಂದೂ ಧಕ್ಕೆ ತಂದುಕೊಳ್ಳಲಿಲ್ಲ. ಅಷ್ಟರ ಮಟ್ಟಿಗೆ ಘನತೆಯನ್ನು ಕಾಪಾಡಿಕೊಂಡಿದ್ದರು. ಹೀಗೆ ಇದ್ದುದರಿಂದಲೇ 'ಕವಿಯ ಮನಸು' ಕವಿತೆಯಲ್ಲಿ:

**"ಪ್ರಕೃತಿಯಂತೆ ಕವಿಯ ಮನಸು**
**ವಿಪುಲರೂಪ ಧಾರಣೆ**
**ಬ್ರಹ್ಮನೆದೆಯ ಕನಸಿನಂತೆ**
**ಕೋಟಿ ಕಲ್ಪ ಗಾಮಿನಿ"**

ಎಂಬುದು ಸಾಕ್ಷಾತ್ಕಾರ ರೂಪದಲ್ಲಿ ಗೋಚರಿಸುವುದು. 'ಬ್ರಹ್ಮನೆದೆಯ ಕನಸಿನಂತೆ' ಎಂಬುದು; ಸೃಷ್ಟಿಕರ್ತನಿಗೂ ಕನಸೆಂಬುದು ಇರುತ್ತದೆ ಎನ್ನುವುದು ಒಂದು ರೂಪಕವಾಗಿ ಇಲ್ಲಿ ಧ್ವನಿಸುತ್ತದೆ ಅನ್ನಿಸುತ್ತದೆ: ಅರಿವಿನ ವಿಸ್ತಾರವು ಶ್ರೀಮಂತವಾಗಿದ್ದುದರಿಂದಲೇ

**"ನಿನ್ನೊಲವಿನಂಬುಧಿಗೆ**
**ನನ್ನೆದೆಯ ಕರೆಯತೊರೆ**
**ಸಂತತವು ಹೊನಲಾಗಿ**
**ಹರಿಯುತಿರಲಿ"**

ಎಂದು 'ಬೇಡಿಕೆ' ಕವಿತೆಯಲ್ಲಿ ವಿನಂತಿಸಿಕೊಳ್ಳುವುದು. ಕವಿಯ ಕಲ್ಪನಾ ವಿಲಾಸ ಮತ್ತು ಅನುಭವವು ಮುಖಾಮುಖಿಯಾದಾಗಲೇ ಅರಿವಿನ ನುಡಿಗಟ್ಟು ಜೀವ ಪಡೆಯುವುದು. ನೋಡಿದ್ದೆಲ್ಲವೂ ಬಾಧಿಸುತ್ತ ಹೋಗುವುದು ಕಾವ್ಯ ಸೃಷ್ಟಿಗೆ. ಇಂಥ ಸಮಯದಲ್ಲಿ ರಚನೆಗಾಗಿ ಕಾಯುವುದೂ ಕೂಡ; ಕೌಶಲ್ಯವಾಗಿ ಪರಿಣಮಿಸಲು ಸಾಧ್ಯ. ಇಲ್ಲಿ 'ಮುಂಬೈ ಜಾತಕ' ದಂಥ, 'ಗೋಡೆ'ಯಂಥ ಎಷ್ಟೋ ಕವಿತೆಗಳು ದೀರ್ಘವಾದ ವ್ಯಾಖ್ಯಾನವನ್ನು ಬಯಸುವಂಥವು. ಅವೆಲ್ಲ ಜಿ.ಎಸ್.ಎಸ್. ಅವರ ಚಿಂತನಾಲೋಕ ಮತ್ತು ಕಲೆಗಾರಿಕೆಯ ಮೂಲಕ ಹುಟ್ಟಿರುವಂಥವು.

ನವೋದಯದ ತುಂಬ ಸಮೃದ್ಧತೆಯಿಂದ ಬೆಳದಿರುವ ಬಹುದೊಡ್ಡ ಕವಿ. ಈ ನೆಲೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಡಾ॥ ಹೆಚ್.ಎಸ್.ಆರ್. ನರಹಳ್ಳಿ ಬಾಲಾಸುಬ್ರಹ್ಮಣ್ಯರಂಥ ಗಂಭೀರ ವಿಮರ್ಶಕರು ಹಾಗೂ ಹೆಚ್. ಎಸ್. ವೆಂಕಟೇಶಮೂರ್ತಿಯಂಥ ಮಹತ್ವಪೂರ್ಣ ಕವಿ ಸಾಕಷ್ಟು ಚರ್ಚಿಸಿದ್ದಾರೆ. ಇದನ್ನೇ ಮುಂದುವರೆಸಿ ಹೇಳಬೇಕೆಂದರೆ: ಈ ನವೋದಯದ ಶ್ರೀಮಂತ ಕವಿಯ 'ಕಾವ್ಯಮಾರ್ಗ'ವನ್ನು ಹತ್ತಾರು ದಿಕ್ಕುಗಳಿಂದ ವಿಶ್ಲೇಷಿಸಲು ಸಾಧ್ಯ. ಅದನ್ನು ತೀವ್ರವಾಗಿ ಬಯಸುವ ಕಾವ್ಯದ ಅಂತಃಶಕ್ತಿ ಇಲ್ಲಿಯ ಒಟ್ಟು ಕವಿತೆಗಳಲ್ಲಿ ಇದೆಯೆಂಬುದರಲ್ಲಿ ಎರಡನೆಯ ಮಾತಿಲ್ಲ. ಯಾಕೆಂದರೆ ಕಾವ್ಯದ ಉತ್ಕಟ ತೀವ್ರತೆ ನಮ್ಮನ್ನು ಸಂವಾದದ ಒಳಗೆ ಸೆಳೆದುಕೊಳ್ಳುತ್ತದೆ. ಇದು ನನ್ನ ಸುಖಾನುಭವದ ಮಾತು. ಅವು ಮತ್ತೆ ಮತ್ತೆ ಮರು ಓದಿನೆಡೆಗೆ ಕರೆದೊಯ್ಯುತ್ತಲೇ ಇರುವಂಥವು.

# ಜಿ.ಎಸ್.ಎಸ್. ಅವರ ನೋಟದ ವೈವಿಧ್ಯತೆ

"ಕಣ್ಣೆದುರು ಕಾಣುವ ನೋಟಗಳೆಲ್ಲದಕ್ಕೂ ನಮ್ಮ ಮನಸ್ಸಿನ ಮೇಲೆ ಪರಿಣಾಮ ಮಾಡುವ ಬಗೆ ಬಗೆಯ ರೂಪಗಳಿವೆ. ಪ್ರಕೃತಿ ಒಂದು ಅದ್ಭುತ ವರ್ಣಶಿಲ್ಪಿ. ಅದು ಆಕೃತಿಗಳನ್ನು ರೂಪಿಸುವುದು ರೇಖೆಗಳಿಂದ, ಬಣ್ಣಗಳಿಂದ, ಆಗಸದ ನೀಲಿಯ ಬಾಗು; ಚಂದ್ರಬಿಂಬದ ದುಂಡನೆಯ ನುಣುಪು ತೆರೆಗಳ ಏರಿಳಿತದಲ್ಲಿ ಕಾಣುವ ವಂಕು; ಗಿಡಬಳ್ಳಿಗಳ ಬಗೆಬಗೆಯ ಬಳುಕು; ಮುಗಿಲಲ್ಲಿ ಕ್ಷಣಕ್ಷಣಕ್ಕೂ ಬೇರೆ ಬೇರೆ ರೂಪವನ್ನು ತಾಳುತ್ತ ಚಲಿಸುವ ಮೇಘಮಾಲೆ, ಇವುಗಳೆಲ್ಲವೂ ನಮ್ಮಲ್ಲಿ ಅವುಗಳನ್ನು ಕುರಿತು ಒಂದು ಬಗೆಯ ರೂಪರುಚಿಯನ್ನುಂಟುಮಾಡಿವೆ. ಕಣ್ಣೆದುರು ಕಾಣುವ ವಿವಿದ ರೂಪಗಳಲ್ಲಿ ಹಲವು ನಮಗೆ ಪ್ರಿಯವಾಗುತ್ತವೆ; ಹಲವು ನಮಗೆ ಅಪ್ರಿಯವಾಗುತ್ತವೆ; ಹಲವು ಸುಖವನ್ನು ಉಲ್ಲಾಸವನ್ನೂ ಉಂಟುಮಾಡುತ್ತವೆ; ಹಲವು ಅಸುಖವನ್ನು, ಬೇಸರವನ್ನೂ ಉಂಟುಮಾಡುತ್ತವೆ. ಈ ಕಾರಣದಿಂದ ನಾವು ಇದು ಸುಂದರವಾಗಿದೆ, ಇದು ಸುಂದರವಾಗಿಲ್ಲ ಎನ್ನುತ್ತೇವೆ. ಒಂದು ದೇಶದ ಜನಕ್ಕೆ ಸುಂದರವೆಂದು ತೋರುವ ಹಲವು ವಸ್ತುಗಳು ಮತ್ತೊಂದು ದೇಶದವರಿಗೆ ವಿಕೃತವೆಂಬಂತೆ ತೋರಬಹುದು. ಅಷ್ಟೇ ಅಲ್ಲ, ಒಬ್ಬ ವ್ಯಕ್ತಿಗೇ ಒಂದು ಸಂದರ್ಭದಲ್ಲಿ ಸುಂದರವೆಂದು ತೋರಿದುದು ಬೇರೊಂದು ಹೊತ್ತಿನಲ್ಲಿ ಅದೇ ವಸ್ತು ಸುಂದರವಲ್ಲವೆಂಬಂತೆ ತೋರಬಹುದು."

**–ಸೌಂದರ್ಯ ಸಮೀಕ್ಷೆ ಕೃತಿಯಿಂದ**

ಜಿ.ಎಸ್.ಎಸ್. ಅವರು ಕಾವ್ಯಾನುಭವದ ರಚನೆಯ ದೃಷ್ಟಿಯಿಂದ ಬಹುದೊಡ್ಡ ಕವಿಯೆಂಬುದರಲ್ಲಿ ಎರಡನೆಯ ಮಾತಿಲ್ಲ. ಸ್ವಲ್ಪ ಹೆಚ್ಚುಕಮ್ಮಿ ಅಷ್ಟೇ ತೀವ್ರತೆಯಿಂದ ಕಾವ್ಯ ಮೀಮಾಂಸೆ ಬಗೆಗೂ ಅಧ್ಯಯನ ಶೀಲತೆಯನ್ನು ಬೆಳೆಸಿಕೊಂಡರು. ಅದಕ್ಕೆ ಸಾಕ್ಷಿಯೆಂಬಂತೆ 'ಸೌಂದರ್ಯ ಸಮೀಕ್ಷೆ ಮತ್ತು ಕಾವ್ಯಾರ್ಥ ಚಿಂತನ' ಅತ್ಯಂತ ಮಹತ್ವಪೂರ್ಣ ಗದ್ಯದ ಬರವಣಿಗೆ. 'ಸೌಂದರ್ಯ ಸಮಿಾಕ್ಷೆ'ಯು ಅವರ ಪಿ.ಎಚ್.ಡಿ. ಮಹಾಪ್ರಬಂಧವೂ ಆಗಿದೆ. ಆ ಕಾಲಕ್ಕೆ ಕುವೆಂಪು ಅವರ ಮಾರ್ಗದರ್ಶನದಲ್ಲಿ ಆಕಾರ ಪಡೆದಿರುವಂಥದ್ದು. ಈ ಸುಮಾರಿಗೆ ಮೂರು ಕವನ ಸಂಕಲನಗಳು ಪ್ರಕಟವಾಗಿದ್ದುವು. ಅಂದರೆ, ೧೯೫೫ ರಿಂದ ೫೭ರ ವರೆಗೆ ಅಧ್ಯಯನಶೀಲ ರಚನೆ. ಕಾವ್ಯ ರಚನೆಯ ಉತ್ತುಂಗತೆಯನ್ನು ಅರಿಯಲು ಮಾನಸಿಕವಾಗಿ ಪುಟಿಯುತ್ತಿದ್ದ ದಿನಗಳು. ದೈಹಿಕವಾಗಿಯೂ ಲವಲವಿಕೆಯನ್ನು

ತುಂಬಿಕೊಂಡಿದ್ದವರು. ಇಂಥ ಸಮಯದಲ್ಲಿ 'ಸೌಂದರ್ಯ'ವನ್ನು ಕುರಿತಂತೆ ಸಮೀಕ್ಷೆಗೆ ಒಳಪಡಿಸಿಕೊಳ್ಳುವುದು ಅಷ್ಟು ಸುಲಭದ ಕೆಲಸವಲ್ಲ. ಬಹುಪಾಲು ಮಂದಿ ಇಂಥ ವಿಷಯದ ಬಗ್ಗೆ ಅಧ್ಯಯನ ಕಷ್ಟಕರವಾದದ್ದಲ್ಲವೇ? ಎಂದು ಪ್ರಶ್ನಿಸುವಂಥ ವಾತಾವರಣದಲ್ಲಿದ್ದಾಗ; ಯಾಕಾಗಬಾರದು ಎಂದು ಮುಂದುವರೆದವರು. ಪೂರ್ವ ಸಿದ್ಧತೆಗೆ ಹೊರಟೆಂತಲ್ಲ; ಅದರ ವ್ಯಾಪ್ತಿ ವಿಸ್ತಾರವಾಗಿ ತೆರೆದುಕೊಳ್ಳುತ್ತ ಹೋಯಿತು. ಹಾಗೆ ನೋಡಿದರೆ ಅವರ ಮಾತುಗಳಲ್ಲೇ ಹೇಳಬೇಕಾದರೆ: "ಮೊದಲು ಹೊರಟದ್ದು ಕನ್ನಡ ಕಾವ್ಯದಲ್ಲಿ ಸೌಂದರ್ಯ ಸಮೀಕ್ಷೆಗಾಗಿ. ನಮ್ಮ ಕನ್ನಡ ಕವಿಗಳ ಸೌಂದರ್ಯ ಪ್ರಜ್ಞೆಯ ವಿವಿಧ ಅಭಿವ್ಯಕ್ತಿಗಳೇನು ಎನ್ನುವುದನ್ನು ವಿವೇಚಿಸುವ ಉದ್ದೇಶದಿಂದ ಹೊರಟ ನನ್ನನ್ನು ಈ ಸಂಗತಿ, ನಾನು ಅಧ್ಯಯನಕ್ಕೆ ಸೇರಿದವನಾದ್ದರಿಂದ ಪಾಶ್ಚಾತ್ಯ ಸೌಂದರ್ಯ ವಿಚಾರದ ಕಡೆಗೆ, ಭಾರತೀಯನಾಗಿರುವುದರಿಂದ ನಮ್ಮ ಕನ್ನಡ ಕವಿಗಳ ಪರಂಪರೆಯಾದ ಇಡೀ ಭಾರತೀಯ ಸೌಂದರ್ಯ ವಿಚಾರಗಳ ಕಡೆಗೆ ಎಳೆದುಕೊಂಡು ಹೋಯಿತು. ಹೀಗಾಗಿ ಇಲ್ಲಿನ ವಿಚಾರದಲ್ಲಿ ಪೂರ್ವ–ಪಶ್ಚಿಮ, ಪ್ರಾಚೀನ–ನವೀನ ಆಲೋಚನಾ ಪರಂಪರೆಯನ್ನು ಕಾಣಬಹುದು." ಎಂದು ಮಾನಸಿಕವಾಗಿ ನಮಗೆ ತೆರೆದುಕೊಳ್ಳುವರು. ಮುಂದೆ ಇಂಥ ಮಹತ್ವಪೂರ್ಣ ಅಧ್ಯಯನಶೀಲ ಪ್ರಬಂಧಕ್ಕೆ ೧೯೬೦ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ದೊರಕುವುದು. ನಂತರ ಐದು ವರ್ಷಗಳಾದ ಮೇಲೆ ಕೃತಿಯ ರೂಪದಲ್ಲಿ ಪ್ರಕಟವಾಗುವುದು.

ಕನ್ನಡ ಸಾಹಿತ್ಯ ಲೋಕದ ವಿದ್ವಾಂಸರು, ಸಂಶೋಧಕರು ಹಾಗೂ ಸಾಮಾನ್ಯ ಓದುಗರು ಇದನ್ನು ಪ್ರೀತಿಯಿಂದ ಓದುತ್ತ ಹೋದರು. ಇಂದಿಗೂ ಎಲ್ಲ ಸಾಹಿತ್ಯ ವಿದ್ಯಾರ್ಥಿಗಳು ಕೈಗೆತ್ತಿಗೊಳ್ಳದೇ ಇರುವುದಿಲ್ಲ. ಆದ್ದರಿಂದಲೇ ಸತತವಾಗಿ ಹತ್ತು ಮುದ್ರಣಗಳನ್ನು ಕಾಣಲು ಸಾಧ್ಯವಾಗಿದೆಯೆಂದರೆ; ಅದರ ಮೌಲಿಕತೆ ಎಷ್ಟೆಂಬುದು ಗೊತ್ತಾಗುತ್ತದೆ. ಈ ನೆಲೆಯಲ್ಲಿ ಮುಂದೆ ಯೋಚಿಸುವಂಥವರಿಗೆ; ಒಂದು ಅಪೂರ್ವ ಆಕರಗ್ರಂಥವಾಗಿಯೂ ಇರುವಂತಾಗಿದೆ. ಇಲ್ಲಿಯ 'ಗ್ರಂಥಋಣ' ಪಟ್ಟಿಯೂ ಸವಿಸ್ತಾರವಾಗಿಯೂ ಇರುವುದರಿಂದ; ಗಂಭೀರ ಅಧ್ಯಯನಶೀಲರಿಗೆ ಒಂದು ಮಾರ್ಗ ಸೂಚಿಯಾಗಿಯೂ ಇದೆ. ಅದಕ್ಕೂ ಮೀರಿ ಸುಮ್ಮನೆ ಓದಲು ಕೂತಾಗ; ಖುಷಿಯಿಂದ ಓದಬಹುದಾದದ್ದು. ಆದ್ದರಿಂದ ನಾನಾ ದೃಷ್ಟಿಕೋನಗಳಿಂದಲೂ ವಿವಿಧ ರೀತಿಯ ಸಮೀಕ್ಷೆಗೆ ಒಳಪಡಿಸಲು ಸಾಧ್ಯವಿದೆ. ಈ ದೃಷ್ಟಿಯಿಂದ ಇಲ್ಲಿಯ ಎಷ್ಟೋ ಅರ್ಥಪೂರ್ಣವಾಕ್ಯಗಳನ್ನು ಮತ್ತು ಪ್ಯಾರಾಗಳನ್ನು ಉಲ್ಲೇಖಿಸುತ್ತಲೇ ಹೋಗಬಹುದು. ಅಷ್ಟರಮಟ್ಟಿನ

ಘನತೆಯನ್ನು ಇದು ಪಡೆದಿದೆ. ಸೌಂದರ್ಯ ಮೀಮಾಂಸೆಯ ಪೂರ್ವಸೂರಿ ಲಾಕ್ಷಣಿಕರು ನಮ್ಮ ಚಿಂತನೆಗೆ ಮುಖಾಮುಖಿಯಾಗುವರು. ಹಾಗೆಯೇ ಒಂದು ಸಾಹಿತ್ಯ ಪರಂಪರೆ; ಕಾವ್ಯಮೀಮಾಂಸೆಯನ್ನು ಒಳಗೊಂಡಂತೆ ಇಷ್ಟೊಂದು ಆಯಾಮಗಳಲ್ಲಿ ತೆರೆದುಕೊಳ್ಳುವುದಲ್ಲ ಎಂಬ ಓದಿನ ಸಂಭ್ರಮವನ್ನು ವಿಸ್ತರಿಸಲು ಅನುವು ಮಾಡಿಕೊಡುತ್ತದೆ. ಇದರಿಂದ ಜಿ.ಎಸ್.ಎಸ್. ಅವರನ್ನು ಕುರಿತಂತೆ ಕೃತಜ್ಞತಾ ಭಾವ ಆವರಿಸಿಕೊಳ್ಳುತ್ತದೆ. ನಾನೂರು ಮೂವತ್ತು ಪುಟಗಳ ಈ ಮಾರ್ಮಿಕ ಕೃತಿಯ ಎಷ್ಟೋ ಭಾಗಗಳು ನಮ್ಮ ವಿವೇಚನೆಗೆ ಕಾವುಕೊಡುತ್ತಲೇ ಹೋಗುವುದು. ಅದು ನಾನಾ ಮುಖಗಳಲ್ಲಿ ನೋಡುವಂಥದ್ದು. ಅವರದೇ ಮಾತನ್ನು ಇಲ್ಲಿ ದಾಖಲಿಸಬಹುದು ಅನ್ನಿಸುತ್ತದೆ: "ನಮ್ಮಲ್ಲಿ 'ಸುಂದರ' ಎಂಬ ಪದವನ್ನು ಕುರಿತು ಆ ಪದ ಹೇಗೆ ವಿವರಣೆಗೆ ದೂರವಾದದು ಎಂಬುದನ್ನು ಸೂಚಿಸಿರುವರೋ, ಅಂತೆಯೇ ಪಾಶ್ಚಾತ್ಯರಲ್ಲಿಯೂ Beauty ಎನ್ನುವ ಪದವನ್ನು ಎಲ್ಲ ಅನುಭವಗಳಲ್ಲಿಯೂ ಬಳಸುವುದರಿಂದ ಉಂಟಾದ ಗೊಂದಲವನ್ನು ಪರಿಶೀಲಿಸಿ ಕಡೆಗೆ ಅದು ಸೂತ್ರಾತೀತ ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಪಾಶ್ಚಾತ್ಯರಲ್ಲಿ ಸೌಂದರ್ಯಾನುಭವವನ್ನು ಸೂಚಿಸಲು Beauty ಎಂಬ ಪದದ ಬದಲು ಸಮರ್ಥವಾದ ಮತ್ತು ಸಮರ್ಪಕವಾದ ಬೇರೊಂದು ಪದವಿಲ್ಲದಿದ್ದುದ ರಿಂದ ಅವರಲ್ಲಿ ಇಷ್ಟೆಲ್ಲ ಚರ್ಚೆ ನಡೆಯಬೇಕಾಯಿತು. ನಮ್ಮಲ್ಲಿ ಕಲಾ ಅನುಭವವನ್ನು ವಿಶಿಷ್ಟವಾಗಿ ಹೇಳಲು 'ರಸಾನುಭವ'ವೆಂಬ ಪದವಿರುವುದ ರಿಂದ, 'ಸೌಂದರ್ಯ' 'ಸೌಂದರ್ಯಾನುಭವ' ಎಂಬ ಪದಗಳನ್ನು ಬಳಸಬೇಕೇ, ಬೇಡವೇ ಎನ್ನುವ ಬಗ್ಗೆ ಯಾವ ಚರ್ಚೆಯೂ ನಡೆದಂತೆ ತೋರುವುದಿಲ್ಲ." ಎಂಬ ಆಪ್ತವಾದ ಷರಾ ಎಳೆಯುತ್ತಾರೆ. ಇದು ಅವರ ಗಂಭೀರತೆಯನ್ನು ವ್ಯಕ್ತಪಡಿಸುತ್ತದೆ.

ಈ ಕೃತಿಯನ್ನು ಓದುತ್ತ ಹೋದಂತೆಲ್ಲ ನಮ್ಮ ಕಾವ್ಯಸಂದರ್ಭದ ಅಗಣಿತ ಮಾರ್ಮಿಕ ಸಂಗತಿಗಳೆಲ್ಲ ನಮಗೆ ಎದುರು ಬದುರು ಆಗುವಂತೆ ಮಾಡುವರು. ಆಗ ನಮ್ಮ ಕಾವ್ಯಲೋಕದಲ್ಲಿ ಹೀಗೆಲ್ಲ ಅರ್ಥಪೂರ್ಣ ಪ್ರತಿಮಾಲೋಕಗಳು ತೆರೆದುಕೊಳ್ಳುತ್ತದಲ್ಲ ಎಂಬ ಅಚ್ಚರಿಯ ಜೊತೆಗೆ; ಒಂದು ರೀತಿಯ ಮಾನಸಿಕ ರಸಾನುಭವಕ್ಕೆ ಚೇತೋಹಾರಿಯಾಗುತ್ತದೆ. ಕೆಲವು ಹಳಗನ್ನಡ ಕಾವ್ಯಗಳಲ್ಲಿಯ ಉಲ್ಲೇಖಗಳಂತೂ ಮನನೀಯವಾಗಿವೆ. ಮತ್ತು ಅವುಗಳನ್ನು ಸೌಂದರ್ಯ ಮೀಮಾಂಸೆಯ ಪರಿಧಿಯಲ್ಲಿ ಅಪೂರ್ವ ನೋಟವನ್ನು 'ಸ್ಥಾಯಿ' ಗೊಳಿಸಿಬಿಡುತ್ತಾರೆಂಬುದೇ ಈ ದೀರ್ಘ ಅಧ್ಯಯನಕ್ಕೆ 'ಕಳಶಪ್ರಾಯ'ವಾಗಿ

ಸೌಂದರ್ಯ ಮೀಮಾಂಸೆ ಎಂಬುದು ಗುನುಗುನಿಸುವಂತೆ ಮಾಡುತ್ತದೆ. ಈ ದೃಷ್ಟಿಯಿಂದ ಆದಿಕವಿ ಪಂಪನ (ಅಗ್ರ ಕವಿಯೆಂದೂ ವ್ಯಾಖ್ಯಾನಿಸುತ್ತಾರೆ) ಆದಿಪುರಾಣದಲ್ಲಿ ಬರುವ 'ನೀಲಾಂಜನೆ ನೃತ್ಯ'ವನ್ನು ತಮ್ಮ ಒಳನೋಟವನ್ನು ವಿಸ್ತರಿಸಲು ಬಳಸಿಕೊಳ್ಳುವರು. ಹಾಗೆಯೇ ಅದನ್ನು ಉನ್ಮೇಷಗೊಳಿಸುವ ಪರಿಯೂ ಕೂಡ ನಮ್ಮ ಕಾಲಕ್ಕೆ ಇಳಿದು ಬಂದು ನಾವಿನ್ಯತೆಯನ್ನು ಪಡೆದುಬಿಡುತ್ತದೆ. ಒಮ್ಮೊಮ್ಮೆ ಇಂಥ ಮಹೋನ್ನತ ವ್ಯಾಖ್ಯಾನವನ್ನು ಕುರಿತು ಚಿಂತಿಸುವಾಗ; ಧುತ್ತನೆ ಅವರು 'ಕಾವ್ಯಮೀಮಾಂಸೆ, ಪಾಶ್ಚಾತ್ಯ ಸಾಹಿತ್ಯ ಮೀಮಾಂಸೆ'ಯ ಬಗೆಗೆ ಕುವೆಂಪು ಅವರು ಮನದುಂಬಿ ಪಾಠಮಾಡುತ್ತಿದ್ದ ವೈಖರಿಯನ್ನು ಕುರಿತು ಜಿ.ಎಸ್.ಎಸ್. ಅವರು ಹೇಳುತ್ತಿದ್ದ ಅಮೋಘ ಸಂದರ್ಭಗಳೆಲ್ಲ ನೆನಪಿಗೆ ಬರುತ್ತವೆ. ಜೊತೆಗೆ ಇನ್ನೊಬ್ಬರು ಮಹಾನ್ ಪ್ರಾಧ್ಯಾಪಕರಾದ ಪ್ರೊ.ಜಿ.ಎಸ್. ಸಿದ್ಧಲಿಂಗಯ್ಯನವರಂತೂ ಅವ್ಯಕ್ತ ರೋಮಾಂಚನದಿಂದಲೇ ಕುವೆಂಪು ಅವರು ಪಾಠ ಮಾಡುತ್ತಿದ್ದ ಉದ್ದಾಮತೆಯ ಬಗ್ಗೆ ಸ್ಮರಣೀಯ ಚಿತ್ರಣವನ್ನು ಸಾಕಷ್ಟುಬಾರಿ ತೆರೆದಿಟ್ಟ ಕಾವ್ಯಲೋಕವೂ ಗುಣಾತ್ಮಕತೆಯ ಮೊತ್ತವನ್ನೇ ತುಂಬಿಕೊಂಡಿತ್ತು. ಈ ಹಿನ್ನೆಲೆಯಲ್ಲಿ ಜಿ.ಎಸ್.ಎಸ್. ಅವರು ನನ್ನಂಥವರಿಗೆ ನಾಲ್ಕು ದಶಕಗಳಿಗೂ ಮೇಲ್ಪಟ್ಟು ಗುರುವಿನ ಪೀಠದಲ್ಲಿ 'ರೂಪಕ'ದಂತೆ ಇದ್ದು; ಕಾವ್ಯ, ಕಾವ್ಯಮೀಮಾಂಸೆ ಮತ್ತು ಜೀವನಮೀಮಾಂಸೆಗೆ ಸಂಬಂಧಿಸಿದಂತೆ ಅರಿವಿನ ಲೋಕ ಸದಾ ವಿಸ್ತಾರಗೊಂಡಿರುವಂತೆ ನೋಡಿಕೊಂಡವರು. ಹಿಂದೆಯೂ ಪ್ರಸ್ತಾಪಿಸಿದಂತೆ; ಎಂದೂ ಹೀಗೆ ಮಾಡಿ ಎಂದು ಹೇಳಿದವರಲ್ಲ. ಆದರೆ ಒಂದು ಅಮೂಲ್ಯವಾದ ದೀಪದ ಕಂಬವಾಗಿ ಇದ್ದು ಬಿಟ್ಟಿದ್ದರು. ಅದರ ಮೂಲಕ ಅವರನ್ನು ನಾನಾ ವಿಧದಲ್ಲಿ ನೋಡಿದವರಿದ್ದಾರೆ. ಅವರಲ್ಲಿ ಬಹುಪಾಲು ಮಂದಿ ಕಾವ್ಯನುಸಂಧಾನವನ್ನು ಅನುಭವಿಸಿದವರು.

ಒಂದು ದೃಷ್ಟಿಯಿಂದ 'ಸೌಂದರ್ಯ ಸಮೀಕ್ಷೆ'ಯ ಮುಂದುವರಿದ ಭಾಗವೆನ್ನುವಂತೆ 'ಕಾವ್ಯಾರ್ಥ ಚಿಂತನ' ಕೃತಿಯು ಎಷ್ಟೋ ಬಾಗಿಲುಗಳನ್ನು ತೆರೆದು ಒಳಗೆ ಪ್ರವೇಶಿಸುವಂತೆ ಮಾಡುತ್ತದೆ. 'ಸೌಂದರ್ಯ ಸಮೀಕ್ಷೆ' ಪ್ರಕಟವಾದ ಇಪ್ಪತ್ಮೂರು ವರ್ಷಗಳ ನಂತರ ಬಂದಿರುವಂಥದ್ದು. ಈ ಕೃತಿಯೂ ಎಷ್ಟೋ ಓದುಗರನ್ನು ತಲುಪಿರುವಂಥದ್ದು. ಅದಕ್ಕೆ ಸಾಕ್ಷಿಯೆಂಬಂತೆ ಇದೂ ಕೂಡ ಹತ್ತು ಮುದ್ರಣಗಳನ್ನು ಕಂಡಿರುವಂಥದ್ದು. ಹಾಗೆ ನೋಡಿದರೆ; ನನ್ನ ಅರಿವಿನ ಮಟ್ಟಿಗೆ ಈ ಕೃತಿಯು ಹೆಚ್ಚು ಪರಿಪಕ್ವತೆಯಿಂದ ಕೂಡಿರುವುದು ಅನ್ನಿಸಿದೆ. ಒಂದು ದೃಷ್ಟಿಯಿಂದ ಹೋಲಿಕೆಯೆಂಬುದು ಅನಗತ್ಯವಾಗಿದ್ದರೂ ಒಬ್ಬ ದೊಡ್ಡ

ಚಿಂತಕನ ಮನಸ್ಥಿತಿಯು ಕಾಲದ ಜೊತೆಗೆಯೇ ಬೆಳೆಯುತ್ತ ಹೋಗಿರುತ್ತದೆ. ಯಾಕೆಂದರೆ, ಎಲ್ಲವನ್ನು ಹಿಂದಿರುಗಿ ನೋಡುತ್ತ ಅವಲೋಕಿಸಿಕೊಳ್ಳುವ ಕ್ರಮವೇ ಗಂಭೀರ ಚಿಂತಕನೊಬ್ಬನ ದಾರಿದೀಪವಾಗಿರುತ್ತದೆ. ಇಲ್ಲಿಯ ಒಟ್ಟು ಹದಿಮೂರು ಅಧ್ಯಾಯಗಳು ಪ್ರತಿಭೆ, ಸ್ಫೂರ್ತಿ, ಕಾವ್ಯಸ್ವರೂಪ, ಭಾರತೀಯ ಕಾವ್ಯ ಮೀಮಾಂಸೆಯಲ್ಲಿ ಸಾಹಿತ್ಯ ವಿಮರ್ಶೆ ಮುಂತಾದುವು ದೀರ್ಘ ಅವಲೋಕನಗಳಿಂದ ಕೂಡಿರುವಂಥದ್ದು. ಸಾಕಷ್ಟು ಪಾಶ್ಚಿಮಾತ್ಯ ಪ್ರಮುಖ ಚಿಂತಕರ ಮಾತನ್ನು ಉಲ್ಲೇಖಿಸುತ್ತಲೇ ವ್ಯಾಖ್ಯಾನಕ್ಕೆ ತೆರೆದುಕೊಂಡಿರುವಂಥದ್ದು. ಈ ಕೃತಿಯ ಉದ್ದಕ್ಕೂ ಉಲ್ಲೇಖಿಸಿರುವ ಸಂಗತಿಗಳನ್ನೇ ಪ್ರತ್ಯೇಕಪಡಿಸಿದರೂ; ಒಂದು ಪುಟ್ಟ ಕೃತಿಯಾಗಲು ಸಾಧ್ಯ. ಆದರೆ ಇಲ್ಲಿ ಜಿ.ಎಸ್.ಎಸ್. ಅಂಥವರು ಸ್ಪಂದಿಸುತ್ತ ಹೋಗಿರುವ ಕ್ರಮವೇ ನಮ್ಮನ್ನು ಅರ್ಥಾತ್ ಓದುಗರನ್ನು ಒಳಗೆ ಬಿಟ್ಟುಕೊಳ್ಳುತ್ತದೆ. ಶತಮಾನಗಳಿಂದ ಸಾಹಿತ್ಯವು ಎಷ್ಟು ಸಮೃದ್ಧಿಯಾಗಿ ಬೆಳೆದಿದೆಯೋ; ಅಷ್ಟೇ ಅದನ್ನೆಲ್ಲ ಕುರಿತು ಚರ್ಚಿಸುತ್ತ, ವ್ಯಾಖ್ಯಾನಿಸುತ್ತ ಬಂದು ಮಿಮಾಂಸಕರ ವ್ಯಾಪಕತೆಯೂ ಅಷ್ಟೇ ಆಳ ಮತ್ತು ಗಂಭೀರವಾಗಿದೆಯೆನ್ನುವ ಕಾರಣಕ್ಕಾಗಿಯೇ; ಚಿಂತನಾ ಸ್ಕೂಲುಗಳು ಕ್ರಿಯಾಶೀಲವಾಗಿರುವುದು.

ಇಲ್ಲಿ ಮುಖ್ಯವಾಗಿ ನಾವು ಗಮನಿಸಬೇಕಾದದ್ದು; ಜಿ.ಎಸ್.ಎಸ್. ಅವರು ಬದುಕಿನುದ್ದಕ್ಕೂ ಅಧ್ಯಯನಶೀಲತೆಗೆ ಕೊಟ್ಟಿರುವ ಮಹತ್ವ. ಹಿಂದು ಮುಂದು ನೋಡದೆ ಮಾತು ಹೊರಡುವುದಿಲ್ಲ; ಎಂದು ಗಂಭೀರವಾಗಿ ಉದಹರಿಸುತ್ತೇವೋ; ಅದು ಜಿ.ಎಸ್.ಎಸ್. ಅವರ ವಿಷಯದಲ್ಲಿ ವ್ಯಾಪಕತೆಯನ್ನು ಕಂಡುಕೊಂಡಿದೆ. ಆದ್ದರಿಂದಲೇ ಓದಿಗೆ ಒಂದು ವಿಧದ ಉಲ್ಲಾಸವು ಆವರಿಸಿಕೊಂಡುಬಿಡುತ್ತದೆ. ಈ ದೃಷ್ಟಿಯಿಂದ ಈ ಸಾಲುಗಳನ್ನು ಉಲ್ಲೇಖಿಸಲು ಬಯಸುವೆ: "ಲೋಕದಲ್ಲಿ ಇರತಕ್ಕಂಥದ್ದನ್ನು ಕವಿ ಕಲ್ಪನೆ ಕೊಂಚಮಟ್ಟಿಗೆ ಸ್ಥಿತ್ಯಂತರಗೊಳಿಸುವುದರ ಮೂಲಕವೋ, ವಿಪರ್ಯಾಸಗೊಳಿಸುವುದರ ಮೂಲಕವೋ ನಿರ್ಮಿತವಾದ 'ಕವಿ ಸಮಯ'ಗಳಿಗಿಂತ, 'ಅಸದಾಖ್ಯಾತಿ' ಎನಿಸಿಕೊಳ್ಳುವ ಅಥವಾ ಲೋಕದಲ್ಲಿ ಇಲ್ಲದ್ದು ಇರುವುದೆಂಬಂತೆ ಹೇಳಿದ್ದರ ವರ್ಗಕ್ಕೆ ಸೇರುವ ಕವಿಸಮಯಗಳು ಹೆಚ್ಚು ಕಾಲ್ಪನಿಕವೂ ಸಾಂಕೇತಿಕವೂ ಆಗಿವೆ ಎಂಬುದು ಗಮನಿಸಬೇಕಾದ ಸಂಗತಿ. ಚಕೋರ, ಚಂದ್ರಕಾಂತ ಇತ್ಯಾದಿಗಳು ಮೊದಲಸಲ ಕಾವ್ಯದಲ್ಲಿ ಅವುಗಳನ್ನು ಸಂಧಿಸುವ ಓದುಗನಿಗೆ ಅಪರಿಚಿತವೂ, ಅರ್ಥವಿವರಣೆಯನ್ನು ನಿರೀಕ್ಷಿಸತಕ್ಕವೂ ಆಗುವಂತೆ, ವಸಂತದಲ್ಲೆ ಕೋಗಿಲೆ ಕೂಗುವುದೆಂಬ ಸಂಗತಿಯಾಗಲಿ, ಸಮುದ್ರದಲ್ಲಿಯೇ ತಿಮಿಂಗಲಗಳಿವೆ ಎನ್ನುವ ಸಂಗತಿಯಾಗಲಿ ಅಷ್ಟರಮಟ್ಟಿನ ವಿವರಣೆಯನ್ನು ನಿರೀಕ್ಷಿಸುವುದಿಲ್ಲ. ಆದಕಾರಣ ಕವಿಸಮಯಗಳಲ್ಲಿ 'ಅಸದಾಖ್ಯಾತಿ', ಎನಿಸಿಕೊಳ್ಳತಕ್ಕವೆ ಮೊದಲು ಒಂದು

ಸಲ ಅವುಗಳ ಪರಂಪರಾಗತವಾದ ಅರ್ಥಕೋಶದ ಪರಿಚಯವಾಗುವ ತನಕ ಓದುಗನಿಗೆ ಅಪರಿಚಿತವಾಗುವಂತೆ ತೋರಬಹುದು. ಒಮ್ಮೆ ಅವು ಪರಿಚಿತವಾಗಿ ತಮ್ಮ ಇರುವಿಕೆಯ ಅರ್ಥವನ್ನು ಸ್ಪಷ್ಟಪಡಿಸಿದಮೇಲೆ, ಪರಂಪರಾಗತವಾದ ಈ ಸಾಮಗ್ರಿಗಳನ್ನು ಕವಿಗಳು ಎಷ್ಟರ ಮಟ್ಟಿಗೆ ತಮ್ಮ ಕಾವ್ಯಗಳಲ್ಲಿ ಬಳಸಿಕೊಂಡಿದ್ದಾರೆ ಎನ್ನುವುದರ ಕಡೆಗೆ ಸೂಕ್ಷ್ಮಜ್ಞನಾದ ಓದುಗನ ಗಮನ ಹರಿಯುತ್ತದೆ." ಈ ರೀತಿಯ ಆಪ್ತವಾದದ್ದನ್ನು ಬೇಕಾದಷ್ಟು ಹೊರಗೆ ತೆಗೆದು ಉಲ್ಲೇಖಿಸಬಹುದು. ಯಾಕೆಂದರೆ; ಕೃತಿಯುದ್ದಕ್ಕೂ ಅಂಥದ್ದು ಸಾಪೇಕ್ಷವಾಗಿ ಅರ್ಥಪೂರ್ಣವಾಗಿ ಸಂಯೋಜನೆಗೊಂಡಿರುವುದನ್ನು ಕಾಣಬಹುದು. ಇದರಿಂದ ಜಿ.ಎಸ್.ಎಸ್. ಅವರಲ್ಲಿ ಒಟ್ಟು ಚಿಂತನಾಕ್ರಮದ ಉದ್ದಕ್ಕೂ 'ಕಾಯುವ ಮತ್ತು ಕಾಣಿಸುವ' ಅನನ್ಯತೆ ಎಷ್ಟು ವ್ಯಾಪಕತೆಯಿಂದ ಕೂಡಿದೆ ಅನ್ನಿಸುತ್ತದೆ. ಹಾಗೆಯೇ ಸಮ್ಮೋಹಕತೆಯನ್ನು ಉದ್ದಕ್ಕೂ ಧಾರೆಯೆರೆದುಬಿಡುತ್ತಾರೆ.

ಕಾವ್ಯ ಮತ್ತು ಅದರ ಮುಂದುವರಿದ ಭಾಗವಾದ ಸಾಹಿತ್ಯವನ್ನು ತಾತ್ವಿಕ ನೆಲೆಗಳಿಗೆ ತಂದಿಟ್ಟು; ತಮಗಿಂತ ಹಿಂದಿನ ಪೂರ್ವಸೂರಿಗಳನ್ನು ಗುನುಗುನಿಸುವುದು ಅಷ್ಟು ಸುಲಭದ ಕೆಲಸವಲ್ಲ. ಅದಕ್ಕೆ ಅಭಿರುಚಿ, ಶ್ರದ್ಧೆ, ನಿಷ್ಠೆ ಮತ್ತು ಅಧ್ಯಯನಶೀಲತೆ ಎಲ್ಲವೂ ಏಕಮೇವತೆಯಾಗುವಂತೆ ದೃಷ್ಟಿ ಹರಿಸಿ ಅಂತರ್ಗತಗೊಳಿಸಬೇಕಾಗುತ್ತದೆ. ಅದನ್ನು ಉದ್ದಕ್ಕೂ 'ಕಾವ್ಯಾರ್ಥ ಚಿಂತನ'ದಲ್ಲಿ ನೋಡಬಹುದು. ಮತ್ತೆ ಮತ್ತೆ ಸ್ವಸಂತೋಷದ ನೆಲೆಯಲ್ಲಿ ಒಳಗೆ ಬಿಟ್ಟುಕೊಳ್ಳಬಹುದು. ಅದಕ್ಕೆ ಕಿಂಚಿತ್ತೂ ಊನವಾಗದಂತೆ 'ಸಂಭ್ರಮ'ದ ಪ್ರೇರೇಪಣೆಗಳು ವ್ಯಾಪಕವಾಗಿ ದತ್ತಗೊಂಡಿವೆ ಎಂಬುದೇ ಮೇಲಿನ ಕೃತಿಗಳ ಹೆಚ್ಚುಗಾರಿಕೆ ಇರುವುದು.

ಅವರ ಒಟ್ಟು ಗದ್ಯ ಬರವಣಿಗೆಯಲ್ಲಿರುವ ಕಾವ್ಯಾತ್ಮಕತೆಯು; ಯಾವ ಓದುಗನನ್ನೂ ಹಿಂದಕ್ಕೆ ಸರಿಯುವಂತೆ ಮಾಡುವುದಿಲ್ಲ. ಇದನ್ನು ಸಾಬೀತುಪಡಿಸುವ ರೀತಿಯಲ್ಲಿ ಅವರ 'ಕನ್ನಡ ಸಾಹಿತ್ಯ ಸಮೀಕ್ಷೆ' ಎಂಬ ಕೃತಿಯು ಇದೆ. ಇದು ೧೯೭೬ರಲ್ಲಿ ಪ್ರಕಟಗೊಂಡಿರುವಂಥದ್ದು. ಇಲ್ಲಿಯವರೆವಿಗೂ ಸಾಕಷ್ಟು ಮುದ್ರಣಗಳನ್ನು ಕಂಡಿದೆ. ಅಂದರೆ; ಎಷ್ಟೋ ಓದುಗರನ್ನು ಒಳಗೆ ಸೆಳೆದುಕೊಂಡಿದೆಯೆಂಬುದು ಸಂತಸವನ್ನು ತರುವಂಥದ್ದು. ಕೇವಲ ಸಾಹಿತ್ಯದ ವಿದ್ಯಾರ್ಥಿಗಳಿಗೆ ಮಾತ್ರ ಇಂಥದ್ದು ಸೀಮಿತಗೊಂಡಿರುವುದಿಲ್ಲ. ಬೇರೆ ಬೇರೆ ವಲಯಗಳ ಓದುಗರೂ ಕೂಡ ಚಿಂತನಾಪರ ಕೃತಿಗಳ ಮೊರೆಹೋಗುವವರು ಕಡಿಮೆಯೇನೂ ಇಲ್ಲ. ಒಂದು ಉತ್ತಮ ಕಾದಂಬರಿ, ನಾಟಕ, ಕಥೆ ಓದುವಂಥವರು; ವಿಮರ್ಶೆ ಹಾಗೂ ತಾತ್ವಿಕ ನೆಲೆಗಟ್ಟಿನ ಕೃತಿಗಳಿಗೂ ಹೋಗುವವರು. ಅಭಿರುಚಿಯೆಂಬುದು

ಯಾವಾಗಲೂ ಸೀಮಿತಗೊಂಡಿರುವುದಿಲ್ಲ. ಅದು ಸೋದರಿಸಂಬಂಧಿ ಸಂಗತಿಗಳನ್ನು ವಿಸ್ತರಿಸಿಕೊಳ್ಳುತ್ತಲೇ ಹೋಗುತ್ತಿರುತ್ತದೆ ಅನ್ನಿಸುತ್ತದೆ.

ಮೇಲೆ ಪ್ರಸ್ತಾಪಿಸಿದ ಕೃತಿಯು ಏಳು ಅಧ್ಯಾಯಗಳನ್ನು ಒಳಗೊಂಡಿರುವಂಥದ್ದು. ಇಲ್ಲಿಯೂ ಒಂದು ಸಾಹಿತ್ಯ ಪರಂಪರೆಯನ್ನು ಅವಲೋಕಿಸುವಂತಿದೆ. ಈ ದೃಷ್ಟಿಯಿಂದ 'ಕನ್ನಡ ಸಾಹಿತ್ಯ: ಇಟ್ಟ ಹೆಜ್ಜೆ ತೊಟ್ಟ ರೂಪಗಳು, ಕನ್ನಡ ಸಾಹಿತ್ಯದ ಮುಖ್ಯ ಪ್ರೇರಣೆಗಳು, ಕನ್ನಡ ಕವಿಗಳ ವಸ್ತು, ತಂತ್ರ ಮತ್ತು ಭಾಷಾಪ್ರಜ್ಞೆ, ಕನ್ನಡ ಕವಿಗಳ ಕಾವ್ಯ ಕಲ್ಪನೆ, ಕನ್ನಡ ಸಾಹಿತ್ಯಕ್ಕೆ ಮಹಿಳೆಯರ ಕೊಡುಗೆ, ಮೌಲ್ಯಪ್ರಜ್ಞೆ ಮತ್ತು ಸಾಮಾಜಿಕ, ಅರಿವು ಕೊನೆಗೆ ಸಮಾರೋಪ. ಆಶ್ಚರ್ಯದ ಸಂಗತಿಯೆಂದರೆ: ಅತ್ಯಂತ ಕ್ರಿಯಾಶೀಲ, ಗಂಭೀರ ಕವಿಯೊಬ್ಬರು; ಹೇಗೆ ತಮ್ಮ ಅರಿವನ್ನು ಬೇರೆ ಬೇರೆ ವಿಷಯಗಳಿಗೆ ಹರಿಬಿಟ್ಟು ಚಿಂತಿಸಿದರು, ಬರೆದರು ಎಂಬುದು ಅಚ್ಚರಿ ಪಡುವಂಥದ್ದು. ಆದ್ದರಿಂದಲೇ ನಾವು ಯಾವುದೇ ವಿಧವಾದ ತೊಡಕಿಲ್ಲದೆ ಲೀಲಾಜಾಲವಾಗಿ ಓದಿಕೊಳ್ಳುವಂತದ್ದು. ಅಷ್ಟರ ಮಟ್ಟಿಗೆ ವಿಷಯ ಸಮೃದ್ಧತೆ ಮತ್ತು ಮಂಡಿಸುವ ಕಲೆಗಾರಿಕೆ ದಟ್ಟಗೊಂಡಿದೆ. ಈ ಕೃತಿಯ ಕೆಲವು ಪ್ರಿಯವಾದ ಸಾಲುಗಳನ್ನು ಈಗಾಗಲೇ 'ಅರಿವಿನ ಬಾಗಿಲುಗಳನ್ನು ತೆರೆದವರು' ಎಂಬುದಕ್ಕೆ ಬಳಸಿಕೊಂಡಿರುವೆ. ಮುಂದುವರಿದು ಹೇಳಬೇಕೆಂದರೆ: ಒಂದು ಸಾವಿರ ವರ್ಷಗಳ ಸಾಹಿತ್ಯದ ಅರ್ಥಾತ್ ಕಾವ್ಯದ ಪ್ರೇರಣೆಗಳು ಗಾಢವಾಗಿ ಇಲ್ಲಿ ಒಳಗೊಂಡಿವೆ.

ಇದೇ ರೀತಿಯಲ್ಲಿ 'ವಿಮರ್ಶೆಯ ಪೂರ್ವಪಶ್ಚಿಮ, ಪರಿಶೀಲನ, ಗತಿಬಿಂಬ, ನವೋದಯ, ಅನುರಣನ, ದೇಸೀಯತೆಯಲ್ಲಿ ಅರಳಿದ ದತ್ತ ಪ್ರತಿಭೆ, ಅನುವಾದ ಕೃತಿಯಾದ ಫಕೀರ ಮೋಹನ ಸೇನಾಪತಿ ಹಾಗೂ ಸಂಪಾದಿತ ಕೃತಿಯಾದ ಕುವೆಂಪು: ರಸಚಿಂತನೆಯ ಮಿಂಚುಗಳು ಈ ಎಲ್ಲ ಕೃತಿಗಳಲ್ಲಿ ಅವರು ಕಂಡಿರುವ ನೋಟ ಹಾಗೂ ಅದನ್ನೆಲ್ಲ; ನಾನು ಒಬ್ಬ ಲೇಖಕನಾಗಿ, ಕವಿಯಾಗಿ ಹೀಗೆ ನೋಡಲು ಸಾಧ್ಯವಾಯಿತು ಎಂಬುದು ಒಟ್ಟು ಬರವಣಿಗೆಯ ಉದ್ದಕ್ಕೂ ಯಥೇಚ್ಚವಾಗಿ ದೊರಕುತ್ತದೆ. ಇದರಿಂದ ನಮ್ಮ ಕಾಲದ ಬಹುದೊಡ್ಡ ಲೇಖಕನ ಮತ್ತು ಕವಿಯ ಮನಸ್ಥಿತಿಯನ್ನು ಗ್ರಹಿಸಲು ಹತ್ತಾರು ನೋಟಗಳು ತೆರೆದುಕೊಳ್ಳುತ್ತವೆ ಎಂಬುದೇ; ಈ ಬರವಣಿಗೆಯ ಸಾರ್ಥಕತೆಯನ್ನು ಅವಲೋಕಿಸಿಕೊಳ್ಳಲು ಪ್ರೇರೇಪಿಸುತ್ತದೆ. ಈಗಾಗಲೇ ಸಮಗ್ರ ಗದ್ಯವು ಸಂಪುಟ ರೂಪಗಳಲ್ಲಿ ಓದುಗರಿಗಾಗಿ ತೆರೆದುಕೊಂಡಿವೆ. ಅರಿವು ಮತ್ತು ಗ್ರಹಿಕೆಗಳನ್ನು ಉದ್ದೀಪನಗೊಳಿಸುವ ವಸ್ತು ವೈವಿಧ್ಯ ಅವುಗಳಲ್ಲಿ ಶ್ರೀಮಂತವಾಗಿ ಅಡಕವಾಗಿವೆ. ಸಮಗ್ರ ಗದ್ಯದ ಸಂಪುಟದಲ್ಲಿ

'ಮಾಸ್ಕೊದಲ್ಲಿ ಇಪ್ಪತ್ತೆರಡು ದಿನ, ಅಮೇರಿಕಾದಲ್ಲಿ ಕನ್ನಡಿಗ, ಇಂಗ್ಲೆಂಡಿನಲ್ಲಿ ಚತುರ್ಮಾಸ, ಗಂಗೆಯ ಶಿಖರಗಳಲ್ಲಿ ಹೀಗೆ ಸುಮಾರು ಐನೂರು ಪುಟಗಳಲ್ಲಿ ಬೃಹತ್ ಸಂಪುಟವೇ ಆಗಿದೆ' ಇವು ಹಿಂದೆ ಬಿಡಿಬಿಡಿಯಾಗಿ ಪ್ರಕಟಗೊಂಡಿದ್ದಂಥವು. ೧೯೭೮ರಲ್ಲಿ ರಷ್ಯಾ ಪ್ರವಾಸದ ಸಮಯದಲ್ಲಿ 'ಟಾಲ್‌ಸ್ಟಾಯ್ ಎಸ್ಟೇಟ್ ಮ್ಯೂಸಿಯಂ' ನೋಡಿದಾಗಲೂ ಕುವೆಂಪು ಅವರು ಜಿ.ಎಸ್.ಎಸ್. ಅವರ ಮನಸ್ಸಿನ ತುಂಬ ಆವರಿಸಿಕೊಂಡು ಬಿಡುತ್ತಾರೆ. ಆಗ ಅವರು ಹೀಗೆ ಪ್ರತಿಕ್ರಿಯಿಸುವರು: "ಇಂಥದೇ ಹಸುರಿನ ದಟ್ಟಗಾಡಿನ ನಡುವೆ ಬೆಳೆದದ್ದು ಅವರ ಚೇತನ ಟಾಲ್‌ಸ್ಟಾಯ್‌ನಂತೆಯೇ ಕ್ರಾಂತಿಕಾರಕವಾದ ದಿಟ್ಟ ವ್ಯಕ್ತಿತ್ವ ಕುವೆಂಪು ಅವರದು. ಸತ್ಯದಲ್ಲಿ ಗಾತ್ರದಲ್ಲಿ ಅವರ ಕೃತಿಗಳು ಟಾಲ್‌ಸ್ಟಾಯ್ ಬರೆದ ಕೃತಿಗಳನ್ನು ನೆನಪಿಸುತ್ತವೆ. ಟಾಲ್‌ಸ್ಟಾಯ್‌ನಂತೆಯೇ ಕುವೆಂಪು ಅವರೂ ದಟ್ಟವಾದ ಅರಣ್ಯಗಳ ನಡುವೆ ತಮ್ಮ ದಾರಿಗಳನ್ನು ದಿಟ್ಟತನದಿಂದ ತೆರೆದು ನಡೆದವರು.

ಟಾಲ್‌ಸ್ಟಾಯ್ ಅವರ ಈ 'ಎಸ್ಟೇಟ್ ಮ್ಯೂಸಿಯಂ' ಜಗತ್ತಿನ ಅತಿದೊಡ್ಡ ಸಂರಕ್ಷಿತ ಸ್ಮಾರಕವಾಗಿದೆ. ನಾಲ್ಕು ನೂರು ಹೆಕ್ಟೇರುಗಳಷ್ಟು ವಿಸ್ತಾರವಾದ ಈ ಎಸ್ಟೇಟನ್ನು ಹಾಗೆಯೇ ಉಳಿಸಿಕೊಂಡು, ರಷ್ಯಾದ ಮುಹಾಕ್ರಾಂತಿಗೆ, ಹಾಗೂ ತತ್ಪರಿಣಾಮವಾದ ಇಂದಿನ ಪ್ರಗತಿಗೆ ಪ್ರೇರಕರಲ್ಲೊಬ್ಬನಾದ ಈ ಮಹಾಲೇಖಕನ ನೆನಪನ್ನು ಸ್ಥಾಯಿಯಾಗಿಸಲಾಗಿದೆ." ಎಂದು ಎದೆ ತುಂಬಿ ಪ್ರಸ್ತಾಪಿಸುವರು. ಹೀಗೆ ಹೇಳುತ್ತಲೇ ಗಾರ್ಕಿ, ಪುಷ್ಕಿನ್, ಲೆನಿನ್ ಮ್ಯೂಸಿಯಂಗಳನ್ನೆಲ್ಲ ನೋಡಿದಮೇಲೆ; ಅವರು ವಿಷಾದದ ಮೊರೆ ಹೋಗುವರು. ಅದಕ್ಕೆ ಮುಖ್ಯಕಾರಣ: "ನಮ್ಮಲ್ಲಿ ಕವಿಗಳನ್ನು ಕುರಿತು ಈ ಬಗೆಯ ಸ್ಮಾರಕಗಳು ಎಷ್ಟಿವೆ? ರಾಘವಾಂಕ ಸಮಾಧಿ ಬೇಲೂರಿನ ದಾರಿಯ ಬದಿಯ ತಿಪ್ಪೆಗುಂಡಿಯಲ್ಲಿ ಅಡಗಿಹೋಗಿದೆ. ಪಂಪನ ಸಮಾಧಿ ಆಂಧ್ರಪ್ರದೇಶದಲ್ಲಿ ಎಲ್ಲೋ ಇದೆ ಎಂದು ಕೆಲವರು; ಅದು ಪಂಪನದೇ ಅಲ್ಲ ಎಂದು ಕೆಲವರು. ನಮ್ಮವರ ನಿರಭಿಮಾನ, ದೌರ್ಬಲ್ಯ ನಾಚಿಕೆ ತರಿಸುತ್ತದೆ, ಮನಸ್ಸನ್ನು ಕೊರೆಯುತ್ತದೆ. ಈ ಕೊರೆತವನ್ನು ಅನುಭವಿಸುತ್ತ ಇದ್ದಹಾಗೆ ಎಂಟುಗಂಟೆಯ ವೇಳೆಗೆ ಮಾಸ್ಕೋ ಮಹಾನಗರದೊಳಗೆ ಕಾರು ಓಡುತ್ತಿತ್ತು. ಬೆಳಕಿನ ಇಟ್ಟಿಗೆಯಿಂದ ಕಟ್ಟಿದ್ದವೆಂಬಂತೆ ಹೆಡೆಯೆತ್ತಿದ್ದ ಸಾವಿರ ಕಣ್ಣುಗಳ ಮಹಲುಗಳ ಬದಿಗೆ ಗಾಲಿ ಉರುಳಿ, ಹೋಟೆಲಿನ ನನ್ನ ಕೋಣೆಗೆ ಸೇರಿ ನೆನಪಿನ ಗೂಡಿನೊಳಗೆ ಮಲಗಿದೆ."

ಇಂಥ ನೋಟ ಸೂಕ್ಷ್ಮಜ್ಞರಾದ ಜಿ.ಎಸ್.ಎಸ್. ಅಂಥವರಿಗೆ ಮಾತ್ರ ಬರಲುಸಾಧ್ಯ. ಹಾಗೆಯೇ 'ಬೆಳಕಿನ ಇಟ್ಟಿಗೆಯಿಂದ ಕಟ್ಟಿದ್ದ' ಮತ್ತು 'ನೆನಪಿನ

ಗೂಡಿನೊಳಗೆ ಮಲಗಿದೆ' ಎಂಬ ಚಿತ್ರವೂ ಎಷ್ಟು ಮಾರ್ಮಿಕವಾಗಿದೆ. ವರ್ತಮಾನದ ಎಲ್ಲ ಆಗುಹೋಗುಗಳಿಗೆ ಸ್ಪಂದಿಸುತ್ತ ಬಂದ ಜಿ.ಎಸ್.ಎಸ್. ಅಂಥವರ ಮನಸ್ಸು ಎಂತೆಂಥ ನೆನಪುಗಳ ಬಾಗಿಲು ತೆರೆಸುತ್ತದೆ. ಅಂಥದಕ್ಕೆ ಯಥೇಚ್ಛವಾಗಿ ಅವರ ನೆನಪಿನ ಗುಚ್ಛಗಳನ್ನು ಇಲ್ಲಿ ದಾಖಲಿಸಬಹುದು. ಯಾಕೆಂದರೆ; ಹಿಂದೆ ವಿವರಿಸಿದಂತೆ; ಪ್ರವಾಸ ಎಂದರೆ ಯಾವಾಗಲೂ ತುದಿಗಾಲಿನಲ್ಲಿ ನಿಂತಿರುವಂಥವರು.

'ಗಂಗೆಯ ಶಿಖರಗಳಲ್ಲಿ' ಕೃತಿಯಲ್ಲಿ 'ಗಂಗೆಯಲ್ಲಿ ದೀಪಮಾಲೆ' ಎಂಬ ಅಧ್ಯಾಯವಿದೆ. ಎಂಥ ಅದ್ಭುತ ನೋಟದಿಂದ ಕೂಡಿದೆ ಅನ್ನಿಸಿತು. ಅದನ್ನು ಇಲ್ಲಿ ಉಲ್ಲೇಖಿಸಬೇಕೆನ್ನಿಸುತ್ತದೆ: "ಮಹಾಭಾರತದ ನೆನಪಿನಲ್ಲಿ ನಾವು ಮುಳುಗಿದರೂ, ಹರಿದ್ವಾರದಲ್ಲಿನ ಬೇಸಿಗೆಯ ತಾಪವೇನೂ ತಣ್ಣಗಾಗಲಿಲ್ಲ.... ಹರಿಕಿಪ್ಯೆರಿ ಎಂಬ ಹೆಸರಿನ ಗಂಗಾತೀರದಲ್ಲಿ, ವೇಗವಾಗಿ ಮತ್ತು ವಿಸ್ತಾರವಾಗಿ ಹರಿಯುವ ನದಿಯ ನೀರಿನ ಮೇಲೆ ಸಂಜೆಯ ಸೂರ್ಯನ ಬದಲು, ತಳತಳಿಸುತ್ತ ತಾನೂ ಹರಿಯುವಂತೆ ಭಾಸವಾಗುತ್ತಿತ್ತು.... ಗಂಗೆಗೆ ಆರತಿ ನಡೆಯುವುದು ಇಲ್ಲಿಯೇ.... ಗಂಗೆಯ ದೇವಸ್ಥಾನಕ್ಕೆ ಎದುರಿನ ದಡದ ಮೆಟ್ಟಿಲುಗಳ ಮೇಲೆ ಹೇಗೋ ದಾರಿ ಮಾಡಿಕೊಂಡು, ನೀರಿನಲ್ಲಿ ಕಾಲುಗಳನ್ನು ಇಳಿಯಬಿಟ್ಟುಕೊಳ್ಳುವಷ್ಟು ಹತ್ತಿರದಲ್ಲಿ ಕುಳಿತೆವು. ಎಲ್ಲರ ಕೈಯಲ್ಲೂ ಹೂವಿನ ದೀಪದ ದೊನ್ನೆಗಳು.... ಉರಿಯುವ ದೀಪದ ದೊನ್ನೆಯನ್ನು ನೀರಿನಲ್ಲಿ ತೇಲಿ ಬಿಡಲು ಶುರು ಮಾಡಿದರು. ಸಂಜೆಯಾಗುತ್ತಿದ್ದಂತೆ ನೂರಲ್ಲ ಸಾವಿರ ಸಾವಿರ ಅಲ್ಲ ಲಕ್ಷ ಅನ್ನುವ ಸಂಖ್ಯೆ ಜನ ನದಿಯ ಎರಡೂ ಬದಿಗೆ ಪೂಜೆಯನ್ನು ವೀಕ್ಷಿಸಲು ಕಿಕ್ಕಿರಿದಿದ್ದರು." ಹೀಗೆ ಅಲ್ಲಿಯ ಚಿತ್ರ ನಾವು ಅಮೋಘತೆಯನ್ನು ಪಡೆಯುತ್ತ ಹೋಗುತ್ತದೆ. ಹೀಗೆ ಅವರ ನೆನಪಿನ ತುಂಬ ಸ್ಮರಣೀಯವಾಗಿದ್ದ ಎಂತೆಂಥ ಅಮೂಲ್ಯ ಚಿತ್ರಣಗಳನ್ನೆಲ್ಲ ಬರವಣಿಗೆಯಲ್ಲಿ ದಾಖಲಿಸಿಬಿಟ್ಟಿದ್ದಾರೆ. ಈ ಪಟ್ಟಿಯಿಂದ ಅವರ ದೀರ್ಘ ಬದುಕಿನುದ್ದಕ್ಕೂ, ಓದು, ಬರವಣಿಗೆ ಮತ್ತು ಪ್ರವಾಸಕ್ಕೆ ಸಂಬಂಧಿಸಿದಂತೆ ಎಷ್ಟು ಅತೃಪ್ತಿಯನ್ನು ತುಂಬಿಕೊಂಡಿದ್ದರು. ಲಂಕೇಶ್ ಅವರ ಬಳಿ "ಚೆನ್ನಾಗಿ ಬದುಕಿದ್ದೇನೆ. ಸಾವು ಬರಲಿ ಬಿಡಿ. ಅದಕ್ಕೆ ಯಾಕೆ ಭಯ ಪಡಬೇಕು" ಎಂದು ಹೇಳಿದ ಹಿರಿಯ ಮನಸ್ಸು; ಅಂತರಂಗದಲ್ಲಿ ಗುನುಗುನಿಸುತ್ತಿತ್ತು ಅನ್ನಿಸುತ್ತದೆ; ನಾನು ಬದುಕಿದ್ದೂ ಸಾಲದು, ಬರೆದದ್ದು ಸಾಲದು ಹಾಗೆಯೇ ನೋಡಿದ್ದು ಸಾಲದು ಎಂದು. ಯಾಕೆಂದರೆ; ಬದುಕಿನ ತೀವ್ರತೆ ಅವರಲ್ಲಿ ಅಷ್ಟು ಗಾಢವಾಗಿತ್ತು.

ಹೀಗೆ ಅತ್ಯಂತ ಶ್ರೀಮಂತಿಕೆಯಿಂದ ಯೋಚಿಸಿದ, ಬರೆದ, ಹತ್ತು ದಿಕ್ಕುಗಳನ್ನು ನೋಡಿದ ಬಹುದೊಡ್ಡ ಕವಿಯೊಬ್ಬರು ದಾವಣಗೆರೆಯಲ್ಲಿ ನಡೆದ ಅಖಿಲಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದವರು. ಅದಕ್ಕೇನು ಅವರು ಉತ್ಸವಮೂರ್ತಿಯಾಗುತ್ತಿದ್ದೇನೆಂದು ಬೀಗಲಿಲ್ಲ. ಆದರೆ ಸಮ್ಮೇಳನದಲ್ಲಿ ಸೇರಿರುವ ಲಕ್ಷಾಂತರ ಜನರಲ್ಲಿ ಕೊನೆಯ ಪಕ್ಷ ಕೆಲವು ಸಾವಿರ ಮನಸ್ಸುಗಳಿಗೆ ತಲುಪುವಂತೆ; ಎಂಥ ಸಂದೇಶವನ್ನು ಸಿದ್ಧಪಡಿಸುವುದು ಎಂದು ಅದಕ್ಕೆ ಎಷ್ಟು ವಿಲವಿಲನೆ ಒದ್ದಾಡಿದರು. ಅವರಿಗೆ ಗೊತ್ತಿತ್ತು ಇಲ್ಲಿಯವರೆವಿಗೂ ಸಮ್ಮೇಳನದ ಅಧ್ಯಕ್ಷರು ದಾಖಲಿಸಿರುವ 'ಅಧ್ಯಕ್ಷ ಭಾಷಣಗಳು' ಗಂಭೀರವಾಗಿದ್ದರೂ; ಎಲ್ಲೋ ಮೂಲೆಗೆ ಬಿದ್ದಿವೆ. ಅವುಗಳಲ್ಲಿ ತಮ್ಮದೂ ಒಂದಾಗಬಹುದೆಂದು. ಎಷ್ಟು ಪೇಚಾಡಿದ್ದರು. ಆದರೂ ಸಾಧ್ಯವಾದ ಮಟ್ಟಿಗೆ ರಚನಾತ್ಮಕವಾಗಿರಲೆಂದು ಭಾಷಣ ಸಿದ್ಧಪಡಿಸಿ ತಮಗೆ ಪ್ರಿಯರಾದ ವಿದ್ಯಾರ್ಥಿಮಿತ್ರರನ್ನು ಕರೆಸಿ ಚರ್ಚಿಸಿದವರು; ಅತೃಪ್ತಿಯಿಂದಲೇ ಮುಗಿಸಿ 'ಕೊನೆಗೂ ಎಲ್ಲವೂ ಇಷ್ಟೇ' ಎಂದು ಸಮಾಧಾನವನ್ನು ಆರೋಪಿಸಿಕೊಂಡ ದೊಡ್ಡ ಮನಸ್ಸು.

ಆದರೂ ಒಂದಂತೂ ಸತ್ಯ; ಒಬ್ಬ ದೊಡ್ಡ ಲೇಖಕನು ಹತ್ತಾರು ಆಶಯಗಳನ್ನು ತುಂಬಿಕೊಂಡು, ಸಾಹಿತ್ಯ, ಭಾಷೆ, ಸಂಸ್ಕೃತಿ ಹಾಗೂ ಜನಜೀವನ ಕುರಿತು ಕನಸುಗಳನ್ನು ವಿಸ್ತರಿಸುವ ಭಾಷಣ, ಅರ್ಥಾತ್ ಚಾರಿತ್ರಿಕ ಗದ್ಯಭಾಗ.